SUPPLEMENTARY AND ADDITIONAL DEMANDS FOR GRANTS FOR 1965-66 SECOND INSTALMENT.

Presentation

Sri S. R. KANTHI.—On behalf of the Minister for Finance, I beg to present the Statement showing Supplementary and Additional Demands for Grants for the year 1965-66 (Second Instalment) as required under article 205 of the Constitution of India.

Mr. SPEAKER.—Statement showing Supplementary and Additional Demands for Grants for the year 1965–66 (Second Instalment) is presented.

Now, we continue the debate. Sri Muckannappa has already taken up a long time and he may conclude early.

Member's Representation

Sri C. J. MUCKANNAPPA (Sira).—Sir, before I resume my speech, I want to submit that the Minister for Social Welfare has resigned. This House requires at least a statement from the Minister about this.

Mr. SPEAKER.—Not during the course of the Debate.

Sri C. J. MUCKANNAPPA.—If she is not willing to make a statement, it is left to her.

Mr. SPEAKER.—Order, order.

MOTION OF THANKS TO THE GOVERNOR'S ADDRESS.

(Debate continued)

† ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸ್ವಾಮಿ, ನಿನ್ನೆ ಮೈಸೂರು ಸಂಸ್ಥಾನದ ಹಣಕಾಸಿನ ಪರಿಸ್ಥಿತಿ, ಮೈಸೂರು ಸರ್ಕಾರದವರು ತಮ್ಮ ಮೂರು ಯೋಜನೆಗಳಲ್ಲಿ ಸಾಧಿಸಿದಂತಹ ಕೆಲಸಗಳ ವಿಷಯದಲ್ಲಿ ನಾನು ಮಾತನಾಡುತ್ತಿದ್ದೆ. ಈಗ ಇವರು ಏನು ಸಾಧನೆ ಮಾಡಿದ್ದಾರೆಂಬುದನ್ನು ನಾನು ಹೇಳುತ್ತೇನೆ. ಮೂರು ಯೋಜನೆಗಳು ಮುಗಿದರೂ ಕೂಡ ಇವರು ಹೆಚ್ಚು ಆಹಾರವನ್ನು ಬೆಳೆಯಲಿಕ್ಕಾಗಲಿಲ್ಲ. ಆಹಾರವನ್ನು ಪರದೇಶಗಳಿಂದ ತರಿಸುತ್ತಿದ್ದಾರೆ. ಮೈನರ್ ಇರ್ರಿಗೇಷನ್, ಅಗ್ರಿಕಲ್ಚರ್ ಬಾಬುಗಳಲ್ಲಿ ಪ್ರಗತಿ ಸಾಧಿಸಿದ್ದೇವೆಂದು ಹೇಳುತ್ತಾರೆ. ಸರ್ಕಾರದವರು ಇದುವರೆಗೂ ಏನು ಮಾಡುತ್ತಿದ್ದರೆಂದು ನಾನು ಪ್ರಶ್ನೆ ಮಾಡುತ್ತೇನೆ. ಇವರಿಗೆ ಇಷ್ಟು ಹಣ ಕೊಟ್ಟು, ಇಷ್ಟು ಸಿಬ್ಬಂದಿ ಕೊಟ್ಟು, ಇಷ್ಟೆಲ್ಲಾ ತೆರಿಗೆಗಳನ್ನು ಹಾಕುವುದಕ್ಕೆ ಅವಕಾಶಮಾಡಿಕೊಟ್ಟು, ಕೋಟಿ ಕೋಟಿ ರೂಪಾಯಿಗಳ ಹಣ ಇವರ ಕೈಗೆ ಕೊಟ್ಟಿದ್ದರೂ ಇವತ್ತು ಆಹಾರವಿಲ್ಲವೆಂದು ಜನತೆಗೆ ಹೇಳುವುದಕ್ಕೆ ಇವರು ಯಾರು ? ಇವರು ಇಲ್ಲಿರುವುದಕ್ಕೆ ಅರ್ಹರೇ ಎಂದು ನಾನು ಬಹಳ ವಿನಯದಿಂದ ಕೇಳುತ್ತೇನೆ. ಇವತ್ತು ಹಣಕಾಸಿನ ಪರಿಸ್ಥಿತಿಯನ್ನು ಸ್ವಲ್ಪ ಲೆಕ್ಕ ಹಾಕಿದರೆ ಇವರು ಏನೇನು ಮಾಡಿದ್ದಾರೆಂಬುದು ಚೆನ್ನಾಗಿ ವ್ಯಕ್ತವಾಗುತ್ತದೆ. ಈಗಾಗಲೇ 1965-66ನೇ ಸಾಲಿಗೆ ಸಪ್ಲಿಮೆಂಟರಿ ಗ್ರ್ಯಾಂಟ್ ಕೇಳುತ್ತಿದ್ದಾರೆ. ಅದನ್ನು ಈಗಾಗಲೇ ಸಭೆಯಲ್ಲಿ ಇವತ್ತು ಮಂಡಿಸಿದ್ದಾರೆ. ಪ್ರತಿವರ್ಷ ಆಡಿಟ್ ವರದಿಯಲ್ಲಿ ವ್ಯವಸಾಯ ಇಲಾಖೆಗೆ, ಆಹಾರ ಇಲಾಖೆಗೆ, ಹಾಗೂ ಕೈಗಾರಿಕೆ ಇಲಾಖೆಗೆ ಏನು ಹಣವನ್ನು ಕೊಟ್ಟಿದ್ದರೂ ಅದರಲ್ಲಿ ಎಷ್ಟೋ ಭಾಗ ಲ್ಯಾಪ್ಸ್ ಆಗುತ್ತಿದೆ ಎಂದು ಹೇಳುತ್ತಿದ್ದಾರೆ. ಇವರು

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಅಂಥಾದ್ದನ್ನು ವರ್ಷಾಂತ್ಯದಲ್ಲಿ, ಫೈನಾನ್ಷಿಯಲ್ ಇಯರ್ ಎಂಡಿಂಗ್‌ನಲ್ಲಿ, ವರ್ಷದ ಕೊನೆಯ ಘಳಿಗೆಯಲ್ಲಿ ಮಧ್ಯರಾತ್ರಿ ಸರೆಂಡರ್ ಮಾಡುತ್ತಾರೆ. ಇದರಿಂದ ಇವರಿಗೆ ಸಪ್ಲಿಮೆಂಟರಿ ಗ್ರ್ಯಾಂಟು ಏಕೆ ಬೇಕು, ಅಡಿಷನಲ್ ಗ್ರ್ಯಾಂಟು ಏಕೆ ಬೇಕು ? ಈ ಸಭೆಯ ಅನುಮತಿ ಪಡೆದು ಸರ್ಕಾರದಿಂದ ಒದಗಿಸಿದಂತಹ ಪೂರ್ತಿ ಮೊಬಲಗನ್ನು ವರ್ಷದ ಆಖೈರಿನೊಳಗೆ ಪ್ರತಿಯೊಂದು ಇಲಾಖೆಯಲ್ಲಿ ಖರ್ಚು ಮಾಡತಕ್ಕ ಚೈತನ್ಯ, ದಕ್ಷತೆ ಇಲ್ಲವಿದ್ದರೆ, ಇವರು ಇಲ್ಲದ್ದು ಏನು ಪ್ರಯೋಜನವೆಂದು ಕೇಳುತ್ತೇನೆ. ಮೂರು ಯೋಜನೆಗಳು ಮುಗಿದರೂ, ಇದುವರೆಗೂ ಎಂಟು ಮಂತ್ರಿಮಂಡಲಗಳು ಅಧಿಕಾರಕ್ಕೆ ಬಂದರೂ ಕೂಡ ಇವತ್ತು ಆಹಾರದಲ್ಲಿ ಸ್ವಪರಿಪೂರ್ಣತೆಯನ್ನು ಇವರು ಸಾಧನೆ ಮಾಡಿಲ್ಲವೆಂದು ಹೇಳಿದರೆ ಇವರು ಏತಕ್ಕಾಗಿ ಇಲ್ಲವರೆಂದು ನನಗನ್ನಿಸುತ್ತದೆ. ಇವರು ಎಲ್ಲೋ ಶೋಭಾಯ ಮಂತ್ರಿಗಳಾಗಿ ಶೋಭಾಯಿಗಳಂತೆ ಇಲ್ಲದ್ದಾರೆಂದು ನಾನು ಹೇಳಬೇಕಾಗಿದೆ.

ಇವತ್ತು ರೋಡ್ ಟ್ರಾನ್ಸ್‌ಪೋರ್ಟ್ ವಿಷಯದಲ್ಲಿ ನಾನು ಒಂದು ಪ್ರಶ್ನೆ ಕೇಳಿದರೆ ಸಂಬಂಧಪಟ್ಟ ಮಂತ್ರಿಗಳಿಗೆ ನಾಲ್ಕನೇ ಪಂಚವಾರ್ಷಿಕ ಯೋಜನೆಯಲ್ಲಿ ಆ ಇಲಾಖೆಗೆ ಸಂಬಂಧಪಟ್ಟಹಾಗೆ ಸರಿಯಾದ ಅಂಕಿ ಅಂಶಗಳನ್ನು ನಮ್ಮ ಮುಂದಿಟ್ಟು ಸಮರ್ಥನೆ ಮಾಡಿಕೊಳ್ಳುವುದಕ್ಕಾಗಲಿಲ್ಲ ಅಂದಮೇಲೆ ನಾಲ್ಕನೇ ಪಂಚವಾರ್ಷಿಕ ಯೋಜನೆಯಲ್ಲಿ 500 ಕೋಟಿ ರೂಪಾಯಿಗಳನ್ನು ಏತಕ್ಕಾಗಿ ಇಟ್ಟಿದ್ದಾರೆಂಬುದು ಸರಿಯಾಗಿ ನನಗೆ ಅರ್ಥವಾಗಲಿಲ್ಲ. ಈಗಾಗಲೇ ಇನ್ನು ಒಂದೆರಡು ತಿಂಗಳಲ್ಲಿ ಮೂರನೇ ಪಂಚವಾರ್ಷಿಕ ಯೋಜನೆಯ ಅವಧಿ ಮುಗಿಯುತ್ತದೆ. ಆದರೆ ಪ್ಲಾನಿಂಗ್ ಮಿಷನ್ನಿನ ಮುಂದೆ ಮೈಸೂರು ಸಂಸ್ಥಾನದ ನಾಲ್ಕನೆಯ ಪಂಚವಾರ್ಷಿಕ ಯೋಜನೆಯ ಗಾತ್ರವೇನೆಂಬುದನ್ನು ಇನ್ನೂ ನಿಗದಿ ಮಾಡಲಿಲ್ಲವೆಂದರೆ ಬಹಳ ನಾಚಿಕೆಗೇಡು. ಇವರು ಇದುವರೆಗೂ ಏನು ಮಾಡುತ್ತಿದ್ದಾರೆಂದು ನಾನು ಕೇಳಬೇಕಾಗಿದೆ. ಇದರಿಂದ ಇವರ ಸ್ಥಿತಿಗತಿಗಳು ಏನಾಗುತ್ತದೋ ಎಂಬುದೂ ಸಹ ಗೊತ್ತಿಲ್ಲ. ಕೇಂದ್ರ ಸರ್ಕಾರದ ಹಣಕಾಸಿನ ಸಚಿವರೇ ಇವರ ಇಂಡಸ್ಟ್ರೀಸ್‌ಗಳನ್ನು ಮಾರಾಟ ಮಾಡಿ, ಇಲ್ಲಿನ ಕಾರ್ಖಾನೆಗಳನ್ನು ಮಾರಾಟ ಮಾಡಿ ಎಂಬುದಾಗಿ ಕೇಳುತ್ತಿದ್ದಾರೆ. ಭದ್ರಾವತಿ ಐರನ್ ಅಂಡ್ ಸ್ಟೀಲ್ ವರ್ಕ್ಸ್‌ನ್ನು ಕೇಂದ್ರ ಸರ್ಕಾರದ ಹಣಕಾಸಿನ ಸಚಿವರೇ ಮಾರಾಟ ಮಾಡಿ ಕೇಂದ್ರ ಸರ್ಕಾರಕ್ಕೆ ಕೊಡುವ ಹಣವನ್ನು ಕೊಡಿ ಎಂದು ಇವರನ್ನು ಈಗಾಗಲೇ ಕೇಳುತ್ತಿದ್ದಾರೆ. 10 ಕೋಟಿ ರೂಪಾಯಿಗಳ ಸಾಲವನ್ನು ಕೇಂದ್ರ ಸರ್ಕಾರಕ್ಕೆ ಒಂದೇ ಕಂತಿನಲ್ಲಿ ತೀರಿಸಲಿಕ್ಕೆ ಆಗದಿದ್ದರೆ ಭದ್ರಾವತಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯನ್ನು ಮಾರಾಟ ಮಾಡಬೇಕೆಂದು ಕೇಂದ್ರದವರು ಇವರಿಗೆ ಹೇಳಿದ್ದಾರೆಂದ ಮೇಲೆ ಇವರು ಮೈಸೂರು ರಾಜ್ಯದ ಹಣಕಾಸಿನ ಪರಿಸ್ಥಿಯನ್ನು ಯಾವ ಒಂದು ಮಟ್ಟದಲ್ಲಿಟ್ಟಿದ್ದಾರೆಂಬುದು ಚೆನ್ನಾಗಿ ವ್ಯಕ್ತವಾಗುತ್ತದೆ. ಸರ್ ಎಂ. ವಿಶ್ವೇಶ್ವರಯ್ಯನವರು ಸ್ಥಾಪನ ಮಾಡಿದಂತಹ ಭದ್ರಾವತಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯನ್ನು ಕೇಂದ್ರ ಸರ್ಕಾರಕ್ಕೆ ಸಾಲ ತೀರಿಸುವ ಉದ್ದೇಶದಿಂದ ಮಾರಾಟ ಮಾಡತಕ್ಕ ಪ್ರಸಂಗ ಬಂದಿರುವಾಗ ಇವರು ಕೈಗಾರಿಕೆಯಲ್ಲಿ ಪ್ರಗತಿ ಸಾಧನೆ ಮಾಡಿದ್ದೇನು, ಇದರಿಂದ ಯಾವರೀತಿ ಆರ್ಥಿಕಾಭಿವೃದ್ಧಿಯಾಗುತ್ತದೆ ; ಎಷ್ಟರ ಮಟ್ಟಿಗೆ ಪಂಚವಾರ್ಷಿಕ ಯೋಜನೆಗಳಿಂದ ದೇಶಾಭಿವೃದ್ಧಿ ಕಾರ್ಯಗಳನ್ನು ಮಾಡುತ್ತಾರೋ ನನಗಂತೂ ಗೊತ್ತಾಗಲಿಲ್ಲ. ಇದಕ್ಕಿಂತಲೂ ಸೋಜಿಗದ ಸಂಗತಿ, ಮನಸ್ಸಿಗೆ ವ್ಯಥೆಯನ್ನುಂಟುಮಾಡುವ ಪ್ರಸಂಗ ಮತ್ತೊಂದು ಬೇರೆ ಇಲ್ಲ.

ರಾಜ್ಯಪಾಲರ ಭಾಷಣದಲ್ಲಿ ಬೆಳಗಾಂನಲ್ಲಿ ಆಗತಕ್ಕ ಅಲ್ಯೂಮಿನಿಯಂ ಫ್ಯಾಕ್ಟರಿ, ಮಂಗಳೂರಿನಲ್ಲಿ ಆಗತಕ್ಕ ಗೊಬ್ಬರದ ಕಾರ್ಖಾನೆ, ಇವು ಬಿಟ್ಟರೆ ಇನ್ನಾವ ಕಾರ್ಖಾನೆಗಳನ್ನು ಇವರು ಎಲ್ಲೆಲ್ಲಿ ತೆರೆಯುತ್ತಾರೆಂಬುದು ಇಲ್ಲವೇ ಇಲ್ಲ. ನಿಜವಾಗಿ ಇವರ ಕೈಯ್ಯಲ್ಲಿ ಸಾಧ್ಯವಾಗಲಾರದು ಎಂದು ನಾನು ಹೇಳಬಹುದು. ಮಂತ್ರಿಗಳು ಮೊನ್ನೆ ಪ್ರಶ್ನೋತ್ತರಗಳ ಸಮಯದಲ್ಲಿ ಮಂಗಳೂರಿನಲ್ಲಿ ಒಂದು ಗೊಬ್ಬರ ಕಾರ್ಖಾನೆಯನ್ನು ತೆರೆಯುತ್ತೇವೆ, ರೈತರಿಗೆ ಬೇಕಾದಂಥ ಉತ್ತಮ ಗೊಬ್ಬರವನ್ನು ಉತ್ಪತ್ತಿ ಮಾಡುತ್ತೇವೆಂದು ಭಾರಿ ಉದ್ದನೆ ಮಾತುಗಳಲ್ಲಿ ಹಾಗೂ ದೊಡ್ಡ ದೊಡ್ಡ ಭಾಷಣಗಳಲ್ಲಿ ಹೇಳಿದರೇ ಹೊರ್ತು ಇವರು ಅಂತಹ ಯಾವ ಕೆಲಸವನ್ನೂ ಮಾಡುತ್ತಿಲ್ಲ. ಇವರು ಆ ರೀತಿಯಲ್ಲಿ ಹೇಳಿಕೊಂಡೇ ವರ್ಷವೆಲ್ಲಾ ಕಾಲಹರಣ ಮಾಡುತ್ತಿದ್ದಾರೆ. ಜನತೆಗೆ ಕೊಟ್ಟಂಥ ಮಾತುಗಳನ್ನು ಉಳಿಸಿಕೊಳ್ಳುವುದಕ್ಕೆ ಇವರು ಪಂಚವಾರ್ಷಿಕ ಯೋಜನೆಗಳಲ್ಲಿ ಏನೇನು ಸಾಧನೆ ಮಾಡಿದ್ದಾರೆಂದರೆ, ಅಂಥಾದ್ದು ಏನೂ ಇಲ್ಲ. ಯೋಜನಾ ಕಾಮಗಾರಿಗಳನ್ನು ಪೂರ್ತಿಯಾಗಿ ಸಾಧನೆ ಮಾಡುವ ಕಡೆ ಇವರ ದೃಷ್ಟಿಯೇ ಇಲ್ಲವೆಂದು ಇವತ್ತು ಹೇಳಬೇಕಾಗಿದೆ. ಮಂತ್ರಿಮಂಡಲದಲ್ಲಿಯೇ ಇವತ್ತು ಹೊಂದಾಣಿಕೆ ಇಲ್ಲವೆಂದು ಹೇಳಬಹುದು. ಅಲ್ಲಿ ಒಬ್ಬರಿಗೊಬ್ಬರಿಗೇ

ಆಗುವುದಿಲ್ಲ. ಅಲ್ಲದೆ ಒಬ್ಬರು ಒಂದು ಕೆಲಸ ಮಾಡುವುದಕ್ಕೆ ಹೋದರೆ ಇನ್ನೊಬ್ಬರು ಅದಕ್ಕೆ ಮುಟ್ಟುಗೋಲು ಹಾಕುತ್ತಾರೆ. ಇಂತಹ ಮಂತ್ರಿ ಮಂಡಲ ನಮ್ಮ ರಾಜ್ಯದಲ್ಲಿದೆ. ಆದ ಮೇಲೆ ನಿಜವಾಗಿ ಇಂತಹ ಮಂತ್ರಿ ಮಂಡಲ ಮೈಸೂರು ಜನತೆಯ ಅಭ್ಯುದಯವನ್ನು ಸಾಧನೆ ಮಾಡುವುದಕ್ಕೆ ಸಾಧ್ಯವೇ ಎಂದು ನಾನು ಕೇಳುತ್ತೇನೆ. ಈಗ ಇವರು ಕೈಗಾರಿಕೆಗಳನ್ನು, ಕಾರ್ಖಾನೆಗಳನ್ನು ಮಾರಾಟ ಮಾಡುತ್ತಿದ್ದಾರೆ. ಆದರೆ ಇನ್ನೇನನ್ನೂ ಮಾರಾಟ ಮಾಡುವುದಕ್ಕೆ ಇವರಿಗೆ ಸಾಧ್ಯವಿಲ್ಲವೆಂದು ನಾನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಯಾವ ಒಂದು ಉನ್ನತ ಸ್ಥಾನದಲ್ಲಿರುವ ಅಧಿಕಾರಿಗಳನ್ನು ಕೇಳಿದರೂ, ನಮಗೆ ಸಂಬಳ ಕಡಿಮೆ, ಪ್ರಮೋಷನ್ ಇಲ್ಲ, ನಮಗೆ ದುಡ್ಡು ಕೊಟ್ಟಿಲ್ಲ, ಡಿ.ಎ. ಕೊಟ್ಟಿಲ್ಲ, ಅಪಾಯಿಂಟ್‌ಮೆಂಟ್ ಮಾಡಲಿಲ್ಲವೆಂದು ಹೇಳುತ್ತಾರೆ. ಈ ಆಹಾರದ ಇಲಾಖೆಯು ಯಾವುದೇ ಯೋಜನೆಯನ್ನಾಗಲಿ ಸಂಪೂರ್ಣವಾಗಿ ಫಲಪ್ರದವಾಗಿ ಮಾಡುವುದಕ್ಕೆ ಪ್ರಯತ್ನ ಮಾಡಿದ್ದೀರಾ ? ಇವರ ಹಣಕಾಸಿನ ಪರಿಸ್ಥಿತಿ ನೋಡಿದರೆ 48 ಕೋಟಿ ರೂಪಾಯಿಗಳಿಂದ 50 ಕೋಟಿ ರೂಪಾಯಿಗಳವರೆಗೆ ಸರ್ಕಾರಕ್ಕೆ ಬರತಕ್ಕಂಥ ಅರಿಯರ್ಸ್ ವಸೂಲಾಗದೆ ಹಾಗೆಯೇ ನಿಂತಿದೆ. ಗುಲ್ಬರ್ಗ ಡಿವಿಷನ್ ಒಂದರಲ್ಲೇ 6 ಕೋಟಿ ರೂಪಾಯಿಗಳಿಂದ 7 ಕೋಟಿ ರೂಪಾಯಿಗಳವರೆಗೆ ಮೈಸೂರು ಸರ್ಕಾರದ ಬೊಕ್ಕಸಕ್ಕೆ ಬರಬೇಕಾಗಿದೆ. ಶ್ರೀಮಂತರಿಂದ ಕೋಟ್ಯಾಂತರ ರೂಪಾಯಿ ಬಾಕಿ ಬರಬೇಕಾಗಿದೆ. ಇದರಲ್ಲಿ ಒಂದು ರೂಪಾಯಿನ್ನಾದರೂ ಸಹಿತ ವಸೂಲು ಮಾಡಿದ್ದೀರಾ? ಅಧಿಕಾರಿಗಳನ್ನು ಕೇಳಿದರೆ ಸರ್ಕಾರದವರು ಸ್ಟೇ ಕೊಟ್ಟುಬಿಡುತ್ತಾರೆ ಏನು ಮಾಡಬೇಕೆಂದು ಪ್ರಶ್ನಿಸುತ್ತಾರೆ. ಕೊಯರ್ಸಿವ್ ಸ್ಟೆಪ್ಸ್ ತೆಗೆದುಕೊಳ್ಳುವುದಕ್ಕೆ ಅವರಿಂದ ಸಾಧ್ಯವಾಗುವುದಿಲ್ಲವೆಂದು ಅಧಿಕಾರಿಗಳು ಹೇಳುತ್ತಾರೆ. ಬೇಕಾದರೆ ನಿಮ್ಮ ನಾಲ್ಕು ಜನ ಡಿವಿಜನಲ್ ಕಮಿಷನರ್‌ಗಳನ್ನು ಕರೆಸಿ ಅವರು ಏನು ಹೇಳುತ್ತಾರೆಂದು ಕೇಳಿ. ಅವರು ಈ ಇಕ್ಕಟ್ಟಿನ ಸ್ಥಿತಿಯಲ್ಲಿ ಏನೂ ಮಾಡುವುದಕ್ಕಾಗುವುದಿಲ್ಲವೆಂದು ಹೇಳುತ್ತಾರೆ. ಹೊಸ ಮೆಷಿನರಿ ಬೇಕೆಂದು ಹೇಳುತ್ತಾರೆ. ಹಾಗಿದ್ದ ಪಕ್ಷದಲ್ಲಿ ಸರ್ಕಾರ ಈ ಅರಿಯರ್ಸ್ ವಸೂಲು ಮಾಡಲು ಇನ್ನೂ ಒಂದು ಲಕ್ಷ ಅಧಿಕಾರಿಗಳನ್ನು ನೇಮಕ ಮಾಡಿ, ಕೋಟ್ಯಾಂತರ ರೂಪಾಯಿಗಳ ತೆರಿಗೆಯನ್ನು ಜನತೆಯ ಮೇಲೆ ಹಾಕಬೇಕೆಂದು ಇದ್ದೀರಾ ? ತಾವು ಯೋಜನೆಗಳನ್ನು ಸಾಧನೆ ಮಾಡಿ ಜನಗಳಿಗೆ ಯಾವ ಫಲವನ್ನು ದೊರಕಿಸಿ ಕೊಟ್ಟಿದ್ದೀರಿ ಎಂದು ನೋಡಿದರೆ ನಿಮ್ಮಿಂದ ಏನನ್ನೂ ಮಾಡುವುದಕ್ಕೆ ಸಾಧ್ಯವಿಲ್ಲವೆಂದು ಖಚಿತವಾಗುತ್ತದೆ.

2-00 P.M.

ಆಹಾರ ಸಚಿವರು ಹೇಳುತ್ತಾರೆ, ಎಲೆಕ್ಟ್ರಿಸಿಟಿ ಸಬ್ಸಿಡೈಸ್ ಮಾಡುತ್ತೇವೆಂದು. ಅದು ಏನೇ ಇರಲಿ, ಎಲೆಕ್ಟ್ರಿಸಿಟಿ ಸಪ್ಲೈ ಮಾಡುವುದಕ್ಕೆ ತಂತಿ ಇಲ್ಲ, ಕಂಬ ಇಲ್ಲ, ಟ್ರಾನ್ಸ್‌ಫಾರ್ಮರ್ ಇಲ್ಲ. ಶ್ರೀಮಾನ್ ಸಿದ್ದಯ್ಯನವರು ಹೇಳಿದರು, ಬೋರ್ಡ್ ಬೇರೆಯೆಂದು. ಸರ್ಕಾರಕ್ಕೂ ಎಲೆಕ್ಟ್ರಿಸಿಟಿ ಬೋರ್ಡಿಗೂ ಏನೂ ಸಂಬಂಧವಿಲ್ಲವೆಂದು. ಪತ್ರಿಕೆಗಳನ್ನು ನೋಡಿದರೆ ಎಲೆಕ್ಟ್ರಿಸಿಟಿ ಸಬ್ಸಿಡೈಸ್ ಮಾಡಿ ಆಹಾರೋತ್ಪನ್ನವನ್ನು ಜಾಸ್ತಿ ಮಾಡುತ್ತೇವೆಂದು ಹೇಳುತ್ತಿರುತ್ತಾರೆ. ಆಹಾರ ಬೆಳೆಯುವುದಕ್ಕೆ ಮೊದಲು ಬೇಕಾದ್ದು ನೀರು, ಅಷ್ಟೇ ಅಲ್ಲದೆ ರೈತನಿಗೆ ಎತ್ತುಗಳು, ಬೀಜಗಳು, ಗೊಬ್ಬರ ಇವೂ ಬೇಕು. ವ್ಯವಸಾಯ ಇಲಾಖೆಗೆ ಪ್ರತಿ ವರ್ಷ 5 ಕೋಟಿ ರೂಪಾಯಿ ಖರ್ಚುಮಾಡುತ್ತಾ ಇದ್ದೀರಿ. ಅಗ್ರಿಕಲ್ಚರ್ ಸೆಕ್ಟಾರ್‌ನೂರಾರು ಕೋಟಿರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ವ್ಯವಸಾಯ ಇಲಾಖೆ ಮೈಸೂರು ಸಂಸ್ಥಾನದಲ್ಲಿ ಇದೆಯೇ ಎಂದು ಅನುಮಾನ ಬರುತ್ತದೆ. ಇಂಥ ಒಂದು ಮಂತ್ರಿಮಂಡಲದಲ್ಲಿರುವ ವ್ಯವಸಾಯ ಮಂತ್ರಿಗಳು ನಾಚಿಕೆ ಇಲ್ಲದೆ ಹೇಗೆ ಇದ್ದಾರೆ. ಅವರು ರಾಜೀನಾಮೆ ಕೊಟ್ಟು ಹೊರಗೆ ಬರಬೇಕು. ಶ್ರೀ ಲಾಲ್ ಬಹದ್ದೂರ್ ಶಾಸ್ತ್ರಿಗಳು ರೈಲ್ವೆ ಮಂತ್ರಿಗಳಾಗಿದ್ದಾಗ, ಒಂದು ರೈಲ್ವೆ ಆಕ್ಸಿಡೆಂಟ್ ಯಾರೋ ಮಾಡಿದರು ಎಂದರೆ ತಾವು ರಾಜೀನಾಮೆ ಕೊಟ್ಟರು. ಇವತ್ತು ಮೈಸೂರು ಸಂಸ್ಥಾನದಲ್ಲಿ ವ್ಯವಸಾಯ ಖಾತೆ ತಪ್ಪು ಮಾಡಿದರೆ ಶ್ರೀ ಲಾಲ್ ಬಹದ್ದೂರ್ ಶಾಸ್ತ್ರಿಗಳಂತೆ ಅವರ ಹೊಣೆಗಾರಿಕೆಯನ್ನು ತಪ್ಪನ್ನು ವಹಿಸಿಕೊಳ್ಳಬೇಕು. ವ್ಯವಸಾಯ ಮಂತ್ರಿಯವರು ಇನೆಫಿಷಿಯಂಟ್ ಹಾಗಿದ್ದರೆ, ಅನುಭವಿಗಳಲ್ಲದಿದ್ದರೆ, ಎಕ್ಸ್‌ಪೀರಿಯನ್ಸ್ ಇಲ್ಲದಿದ್ದರೆ ರಾಜೀನಾಮೆ ಕೊಡಬೇಕು. ಇಲ್ಲದೆ ಇದ್ದರೆ ಏನು ಪ್ರಯೋಜನ ? ಬೆಳೆಯಿರಿ, ಬೆಳೆಯಿರಿ ಎಂದು ಹೇಳುತ್ತಾರೆ, ಏನು ಬೆಳೆಯುವುದು ? ವಿಧಾನಸೌಧದ ಸುತ್ತಲೂ ದೊಡ್ಡದಾಗಿ ಟೊಮಟೋ ಹಣ್ಣುಗಳನ್ನು, ಮೂಲಂಗಿಯನ್ನು, ಕೋಸುಗೆಡ್ಡೆಯನ್ನು ಬೆಳೆಯುವುದಕ್ಕೆ ಹೋಗಿದ್ದಾರೆ. ಏತಕ್ಕೆ ಈ ತೋಟಗಾರಿಕೆ ತೆಗೆದುಕೊಂಡಿದ್ದಾರೆ ಎಂದರೆ ಮಂತ್ರಿಗಳು ಹೋಗಿಬರುತ್ತಾರೆ, ಅವರ ಎದುರಿಗೆ ಈ ಅಧಿಕಾರಿಗಳು ನಾವು ಎಷ್ಟು ದಪ್ಪ ದಪ್ಪವಾಗಿ ಬೆಳೆಯುತ್ತೇವೆಂದು ಜಂಬದಿಂದ ಹೇಳಿಕೊಂಡು ಮೆಚ್ಚುಗೆ ಪಡೆಯುವುದಕ್ಕೆ.

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಇದು ನಾಚಿಗೆಗೇಡು. ಇಲ್ಲಿ 14 ಸಾವಿರ ಎಕರೆಯಲ್ಲಿ ತರಕಾರಿ ಬೆಳೆಯುತ್ತೇವೆಂದು ಹೇಳುತ್ತಾರೆ, ಇದಕ್ಕೋಸ್ಕರವಾಗಿ ಈ ತೋಟಗಾರಿಕೆ ಡಿಪಾರ್ಟ್‌ಮೆಂಟಿಗೆ ಒಬ್ಬ ಡೈರಕ್ಟರ್, ಒಬ್ಬ ಡೆಪ್ಯುಟಿ ಡೈರಕ್ಟರ್ ಇದ್ದಾರೆ. ಇರುವವರಿಗೆ ಕೆಲಸವಿಲ್ಲ. ಇವತ್ತಿನ ದಿವಸ ಒಂದು ವಿಷಯವನ್ನು ಅಭಿಮಾನ ದಿಂದ ಸಂತೋಷದಿಂದ ಹೇಳಬೇಕಾಗಿದೆ. ಏನೆಂದರೆ ನಮ್ಮ ಪಂಚಾಯಿತಿ ಮಂತ್ರಿಗಳು ಅಧಿಕಾರಕ್ಕೆ ಬಂದ ಸ್ವಲ್ಪ ದಿನಗಳಲ್ಲೇ ಈ ಎನ್.ಇ.ಎಸ್.ನಲ್ಲಿ ಎಷ್ಟೋ ಜನ ಕೆಲಸವಿಲ್ಲದೆ ಅನಾವಶ್ಯಕವಾಗಿದ್ದಾರೆ ಇಲ್ಲಿ ನಿರುದ್ಯೋಗಿಗಳೇ ಜಾಸ್ತಿಯೆಂದು ಹೇಳಿದರು. ಈ ಕೆಲಸವಿಲ್ಲದ ನೌಕರರು ಮುಖಕ್ಷೌರಮಾಡಿ ಕೊಂಡು, ಪ್ಯಾಂಟ್‌ಗಳು ದೊಳಾಗುವಂತೆ ಪೇಟೆಯೊಳಗೆ, ಊರೊಳಗೆ ಓಡಾಡಿಕೊಂಡು, ಸಿನಿಮಾ ನೋಡಿಕೊಂಡು ತಿರುಗುತ್ತಾ ಇದ್ದಾರೆಂದು ಧೈರ್ಯವಾಗಿ ಹೇಳಿದರು.

ನಮ್ಮ ಆಹಾರ ಸಚಿವರು ಹೇಳುತ್ತಾರೆ, ಬತ್ತದ ಬೆಲೆ ಕಡಮೆಯಾಗಿದೆ, ಅಕ್ಕಿ ಬೆಲೆ ಕಡಮೆ ಯಾಗಿದೆ, ಎಲ್ಲಾ ಬೆಲೆಗಳೂ ಕಡಮೆಯಾಗಿವೆಯೆಂದು. ಸತ್ಯಕ್ಕೆ ದೂರವಾಗದಂಥ ಮಾತನ್ನು ಹೇಳಬೇಕಾದರೆ ಒಂದು ಮಿತಿಯಿರಬೇಕು. ಅಸತ್ಯವಾದ ಸ್ಟೇಟ್‌ಮೆಂಟ್‌ಗಳನ್ನು ಹೇಳಬೇಕಾದರೆ ಒಂದು ಮೇರೆ ಇರಬೇಕು. ಹಿಂದಿನವಕ್ಕೂ ಈಚಿನವಕ್ಕೂ ಹೋಲಿಕೆ ಹಾಕಿದರೆ ಅಕ್ಕಿ ಬೆಲೆ ಒಂದೇ ಸಮನೆ ಏರಿವೆ. ರಾಗಿ ಪಲ್ಲಾ ಒಂದುಕ್ಕೆ 102 ರೂಪಾಯಿ ಇದೆ. ಇದೆಲ್ಲಾ ಬ್ಲಾಕ್ ಮಾರ್ಕೆಟ್ ರೇಟ್‌ಗಳು. ಈ ರೀತಿಯಾದರೆ ಬಡವರು ಅಕ್ಕಿ, ರಾಗಿ ಏನು ತಿನ್ನುವುದು ? ಸಕ್ಕರೆ ಒಂದು ಮಾತ್ರ ಎಷ್ಟು ಬೇಕಾದರೂ ಸಿಗುತ್ತದೆ. ಆಹಾರ ಸಚಿವರು, ವ್ಯವಸಾಯ ಸಚಿವರು ಎರಡು ಏಕೆ ಒಬ್ಬರು ಇರಬೇಕೆಂದು ನಾನಾದರೂ ಕೇಳುತ್ತೇನೆ. ಒರಿಸ್ಸಾದಿಂದ ಮೈಸೂರು ರಾಜ್ಯದವರು ರಾಗಿ ಖರೀದಿ ಮಾಡಿದ್ದಾರೆ. ಅಲ್ಲಿ ಒಂದು ಕ್ವಿಂಟಾಲ್ ರಾಗಿಗೆ 80 ರೂಪಾಯಿಗಳಿದ್ದರೆ ಮೈಸೂರಿಗೆ ಅದನ್ನು 190 ರೂಪಾಯಿಗಳಿಗೆ ಕೊಂಡುಕೊಳ್ಳಿಯೆಂದು ಹೇಳುತ್ತಾರೆ. ಹೇಗೆ ಕೊಂಡುಕೊಳ್ಳುವುದು ? ನಮ್ಮ ಆಹಾರ ಸಚಿವರು ಹೇಳುತ್ತಾರೆ, ದೆಹಲಿಯಿಂದ ಅಕ್ಕಿ ಬರುತ್ತದೆ, ಆಂಧ್ರದಿಂದ ಬರುತ್ತದೆ, ಮದ್ರಾಸ್‌ನಿಂದ ಬರುತ್ತದೆ, ಬರುತ್ತಾ ಇದೆ ಎಂದು ಹೇಳುತ್ತಾರೆ. ಎಲ್ಲಿ ಬಂದಿದೆ, ಬರೀ ಕಾಗದ, ಕವರುಗಳು ಬಂದಿವೆ ಅಷ್ಟೆ. ಅಕ್ಕಿಯೂ ಬರಲಿಲ್ಲ, ರಾಗಿಯೂ ಬರಲಿಲ್ಲ, ಜೋಳವೂ ಬರ ಲಿಲ್ಲ. ಸಹಕಾರ ಮಂತ್ರಿಗಳು 80 ರೂಪಾಯಿಗಳಿಗೆ ಕೊಡುತ್ತೇವೆಂದು ಹೇಳುತ್ತಾರೆ. ಪ್ರೈವೇಟ್ ವರ್ತಕರನ್ನು ಕೇಳಿದರೆ 62 ರಿಂದ 72ರವರೆಗೆ ಕೊಡುತ್ತೇವೆಂದು ಹೇಳುತ್ತಾರೆ. ಒಂದು ಸರ್ಕಾರ ದಿಂದ ಇನ್ನೊಂದು ಸರ್ಕಾರಕ್ಕೆ, ಒಂದು ರಾಜ್ಯದಿಂದ ಇನ್ನೊಂದು ರಾಜ್ಯಕ್ಕೆ ಎಷ್ಟರಮಟ್ಟಿಗೆ ವಿಶ್ವಾಸ ವಿದೆಯೆಂದು ಇದರಿಂದ ಗೊತ್ತಾಗುತ್ತದೆ. ಇವರಲ್ಲಿ ಒಬ್ಬೊಬ್ಬರಿಗೂ ಒಡಂಬಡಿಕೆ ಇಲ್ಲ. ಇನ್ನು ಒಂದು ತಿಂಗಳಿಗೆ mass starvation ಪ್ರಾರಂಭವಾಗುತ್ತದೆ. ಶ್ರೀ ಲಾಲ್ ಬಹದ್ದೂರ್ ಶಾಸ್ತ್ರಿ ಗಳು ವಾರಕ್ಕೆ ಒಂದು ಹೊತ್ತು ಊಟ ಬಿಡಿ ಎಂದು ಹೇಳಿದರು. ಇವತ್ತು ಒಬ್ಬ ಸತ್ತರೆ ಹೂಳುವು ದಕ್ಕೆ ಜನ ಇದ್ದರೆ, ಇನ್ನು ಮುಂದೆ ಒಂದು ಊರಿನಲ್ಲಿ ಯಾರಾದರೂ ಸತ್ತರೆ ಹೂಳುವುದಕ್ಕೂ ಯಾರೂ ಇರುವುದಿಲ್ಲ, ಅಂಥ ಪರಿಸ್ಥಿತಿ ಬರುತ್ತದೆಂದು ಹೇಳುತ್ತೇನೆ. ನಮ್ಮ ಊರಿಗೆ 14ನೇ ತಾರೀಖು ಆಹಾರ ಮಂತ್ರಿಗಳು ಬಂದಿದ್ದರು, 2ನೇ ನವೆಂಬರ್‌ನಲ್ಲಿ ಗೃಹ ಮಂತ್ರಿಗಳು ಬಂದಿದ್ದರು, ಅದು ಆದಮೇಲೆ 27ನೇ ತಾರೀಖು ಇಬ್ಬರು ಮಂತ್ರಿಗಳು ತುಮಕೂರಿಗೆ ಬಂದರು. ಎಷ್ಟು ಜನ ಮಂತ್ರಿಗಳು ಬಂದರೂ ನಮಗೆ ಬೇಕಾದ ಅನುಕೂಲಗಳು ಆಗಲಿಲ್ಲ. ಆಯಿಲ್ ಇಂಜಿನ್ ಬಂದರೆ ಸ್ಟಾರ್ಟರ್ ಬರಲಿಲ್ಲ, ಸ್ಟಾರ್ಟರ್ ಬಂದರೆ ಬೆಲ್ಟ್ ಬರಲಿಲ್ಲ, ಬೆಲ್ಟ್ ಬಂದರೆ ನೀರೆತ್ತುವ ಪಂಪ್ ಬರಲಿಲ್ಲ. ಹೀಗಾಗಿ ಇವತ್ತಿನವರೆಗೆ ಜನರು ಏನೂ ಬೆಳೆಯುವುದಕ್ಕೆ ಸಾಧ್ಯವಾಗಿಲ್ಲ. ನಮ್ಮ ಸಿರಾ ತಾಲ್ಲೂಕ್‌ನಲ್ಲಿ ಎರಡು ಸಾವಿರ ಎಕರೆಯಲ್ಲಿ ರಾಗಿ ತೆನೆ ಒಣಗಿಹೋಗಿ ಒಂದೊಂದರಲ್ಲಿ ಎರಡೆರಡು ಕಾಳು ಸಹ ಇರಲಿಲ್ಲ. ಕೇಂದ್ರ ಸರ್ಕಾರದಲ್ಲಿ ವ್ಯವಸಾಯ ಸಚಿವರಿಗೆ ಆಹಾರ ಖಾತೆ ಕೊಟ್ಟಿದ್ದಾರೆ, ಸಿ.ಡಿ. ಯನ್ನು ಕೊಟ್ಟಿದ್ದಾರೆ, ಎನ್. ಇ. ಎಸ್. ಕೊಟ್ಟಿದ್ದಾರೆ ಮತ್ತು ಕೋ-ಆಪರೇಷನ್ ಕೊಟ್ಟಿ ದ್ದಾರೆ. ಇದೇ ರೀತಿ ನಮ್ಮ ವ್ಯವಸಾಯ ಸಚಿವರಿಗೂ ಕೊಟ್ಟರೆ ಏನಾದರೂ ಮಾಡುವುದಕ್ಕೆ ಸಾಧ್ಯವೆಂದು ಮೈಸೂರು ಸರ್ಕಾರಕ್ಕೆ ಸೂಚಿಸುತ್ತೇನೆ. ಈ ಖಾತೆಗಳನ್ನೆಲ್ಲಾ ಒಬ್ಬರೇ ಮಂತ್ರಿ ಗಳಿಗೆ ಕೊಡು ಇವತ್ತಿನದಿವಸ 3-4 ಖಾತೆಗಳು ಸಂಪೂರ್ಣವಾಗಿ ನಿರರ್ಥಕವಾಗಿ ಬಿಟ್ಟಿವೆ. ಪ್ರೊಕ್ಯೂರ್ ಮೆಂಟ್ ಸ್ವಾಮ್ಯ ಕೋ-ಆಪರೇಷನ್ ಡಿಪಾರ್ಟ್‌ಮೆಂಟ್‌ಗೆ ಬಂದಮೇಲೆ ಆಹಾರ ಸಚಿವರೊಬ್ಬರು ಇರಬೇಕಾದುದು ಇಲ್ಲ.

ನಮಗೆ ಸೆಕೆಂಡರಿ ಎಜುಕೇಷನ್ ಉಚಿತವಾಗಿ ಕೊಡುತ್ತೇವೆಂದು ಹೇಳಿಬಿಟ್ಟಿದ್ದಾರೆ ಆದ್ ಗೌರ್ನರ್ ಅವರ ಭಾಷಣ ನೋಡಿದರೆ ಮೈಸೂರು ಸೆಕೆಂಡರಿ ಎಜುಕೇಷನ್ ಸೆಸ್ ಬಿಲ್ಲನ್ನು 1966-67 ರಿಂದ ಸರ್ಕಾರದವರು ಇನ್‌ಟ್ರಡ್ಯೂಸ್ ಮಾಡುತ್ತೇವೆಂದು ಹೇಳಿದ್ದಾರೆ. ಆ ಮಸೂದೆಗೆ ಜನರಿಂದ

ಎಷ್ಟು ಹಣ ಹೋಗುತ್ತಿದೆಯೋ ಗೊತ್ತಿಲ್ಲ. ಒಂದು ಕಡೆ ಸೆಕೆಂಡರಿ ಎಜುಕೇಷನ್ ಫ್ರೀ ಎಂದು ಸರ್ಕಾರದವರು ಹೇಳುತ್ತಾರೆ. ಇನ್ನೊಂದು ಕಡೆ ಅದಕ್ಕೆ ತೆರಿಗೆ ಹಾಕುತ್ತಾರೆ. ಅದು ನ್ಯಾಯವಲ್ಲ. ಸರ್ಕಾರದವರು ಯಾವುದಾದರೂ ಒಂದು ತತ್ವವನ್ನು ಒಪ್ಪಿಕೊಳ್ಳಬೇಕು. ಮನೂದೆ ಮಾಡಿ ಹಣವನ್ನು ಇದಕ್ಕೋಸ್ಕರವೇ ತೆಗೆದುಕೊಳ್ಳುವ ನೀತಿಯನ್ನು ಬಿಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಟಿ. ಮಾದಯ್ಯಗೌಡ (ರಾಮನಗರ).—ಮಾನ್ಯ ಅಧ್ಯಕ್ಷರೇ, ಮಾನ್ಯ ರಾಜ್ಯಪಾಲರು ಮಾಡಿರತಕ್ಕ ಭಾಷಣದಲ್ಲಿ ದೇಶದ ರೀತಿ ನೀತಿಗಳೇನು ಎನ್ನತಕ್ಕಂಥಾದ್ದನ್ನು ಮತ್ತು ಇನ್ನೂ ಅನೇಕ ವಿಚಾರಗಳನ್ನು ಕುರಿತು ಪ್ರಸ್ತಾಪ ಮಾಡಿದ್ದಾರೆ. ಅದರಲ್ಲಿ ಕೆಲವು ಇಲಾಖೆಗಳು ಪ್ರಗತಿಪರವಾಗಿಯೂ ಕೆಲವು ಇಲಾಖೆಗಳು ಯಾವ ಪ್ರಗತಿ ಪರವನ್ನು ಕಾಣಿಸದೆಯೂ ಇರತಕ್ಕ ಪರಿಸ್ಥಿತಿಯನ್ನು ನಾವು ನೋಡಿದ್ದೇವೆ. ಅದರಲ್ಲಿಯೂ ಮುಖ್ಯವಾಗಿ ವಿದ್ಯಾ ಇಲಾಖೆ, ಅರಣ್ಯ ಇಲಾಖೆ ಮತ್ತು ಕೈಗಾರಿಕಾ ಇಲಾಖೆಗಳಲ್ಲಿ ಹೆಚ್ಚಿನ ಒಂದು ಪ್ರಗತಿ ಆದಂತೆ ಕಾಣುವುದಿಲ್ಲ. ವಿದ್ಯಾ ಇಲಾಖೆಯಲ್ಲಿ ಹೇಳಬೇಕಾದರೆ ಪ್ರಾಥಮಿಕ ವಿದ್ಯಾಭ್ಯಾಸದಲ್ಲಿ ಯಾವ ಸ್ಥಿತಿಗತಿಗಳು ಇದ್ದವೋ ಅದೇ ಸ್ಥಿತಿಗತಿಗಳು ಇವೆ. ಪಾಠಶಾಲೆಗಳು ದಕ್ಷತೆಯಿಂದ ಚೆನ್ನಾಗಿ ನಡೆಯುತ್ತಿಲ್ಲ. ಉಪಾಧ್ಯಾಯರುಗಳು ತಕ್ಕಷ್ಟು ಮುತವರ್ಜಿ ವಹಿಸಿ ಪಾಠವನ್ನು ಹೇಳುತ್ತಿಲ್ಲ. ಅದರಲ್ಲೂ ಗ್ರಾಮಾಂತರ ಪ್ರದೇಶಗಳಲ್ಲಿರುವ ಪಾಠಶಾಲೆಗಳು ಅತ್ಯಂತ ಶೋಚನೀಯ ಪರಿಸ್ಥಿತಿಯಲ್ಲಿವೆ. ಈ ಇಲಾಖೆಯಲ್ಲಿ ಹೆಚ್ಚಿನ ಒಂದು ಕೆಲಸಮಾಡಿದ್ದಾರೆ ಎನ್ನತಕ್ಕಂಥಾದ್ದು ರಾಜ್ಯಪಾಲರ ಭಾಷಣದಲ್ಲಿ ಗೊತ್ತಾಗುವುದಿಲ್ಲ.

ಹಾಗೆಯೇ ಅರಣ್ಯ ಇಲಾಖೆಯಲ್ಲಿ ಮತ್ತು ಕೈಗಾರಿಕಾ ಇಲಾಖೆಯಲ್ಲಿ ಕೂಡ ಏನೊಂದು ಹೆಚ್ಚಿನ ಪ್ರಗತಿಯೂ ಕಂಡು ಬರುತ್ತಿಲ್ಲ. ನಮ್ಮ ವಿದ್ಯುಚ್ಛಕ್ತಿ ಏನೋ ಬೇಕಾದಷ್ಟು ಉತ್ಪತ್ತಿ ಆಯಿತು. ಆದರೆ ಆ ರೀತಿ ಉತ್ಪತ್ತಿಯಾದಂತಹ ವಿದ್ಯುಚ್ಛಕ್ತಿಯನ್ನು ಉಪಯೋಗ ಮಾಡಲು ಜನಗಳಿಗೆ ಏನು ಸೌಕರ್ಯವನ್ನು ಮಾಡಿಕೊಡಬೇಕೋ ಅದನ್ನು ಸರ್ಕಾರದವರು ಮಾಡಿಕೊಡುತ್ತಿಲ್ಲ ಎಂದು ವ್ಯಸನದಿಂದ ಹೇಳಬೇಕಾಗಿದೆ. ಆ ಬಗ್ಗೆ ಕಷ್ಟಗಳೇನು ಎಂಬುದನ್ನು ಹೇಳುತ್ತಾರೆ, ಆದರೆ ಆ ಕಷ್ಟಗಳ ನಿವಾರಣೆಗೆ ತಕ್ಕಷ್ಟು ಪ್ರಯತ್ನವನ್ನು ಸರ್ಕಾರದವರು ಮಾಡಿಲ್ಲವೇನೋ ಎಂದು ನನ್ನ ಭಾವನೆ.

ಇನ್ನು ನಮ್ಮ ದೇಶದಲ್ಲಿ ದುರ್ಭಿಕ್ಷ ಮತ್ತು ಕ್ಷಾಮ ಎಲ್ಲೆಲ್ಲಿಯೂ ಕೂಡ ಕಳವಳವನ್ನುಂಟು ಮಾಡಿದೆ ಎಂಬುದನ್ನು ಹೊಗಳಿ ಹೇಳಬೇಕಾಗಿಲ್ಲ. ಅದರಲ್ಲಿಯೂ ಕೂಡ ಬೆಂಗಳೂರು ಜಿಲ್ಲೆಯಲ್ಲಿ ನಮ್ಮ ಕೆಲವು ಕ್ಷೇತ್ರಗಳಲ್ಲಿ ಬಹಳ ಹಾಹಾಕಾರ ಎದ್ದಿದೆ. ಕ್ಷಾಮ ನಿವಾರಣೆಗೆ ಏನು ಒಂದು ಹೆಚ್ಚಿನ ರೀತಿಯಲ್ಲಿ ಸರ್ಕಾರದವರು ಕೆಲಸ ಮಾಡಬೇಕಾಗಿತ್ತೋ ಅದನ್ನು ಮಾಡಿಲ್ಲ ಎಂದು ನಾನಾದರೂ ವ್ಯಸನದಿಂದ ಹೇಳುತ್ತೇನೆ. ನಮ್ಮ ಕೆಲವು ತಾಲ್ಲೂಕಿನಲ್ಲಿ, ರಾಮನಗರ ಸಬ್ ಡಿವಿಜನ್‌ನಲ್ಲಿ ಕೆಲವು ಹಳ್ಳಿಗಳಲ್ಲಿ ಜನರು ಎಲ್ಲಿ ಆಹಾರ ಸಿಕ್ಕುತ್ತದೆಯೋ ಆ ಪ್ರದೇಶಗಳಿಗೆ ವಲಸೆ ಹೋಗುತ್ತಿದ್ದಾರೆ. ದನಕರುಗಳಿಗೆ ಮೇವು ಇಲ್ಲದೆ ಅನೇಕ ಧನಗಳನ್ನು ಕಾಕನಕೋಟೆ ಕಾಡಿಗೆ ಹೊಡೆದುಕೊಂಡು ಹೋಗುತ್ತಿದ್ದಾರೆ. ಈ ರೀತಿಯಾಗಿ ಜನಗಳು ಆಹಾರಕ್ಕೋಸ್ಕರ ಮತ್ತು ದನಕರುಗಳಿಗೆ ಮೇವು ಮತ್ತು ನೀರಿಗೋಸ್ಕರ ಊರಿಂದ ಊರಿಗೆ ಅಲೆಯುತ್ತಿದ್ದಾರೆ. ನಾನೇನು ಇದನ್ನು ಉತ್ಪ್ರೇಕ್ಷೆ ಮಾಡಿ ಹೇಳುತ್ತಿಲ್ಲ. ಯಾರಾದರೂ ಅದನ್ನು ಖುದ್ದು ವಿಚಾರ ಮಾಡಿದರೆ ಅದು ಗೊತ್ತಾಗುತ್ತದೆ. ಹಳ್ಳಿಗಾಡುಗಳಲ್ಲಿ ಅನೇಕ ಜನಗಳಿಗೆ ಆಹಾರ ಸಿಕ್ಕದೆ ಸೊಪ್ಪು ಸೆದೆಯನ್ನು ತಿಂದು ಜೀವನ ಮಾಡತಕ್ಕ ಪರಿಸ್ಥಿತಿ ಉಂಟಾಗಿದೆ ಎಂದು ನಾನಾದರೂ ಕೂಡ ಬಹಳ ವ್ಯಸನದಿಂದ ಹೇಳುತ್ತೇನೆ. ಆದರೆ ಒಂದು ಸಂತೋಷದ ಸಂಗತಿಯೇನೆಂದರೆ, ಕೆಲವು ನಮ್ಮ ಹಿರಿಯರು ಹೇಳಿದ ಹಾಗೆ ಆಗುವುದೆಲ್ಲಾ ಒಳ್ಳೆಯದಕ್ಕೆ ಆಗುತ್ತಿದೆ. ಈಗ ಬಂದಿರತಕ್ಕ ಕ್ಷಾಮವನ್ನು ನಾವು ನಮ್ಮ ಜೀವಮಾನದಲ್ಲೇ ನಾವು ನೋಡಿಲ್ಲ. ನಮ್ಮ ಹಿರಿಯರು ಹೇಳುತ್ತಾರೆ, ಹಿಂದೆ ಜನಗಳು ಬೂತಾಳೆಗಡ್ಡೆಯನ್ನು ತಿಂದು ಜೀವನ ಮಾಡತಕ್ಕ ಪರಿಸ್ಥಿತಿ ಬಂದಿತ್ತು ಎಂದು. ಈಗ ಜನಗಳು ಹೊಟ್ಟೆಗಿಲ್ಲದೆ ಸಾಯುತ್ತಿದ್ದಾರೆ. ನಾವು ನಮ್ಮ ಆಯುಸ್ಸು ಪ್ರಮಾಣದಲ್ಲಿ ಇಂಥಾ ಕ್ಷಾಮ ಡಾಮರಗಳನ್ನು ನಾವು ನೋಡಿರಲಿಲ್ಲ. ಭಗವಂತನೇ ಮನುಷ್ಯರನ್ನು ಕಾಪಾಡಬೇಕಾಗಿದೆ. ಈಗ ಜನರಲ್ಲಿ ಒಂದು ವಿಧವಾದ ಲಪಲವಿಕೆ ಉಂಟಾಗಿದೆ. ಕ್ಷಾಮ ಬಂದಿದೆ ನಮ್ಮ ಮಕ್ಕಳು ಮರಿಗಳು ಸತ್ತು ಹೋಗುತ್ತಾರೆ, ನಾವು ಏನಾದರೂ ಮಾಡಿ ಭೂಮಿಯಲ್ಲಿ ಕಾಳನ್ನು ಬೆಳೆಯಬೇಕು ಎಂದು ಪ್ರಯತ್ನ ಮಾಡುತ್ತಿದ್ದಾರೆ. ಅದಕ್ಕಾಗಿ ಸಂಬಂಧಪಟ್ಟ ಇಲಾಖೆಯವರೂ ಸಹ ಹಣ ಸಹಾಯವನ್ನು ಮಾಡುತ್ತಿದ್ದಾರೆ. ಬಾವಿ ತೆಗೆಯುವುದಕ್ಕೆ ರೈತರಿಗೆ ಹಣವನ್ನು ಸಾಲ ಕೊಡುತ್ತಾರೆ. ಬಾವಿಗಳಿಗೆ ಪಂಪು ಸೆಟ್ಟುಗಳನ್ನು ಹಾಕಿಸಿ ಕೊಡುತ್ತಿದ್ದಾರೆ. ರೈತರಿಗೆ ಒಳ್ಳೆಯ ಗೊಬ್ಬರವನ್ನು ಕೊಡುತ್ತಿದ್ದಾರೆ. ಈ ರೀತಿ ಸರ್ಕಾರದವರು ರೈತರಿಗೆ ನಾನಾ ರೀತಿಯಲ್ಲಿ ಸಹಾಯ ಮಾಡುತ್ತಿದ್ದಾರೆ. ಪ್ರತಿಯೊಂದು ಊರಿನಲ್ಲಿಯೂ ಪ್ರತಿಯೊಂದು ಕುಟುಂಬದವರೂ ಕೂಡ ಏನಾದರೂ ಮಾಡಿ ಬಾವಿಯನ್ನು ತೆಗೆಯುವುದಕ್ಕೆ ಸರ್ಕಾರ

(ಶ್ರೀ ಟಿ. ಮಾದಯ್ಯಗೌಡ)

ದಿಂದ ಹಣ ಸಹಾಯವನ್ನು ಪಡೆದುಕೊಳ್ಳಬೇಕು ಎನ್ನುವ ಕಾಲದಲ್ಲಿ ಎಲ್ಲರೂ ಕೂಡ ಜನರಿಗೆ ಎಷ್ಟು ಮಟ್ಟಿನ ಒಂದು ಕುಮ್ಮಕ್ಕನ್ನು ಮಾಡಬೇಕೋ ಅಷ್ಟರಮಟ್ಟಿನ ಕುಮ್ಮಕ್ಕನ್ನು ಮಾಡುತ್ತಿಲ್ಲ. ಸರ್ಕಾರದವರು ಅದನ್ನು ಮಾಡಿಲ್ಲ ಎಂದು ನಾನು ಹೇಳುವುದಿಲ್ಲ. ಸರ್ಕಾರದವರು ಸಹಾಯ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಸರ್ಕಾರದವರಿಗೆ ಅಡಚಣೆಗಳು ಮತ್ತು ಕಷ್ಟಗಳು ಇವೆ ಎಂಬುದನ್ನು ಮನವರಿಕೆ ಮಾಡಿಕೊಂಡಿದ್ದೇನೆ. ಅನೇಕ ಕಾರಣಗಳಿಂದ ಸರ್ಕಾರದವರು ರೈತರಿಗೆ ಕೊಟ್ಟಂತಹ ಅನುಕೂಲಗಳು ಸರಿಯಾಗಿ ಅವರಿಗೆ ದೊರೆಯುತ್ತಿಲ್ಲ. ಆ ಅನುಕೂಲಗಳನ್ನು ಜನಗಳು ಪಡೆದುಕೊಳ್ಳಬೇಕಾಗಿದ್ದರೆ ಒಂದು ಇಲಾಖೆಯಿಂದ ಇನ್ನೊಂದು ಇಲಾಖೆಗೆ, ಒಂದು ಆಫೀಸಿನಿಂದ ಇನ್ನೊಂದು ಆಫೀಸಿಗೆ ಜನಗಳು ಸುತ್ತಾಡುತ್ತಿದ್ದಾರೆ. ಈ ಕ್ಷಾಮ ಕಾಲದಲ್ಲಿ ರೈತ ಹೆಚ್ಚು ಬೆಳೆಯನ್ನು ಬೆಳೆಯುವುದಕ್ಕೆ ಏನು ಸೌಕರ್ಯ ಬೇಕೋ ಅದೆಲ್ಲವೂ ಒಂದು ಕಡೆ ದೊರೆಯುವಂತೆ ಮಾಡಿಕೊಟ್ಟರೆ ಅವರಿಗೆ ಅನುಕೂಲವಾಗುತ್ತದೆ ಎಂದು ನಾನು ಒತ್ತಿ ಒತ್ತಿ ಸರ್ಕಾರದವರ ಗಮನಕ್ಕೆ ತರಲಿಚ್ಛಿಸುತ್ತೇನೆ.

ಇನ್ನು ನಮ್ಮ ದೇಶದಲ್ಲೇನೋ ವಿದ್ಯುಚ್ಛಕ್ತಿ ಬೇಕಾದಷ್ಟು ಇದೆ. ಆದರೆ ಅದನ್ನು ಪಂಪು ಸೆಟ್ಟುಗಳಿಗೆ ಅದಷ್ಟು ಜಾಗ್ರತೆ ಒದಗಿಸಿ ಕೊಡುವ ಏರ್ಪಾಡು ನಡೆಯುತ್ತಿಲ್ಲ. ಮತ್ತು ಇನ್ನೊಂದು ವಿಷಯವೇನೆಂದರೆ, ಈಗ ನಮ್ಮ ತಾಲ್ಲೂಕಿನಲ್ಲಿ 200-300 ಪಂಪು ಸೆಟ್ಟುಗಳಿಗೆ ಡಿಮ್ಯಾಂಡ್ ಇದೆ. ರೈತರು ಎಲ್ಲಾ ಸೌಕರ್ಯಗಳನ್ನು ಮಾಡಿಕೊಂಡರೂ ಕೂಡ ಅವರಿಗೆ ಸರ್ಕಾರದವರು ಪಂಪುಸೆಟ್ಟುಗಳನ್ನು ಒದಗಿಸುವುದಕ್ಕೆ ಆಗಿಲ್ಲ. ಸರ್ಕಾರದವರು ರೈತರಿಗೆ ಏನು ಸಹಾಯ ಮಾಡುತ್ತೇವೆಂದು ಹೇಳುತ್ತಾರೆಯೋ ಅದು ರೈತನಿಗೆ ಸಕಾಲದಲ್ಲಿ ಮುಟ್ಟುತ್ತಿಲ್ಲ. ಈಗ ನಮ್ಮ ಕ್ಷೇತ್ರದಲ್ಲಿ ಅರ್ಕಾವತಿ ನದಿ ಹರಿಯುತ್ತದೆ. ಇಂಥಾ ಕಷ್ಟ ಕಾಲದಲ್ಲಿ ಆ ನೀರನ್ನು ಉಪಯೋಗಿಸಿಕೊಂಡು ಭತ್ತ, ರಾಗಿ ಮತ್ತು ತರಕಾರಿಗಳನ್ನು ಬೆಳೆಯುವುದಕ್ಕೆ ಅನುಕೂಲ ಮಾಡಿಕೊಡಿ ಎಂದು ಸರ್ಕಾರದವರನ್ನು ಈಗ ಎರಡು ಮೂರು ವರ್ಷಗಳಿಂದಲೂ ಕೇಳಿಕೊಳ್ಳುತ್ತಿದ್ದೇವೆ. ಒಂದೇ ಸಮನೆ ಸರ್ಕಾರದವರನ್ನು ಒತ್ತಾಯ ಮಾಡುತ್ತಿದ್ದೇವೆ. ಅವರಿಗೆ ಹೇಳಿದೆ, ಇವರಿಗೆ ಹೇಳಿದೆ ಬರುತ್ತಾರೆ, ಮಾಡುತ್ತಾರೆ ಎಂದು ಹೇಳುತ್ತಾರೆ. ಆದರೆ ಆ ಕೆಲಸ ಮಾತ್ರ ಆಗುತ್ತಿಲ್ಲ. ಅಲ್ಲಿ ಕಮ್ಯೂನಿಟಿ ಪಂಪು ಸೆಟ್ಟುಗಳನ್ನು ಹಾಕಿಸಿಕೊಟ್ಟು ಅನುಕೂಲಮಾಡಿಕೊಡುತ್ತೇವೆ ಎಂದು ಹೇಳುತ್ತಾರೆ, ಆದರೆ ಅವನ್ನು ಮಾಡಿಕೊಟ್ಟಿಲ್ಲ. ಆ ನದಿಗಳಲ್ಲಿ ನೀರು ಮಾತ್ರಾ ಪೋಲಾಗುತ್ತಿದೆ. ಇದು ಬಹಳ ವ್ಯಸನಕರವಾದ ವಿಚಾರ. ರೈತರು ಆ ನದಿಗಳಲ್ಲಿ ಅರವಿಗಳಲ್ಲಿ ನೀರನ್ನು ತಮ್ಮ ಜಮೀನಿಗೆ ತೆಗೆದುಕೊಂಡು ಬಂದು ಉತ್ಸಾಹದಿಂದ ಕಾಳನ್ನು ಬೆಳೆಯುತ್ತಿದ್ದಾರೆ. ಆ ನದಿಗಳ ನೀರನ್ನು ನಾವು ಸರಿಯಾದ ರೀತಿಯಲ್ಲಿ ಉಪಯೋಗಿಸಿಕೊಳ್ಳದೇ ಹೋದರೆ ಎಂತಹ ಕಷ್ಟಕಾಲ ಬರುತ್ತದೋ ನನಗೆ ಗೊತ್ತಿಲ್ಲ. ಕ್ಷಾಮ ಡಾಮರಗಳಲ್ಲಿ ಬೆಳೆಯತಕ್ಕಂಥ ರಾಗಿ, ಜೋಳ ಮತ್ತು ಮುಸುಕಿನ ಜೋಳ ಇವುಗಳನ್ನು ಒದಗಿಸಿಕೊಡಬೇಕೆಂದು ನಾವು ಸರ್ಕಾರದವರನ್ನು ಕೇಳಿಕೊಂಡಿದ್ದೆವು. ಅವುಗಳನ್ನು ಒದಗಿಸಿಕೊಡಲು ಸಂಬಂಧಪಟ್ಟ ಇಲಾಖೆಯವರಿಂದ ಪ್ರಯತ್ನ ನಡೆದಿದೆ. ಆದರೆ ಸರಿಯಾದ ಬೀಜಗಳನ್ನು ಒದಗಿಸಿಕೊಡದೆ ಯಾವುದೋ ಒಂದು ಬೀಜವನ್ನು ಒದಗಿಸಿ ಕೊಟ್ಟಿದ್ದಾರೆ. ಎನ್. ಇ. ಎಸ್. ಇಲಾಖೆಯಲ್ಲಿ ಕೆಲಸ ಮಾಡತಕ್ಕವರು ಕೆಲವರು ಆ ಬೀಜಗಳನ್ನು ಒದಗಿಸಿ ಕೊಟ್ಟರು. ಕೆಲವು ಜನ ರೈತರು ಆ ಬೀಜಗಳನ್ನು ತಮ್ಮ ಜಮೀನಿನಲ್ಲಿ ಬಿತ್ತಿದ್ದಾರೆ. ಆ ಪೈರು ನಾಲ್ಕು ಇಂಚಿಗಿಂತ ಜಾಸ್ತಿ ಬೆಳೆಯದೆ ಅದರಲ್ಲಿ ಹಾಗೆಯೇ ತೆನೆಯು ಹೊರಟಿದೆ. ಇಂಥಾ ಕಷ್ಟಕಾಲದಲ್ಲಿ ರೈತ ಶ್ರಮಪಟ್ಟು ಬೆಳೆದಂತಹ ಪೈರು ಅವನ ಕೈ ಸೇರದಿದ್ದರೆ ಜನಗಳಿಗೆ ಎಂತಹ ಕಷ್ಟ ಬರುತ್ತದೆ ಎಂಬುದನ್ನು ನಾನು ಹೆಚ್ಚಿಗೆ ಹೇಳಬೇಕಾದ್ದು ಇಲ್ಲ. ಸರ್ಕಾರದವರು ದನಕರುಗಳಿಗೆ ಮೇವಿಗೆ ಏನಾದರೂ ಏರ್ಪಾಡು ಮಾಡದೇ ಹೋದರೆ ಮುಂಗಾರು ಮಳೆ ಬಂದಾಗ ರೈತ ಎತ್ತುಗಳಿಂದ ಹೊಲಗಳನ್ನು ಉಳುವುದಕ್ಕೆ ಕಷ್ಟವಾಗುತ್ತದೆ. ಈಗಾಗಲೇ ರೈತರು ತಮ್ಮಲ್ಲಿರತಕ್ಕ ಕೆಲವು ರಾಸುಗಳನ್ನು 6ಕ್ಕೆ 3ರ ಹಾಗೆ ಮಾರಾಟ ಮಾಡಿದ್ದಾರೆ. ಎಷ್ಟೋ ದನಗಳು ಮೇವು ಇಲ್ಲದೆ ಸತ್ತು ಹೋಗಿವೆ. ಪರಿಸ್ಥಿತಿ ಹೀಗಿರುವುದರಿಂದ ನಾಳೆ ವ್ಯವಸಾಯ ಮಾಡುವುದಕ್ಕೆ ರೈತರಿಗೆ ತುಂಬಾ ತೊಂದರೆ ಬರುತ್ತದೆ.

[MR. DEPUTY SPEAKER in the Chair.]

ಅನೇಕ ಗ್ರಾಮಗಳಲ್ಲಿ ನೀರೂ ಕೂಡ ಇಲ್ಲ. ಮುಖ್ಯವಾಗಿ ಹುಲ್ಲು ಸಿಗುವುದೇ ದುಸ್ತರವಾಗಿದೆ. ಈಗ ಮಂಡ್ಯ, ಶ್ರೀರಂಗಪಟ್ಟಣ ಈ ಭಾಗಗಳಲ್ಲಿ ಸ್ವಲ್ಪ ಭತ್ತದ ಫಸಲು ಮಾಡಿರುವುದರಿಂದ ಅವರುಗಳು ಸ್ವಲ್ಪ ಹುಲ್ಲನ್ನು ಬೆಳೆಸಿದ್ದಾರೆ. ಅಲ್ಲಿಂದ ಅಷ್ಟು ಇಷ್ಟು ಹುಲ್ಲನ್ನು

ಕೆಲವರು ತಂದು ದನಕ್ಕೆ ಹಾಕಿಕೊಳ್ಳಲು ಅನುಕೂಲವಾಗುವಂತೆ ಫಾಡರ್‌ಬ್ಯಾಂಕುಗಳ ತರಹ ಡಿಪೋಗಳನ್ನು ಮಾಡಿಕೊಡಿ ಎಂದು ಕೇಳುತ್ತಲೇ ಇದ್ದೇವೆ. ಅದನ್ನೂ ಕೂಡ ಇನ್ನೂ ಮಾಡಲು ಆಗಲಿಲ್ಲ. ಹಾಗೆ ಮಾಡಿದ್ದರೆ ಎಷ್ಟೋ ದನಗಳು ಉಳಿಯಲು ಅವಕಾಶವಾಗುತ್ತಿತ್ತು. ಈಗಲಾದರೂ ಸರ್ಕಾರ ಸ್ವಲ್ಪ ಇದರ ಕಡೆಗೆ ಯೋಚನೆ ಮಾಡಬೇಕಾದುದು ಅಗತ್ಯ ಎಂದು ಅವರಲ್ಲಿ ಕೇಳಿಕೊಳ್ಳುತ್ತೇನೆ. ನಮ್ಮ ರೈತರಿಗೇನಾದರೂ ಸಹಾಯಗಳು ಬೇಕು ಎಂದು ಸರ್ಕಾರದವರನ್ನು ಕೇಳಿದರೆ, ಎಂದರೆ ಗೊಬ್ಬರ, ಬಿತ್ತನೆ ಬೀಜಗಳು ಇವನ್ನು ಒದಗಿಸಬೇಕೆಂದು ಕೇಳಿದರೆ ಕೋ-ಆಪರೇಟಿವ್ ಸೊಸೈಟಿಗಳನ್ನು ತೋರಿಸುತ್ತಾರೆ. ನಮಗೆ ಪಂಪುಸೆಟ್ಟುಗಳು ಬೇಕೆಂದು ಕೇಳಿದರೆ ಎಲೆಕ್ಟ್ರಿಸಿಟಿ ಇಲಾಖೆಯನ್ನು ತೋರಿಸುತ್ತಾರೆ. ಬಾವಿಗಳು ಬೇಕೆಂದು ಹೇಳಿದರೆ ಎಲ್. ಇ. ಎಸ್. ಹಾಗೂ ಡೆಪ್ಯುಟಿ ಕಮಿಷನರುಗಳನ್ನು ತೋರಿಸುತ್ತಾರೆ. ಹಾಗೆ ಎಲ್ಲ ಕಡೆಗಳಲ್ಲಿ ಕೋ-ಆಪರೇಟೀವ್ ಸೊಸೈಟಿಗಳನ್ನು ತೋರಿಸುತ್ತಾರೆ. ಆದರೆ ನಮ್ಮಲ್ಲಿರುವ ಅನೇಕ ಗ್ರಾಮಗಳಲ್ಲಿ ಕೋ-ಆಪರೇಟೀವ್ ಸೊಸೈಟಿಗಳೇ ಇಲ್ಲ. ಇರತಕ್ಕ ಸೊಸೈಟಿಗಳೂ ಕೂಡ ಕೆಲವು ಡಿಫಂಕ್ಟ್ ಆಗಿವೆ. ಇನ್ನು ಕೆಲವು ಕೆಲಸಗಳನ್ನು ಮಾಡುತ್ತಿಲ್ಲ. ಹೀಗಾಗಿ ಆಯಾ ಗ್ರಾಮಗಳಲ್ಲಿರುವ ರೈತರಿಗೆ ಗೊಬ್ಬರ, ಇತ್ಯಾದಿ ಸಾಮಾನುಗಳು ಸಕಾಲದಲ್ಲಿ ದೊರೆಯುತ್ತಿಲ್ಲ. ಆದುದರಿಂದ ಎಲ್ಲೆಲ್ಲಿ ಸಹಕಾರ ಸಂಘಗಳು ಇವೆಯೋ ಅಲ್ಲೆಲ್ಲಾ ಅವು ಸರಿಯಾಗಿ ಕೆಲಸ ಮಾಡುವಂತೆ ತಕ್ಕ ಏರ್ಪಾಡು ಮಾಡಬೇಕು. ಅಲ್ಲದೆ ನಮ್ಮ ಭಾಗದಲ್ಲಿರುವ ರೈತರು ಏನಾದರೂ ಮಾಡಿ ಅಷ್ಟೋ ಇಷ್ಟೋ ಕಾಳುಗಳನ್ನು ಬೆಳೆಸಬೇಕೆಂದು ಬಹಳ ಆಸೆಯುಳ್ಳವರಾಗಿದ್ದಾರೆ. ಅವರಿಗೆ ತಕ್ಕ ಸಹಾಯ ಸಲಕರಣೆಗಳನ್ನು ಮಾಡಿಕೊಡಬೇಕೆಂದು ಸರ್ಕಾರದವರಲ್ಲಿ ಹೇಳಲು ಅಪೇಕ್ಷೆಪಡುತ್ತೇನೆ.

ನಮ್ಮ ತಾಲ್ಲೂಕು ಪ್ರದೇಶಗಳಲ್ಲಿ ಕೊಡುತ್ತಿರುವ ಆಹಾರ ಧಾನ್ಯ ತೀರ ಕಡಿಮೆ. ಸುಮಾರು ಒಂದು ಲಕ್ಷ ಇಪ್ಪತ್ತು ಸಾವಿರದಷ್ಟು ಪ್ರಜಾಸಂಖ್ಯೆಯುಳ್ಳ ನಮ್ಮ ತಾಲ್ಲೂಕಿಗಾಗಿ 180 ಟನ್ನುಗಳಷ್ಟು ದವಸ ಒಂದು ಒದಗಿಸಿದರೆ ಇಲ್ಲಿರುವ ಜನಗಳ ಲೆಕ್ಕ ಹಾಕಿ ನೋಡಿದರೆ ಒಬ್ಬರಿಗೇನೋ ಅರಪಾವು ಅಥವಾ ಒಂದು ಪಾವಿನಷ್ಟೂ ಕೂಡ ಸಿಗುತ್ತಿಲ್ಲ. ಅದರಲ್ಲೂ ಲೇಬರರುಗಳು ಹಾಗೂ ಅಧಿಕಾರ ವರ್ಗದವರಿಗೆ ಆಹಾರ ಧಾನ್ಯ ಸಿಗುವುದಂತೂ ಬಹಳ ಕಷ್ಟವಾಗಿದೆ. ಬ್ಲಾಕ್ ಮಾರ್ಕೆಟ್ಟಿನಲ್ಲಿ ಹೋಗಿ ಕೊಂಡುಕೊಳ್ಳಬೇಕಾದರೆ ಶಕ್ತಿ ಇರುವವರು ಹೋಗಿ ಕೊಳ್ಳುತ್ತಾರೆ, ಶಕ್ತಿ ಇಲ್ಲದೇ ಇರುವ ಬಡ ಜನಗಳು ಬ್ಲಾಕ್ ಮಾರ್ಕೆಟ್ಟಿಗೆ ಹೋಗಲು ಆಗುವುದಿಲ್ಲ. ರಿಲೀಫ್ ವರ್ಕುಗಳನ್ನು ಮಾಡುವಾಗ ಅಲ್ಲಿ ಇಲ್ಲಿ ಹೋಗಿ ಕೂಲಿ ಮಾಡಿಕೊಂಡು ಅದರಿಂದ ಅವರು ಜೀವನ ಮಾಡಬೇಕಾಗಿದೆ. ಆದುದರಿಂದ ಸರ್ಕಾರ ಅದಷ್ಟು ಹೆಚ್ಚು ರಿಲೀಫ್ ಕಾಮಗಾರಿಗಳನ್ನು ಮಾಡಿದರೆ ಇಲ್ಲಿ ಇರುವ ಬಡ ಜನಕ್ಕೆ ಸ್ವಲ್ಪಮಟ್ಟಿನ ಸಹಾಯವಾದರೂ ಸಿಗುತ್ತದೆ. ಇದಕ್ಕೆ ತಕ್ಕ ಏರ್ಪಾಡು ಮಾಡಬೇಕು. ಹೆಚ್ಚು ಹೆಚ್ಚು ಕಾಮಗಾರಿಗಳನ್ನು ಮಾಡಿದರೆ ಬಡ ಜನಕ್ಕೆ ಅಷ್ಟು ಇಷ್ಟು ಕಾಸು ಸಿಗುತ್ತದೆ. ಅದರಿಂದ ಸ್ವಲ್ಪಮಟ್ಟಿನ ಸಹಾಯವಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳಲು ಇಚ್ಛಿಸುತ್ತೇನೆ.

ಮೈನರು ಇರಿಗೇಷನ್ನು ವಿಚಾರದಲ್ಲಿ ಹೇಳುವಾಗ ನಮ್ಮ ಭಾಗದಲ್ಲಿ ಮಾಡಿರುವ ಕೆಲವು ಅಣೆಕಟ್ಟುಗಳ ವಿಚಾರಗಳನ್ನು ಹೇಳಿದರೆ ಅದು ಅತ್ಯಂತ ಶೋಚನೀಯವಾದ ವಿಚಾರ ಎಂದು ಹೇಳಬೇಕಾಗಿ ಬಂದಿದೆ. ಎಲ್ಲಿ ಹಳ್ಳಗಳಲ್ಲಿ ನೀರಿದೆಯೋ ಅಲ್ಲಿ ಅಣೆಕಟ್ಟುಗಳನ್ನು ಹಾಕಿಲ್ಲ. ಎಲ್ಲಿ ಹಳ್ಳಗಳಲ್ಲಿ ನೀರಿಲ್ಲವೋ ಅಂತಹ ಕಡೆಗಳಲ್ಲಿ ಅಣೆಕಟ್ಟುಗಳನ್ನು ಮಾಡಿಸಿದ್ದಾರೆ. ಇದನ್ನು ಏಕೆ ಮಾಡಿದ್ದಾರೆಂದರೆ, ಅಲ್ಲಿನ ಕಂಟ್ರಾಕ್ಟರುಗಳಿಗೆ ಅನುಕೂಲ ಮಾಡಿಕೊಡುವುದಕ್ಕಾಗಿ ಮಾಡಿರುವಂತೆ ಕಾಣುತ್ತದೆ.

Sri ALUR HANUMANTHAPPA (Deputy Minister for Minor Irrigation).—If a list is given, a thorough enquiry will be conducted.

Sri T. MADAIAH GOWDA.—I have put a question here as to how many pick-ups are constructed, in how many of them there is water and how many acres have been brought under irrigation but no proper answer is forthcoming. ಹೀಗಾಗಿ ಹಳ್ಳಗಳಲ್ಲಿರುವ ನೀರನ್ನು ಎಷ್ಟು ಉಪಯೋಗ ಮಾಡಬೇಕಾಗಿತ್ತೋ ಅಷ್ಟನ್ನೂ ಉಪಯೋಗ ಮಾಡಲಾಗದೆ ಅಲ್ಲಿರುವ ಜಮೀನುಗಳನ್ನು ಅಬಾದು ಮಾಡಲಾಗಲಿಲ್ಲ. ಒಟ್ಟಿನಲ್ಲಿ ರೈತರಿಗೆ ಕ್ಷಾಮ ಕಾಲದಲ್ಲಿ ಸರ್ಕಾರ ಸಾಕಷ್ಟು ಸಹಾಯ ಮಾಡಿದ್ದಾದರೆ ಅಷ್ಟೋ ಇಷ್ಟೋ ಕಾಳುಗಳನ್ನು ಬೆಳೆಯಲು ಅನುಕೂಲವಾಗುತ್ತದೆ. ಅದಕ್ಕಾಗಿ ಬಾವಿಗಳನ್ನು ತೆಗೆಯಲು ಪಂಪುಸೆಟ್ಟುಗಳನ್ನು ಕೊಟ್ಟು ಮತ್ತು ಇತರ ಸೌಕರ್ಯಗಳನ್ನು ರೈತರಿಗೆ ಮಾಡಿಕೊಟ್ಟರೆ ಬಹಳ ಅನುಕೂಲವಾಗುತ್ತದೆ. ಅಲ್ಲದೆ ಸರ್ಕಾರದವರೇ ಹೇಳುತ್ತಿರುವಂತೆ ಸೆಲ್ಫ್-ಸಫಿಷಿಯನ್ಸಿಯನ್ನು ಪಡೆಯಲು ಒಂದು ಅವಕಾಶ ಸಿಗುತ್ತದೆ. ಆದುದರಿಂದ ಕಷ್ಟಪಟ್ಟು ಬೆಳೆ ಮಾಡಬೇಕೆನ್ನುವ

(ಶ್ರೀ ಟಿ. ಮಾದಯ್ಯ ಗೌಡ)

ಜನಕ್ಕೆ ಪಂಪುಸೆಟ್ಟುಗಳು ಹಾಗೂ ಇನ್ನಿತರ ಸೌಕರ್ಯಗಳನ್ನು ಒದಗಿಸಿಕೊಟ್ಟು ಸರಕಾರ ಸಹಾಯ ಮಾಡಬೇಕೆಂದು ನಾನು ಇಲ್ಲಿ ಒತ್ತಾಯದಿಂದ ಹೇಳುತ್ತೇನೆ. ಇದು ಅಗತ್ಯವಾಗಿ ಮಾಡಬೇಕಾಗಿದೆ. ಅಲ್ಲದೆ ಈ ಸಂದರ್ಭದಲ್ಲಿ ಇನ್ನೊಂದು ಏನಾಗಿದೆ ಎಂದರೆ ಬೆಂದ ಮನೆಗೆ ಹಿರಿದದ್ದೇ ಲಾಭ ಎನ್ನುವ ಗಾದೆಯಂತೆ ಇವರಿಗೆ ಬೇಕಾಗುವ ಪಂಪುಸೆಟ್ಟುಗಳು, ಹಣ ಹಾಗೂ ಬೀಜ, ಗೊಬ್ಬರ ಇತ್ಯಾದಿಗಳನ್ನು ಕೊಡುವಾಗ ಇಲ್ಲದ ಭ್ರಷ್ಟಾಚಾರಗಳು ಕೆಳಗಿರತಕ್ಕ ಅಧಿಕಾರ ವರ್ಗದಲ್ಲಿ ಆಗುತ್ತಿದೆ. ನಾನು ಎಲ್ಲ ಅಧಿಕಾರವರ್ಗದ ಬಗ್ಗೆಯೂ ಹೇಳುತ್ತಿಲ್ಲ. ಕೆಲವು ಕಡೆಗಳಲ್ಲಿ ಆಗುತ್ತಿದೆ. ಇದನ್ನು ತಪ್ಪಿಸಬೇಕು. ಅದಷ್ಟೂ ಕಷ್ಟಪಡತಕ್ಕ ಜನಗಳಿಗೆ ತಕ್ಕ ಪರಿಹಾರಗಳನ್ನು ಸರಕಾರ ಕಲ್ಪಿಸಿ ಕೊಡಬೇಕಾದುದು ಅವಶ್ಯಕ. ಈಗ ದೇಶದ ಬಡ ರೈತರಲ್ಲಿ ಏನಾದರೂ ಒಂದು ಅಷ್ಟು ಬೆಳೆ ಮಾಡಬೇಕೆನ್ನುವ ಲವಲವಿಕೆ ಇರುವಾಗ ಸರಕಾರ ಇದನ್ನು ಪರಿಶೀಲನೆಮಾಡಿ ಅವರಿಗೆ ತಕ್ಕ ಸೌಕರ್ಯಗಳನ್ನು ಕಲ್ಪಿಸಿ ಕೊಡಬೇಕಾದುದು ಬಹಳ ಅಗತ್ಯ.

† ಶ್ರೀ ಕೆ. ಎಸ್. ಸೂರ್ಯನಾರಾಯಣ ರಾವ್ (ಮೈಸೂರು ಸಿಟಿ).—ಮಾನ್ಯ ಅಧ್ಯಕ್ಷರೇ ರಾಜ್ಯಪಾಲರ ಭಾಷಣದಮೇಲೆ ಈ ಸಭೆಯಲ್ಲಿ ಇದುವರೆಗೆ ಆಗಿರತಕ್ಕ ಭಾಷಣಗಳನ್ನು ಕೇಳಿದರೆ ಸರಕಾರದ ಕಾರ್ಯಕ್ರಮಗಳು ಎಷ್ಟರಮಟ್ಟಿಗೆ ನಡೆದಿವೆ ಎನ್ನುವುದು ಅದರಲ್ಲಿಯೇ ಅರ್ಥವಾಗುತ್ತದೆ. ಇಲ್ಲಿ ನಡೆದ ಹೆಚ್ಚು ಭಾಷಣಗಳನ್ನು ನೋಡುವುದಾದರೆ ಈ ಸಭೆಯ ಸದಸ್ಯರುಗಳ ಅಭಿಪ್ರಾಯಗಳಿಗೆ ಸರಕಾರದ ಮನ್ನಣೆ ಇಲ್ಲ ಎನ್ನುವ ಒಂದು ತೀರ್ಮಾನಕ್ಕೆ ಯಾರಾದರೂ ಬರಬಹುದು. ನಾನು ಯಾವ ಪಕ್ಷದ ಕಡೆಗೂ ಹೇಳುತ್ತಿಲ್ಲ. ಇದು ಈ ಸಭೆಯ ಅಭಿಪ್ರಾಯ ಎಂದು ಹೇಳಬಹುದು ಮತ್ತು ಈ ತೀರ್ಮಾನಕ್ಕೆ ಜನಮನ್ನಣೆ ಇದ್ದರೆ ಇದನ್ನು ಸರಕಾರ ಒಪ್ಪಿಕೊಳ್ಳಲೇಬೇಕಾಗಿ ಬರುತ್ತದೆ. ಸರಕಾರದವರು ಇದನ್ನು ಇನ್ನೂ ಸರಿಯಾಗಿ ಅರ್ಥ ಮಾಡಿಕೊಳ್ಳಲಿಲ್ಲ ಎಂದು ತೋರುತ್ತೆ. ಆದರೆ ಈಗ ತಾನೇ ಮಾತನಾಡಿದ ಶ್ರೀಮಾನ್ ಮಾದಯ್ಯ ಗೌಡರು ಹೇಳಿದಷ್ಟು ಕಠಿಣವಾಗಿ ನಾನು ಇಲ್ಲಿ ಹೇಳುವುದಕ್ಕೆ ಹೋಗುವುದಿಲ್ಲ. ಮತ್ತು ನನಗೆ ಆ ರೀತಿ ಮಾತನಾಡಲೂ ಬರುವುದಿಲ್ಲ. ಏಕೆಂದರೆ ನನಗೆ ತಿಳಿದಂತಹ ವಿಷಯಗಳನ್ನು ಅಷ್ಟು ಕಠಿಣವಾಗಿ ಹೇಳಲು ಮನಸ್ಸು ಬರುವುದಿಲ್ಲ. ಅಲ್ಲದೆ ಮಂತ್ರಿಗಳು ತಿಂಗಳಲ್ಲಿ ಸುಮಾರು 25 ದಿನಗಳಷ್ಟು ಪ್ರವಾಸ ಮಾಡುತ್ತಾರೆ. ಆದರೆ ಪ್ರವಾಸ ಮಾಡಲಿ, ಬೇಡ ಎಂದು ಹೇಳುವುದಿಲ್ಲ. ಹಾಗೆ ಪ್ರವಾಸ ಮಾಡಿ ಜನಗಳಿಗೆ ಅನುಕೂಲವಾಗುವಂತಹ ಕೆಲಸಗಳನ್ನು ಮಾಡಿದರೆ ಎಷ್ಟೋ ಅನುಕೂಲವಾಗುತ್ತದೆ. ಪ್ರವಾಸ ಮಾಡಿಕೊಂಡು ಅಲ್ಲಿನ ಜನಗಳಿಗೆ ಇಷ್ಟು ಕೆಲಸಗಳನ್ನು ಮಾಡುತ್ತೇವೆಂದು ಹೇಳಿ ಬರುತ್ತಾರೆ. ಆದರೆ ಅದೇನು ದುರ್ದೈವವೋ ಈಗಾಗಲೇ ಮೂರು ಯೋಜನೆಗಳಾಗಿ ನಾಲ್ಕನೇ ಯೋಜನೆ ಬರುತ್ತಿದ್ದರೂ ಆಗಿನ ಕಾಲಕ್ಕಾದರೂ ಜನಕ್ಕೆ ಸ್ವಲ್ಪಮಟ್ಟಿನ ಅನುಕೂಲಗಳು ಸಿಗಬಹುದು ಎಂದು ನನಗನಿಸುತ್ತಿದೆ. ಇದಕ್ಕೇನಾದರೂ ಒಂದು ಹೊಸ ಮಾರ್ಗವನ್ನು ನಾವು ಈಗ ಕಂಡು ಹಿಡಿಯಬೇಕಾಗಿದೆ. ಪ್ರಾಜೆಕ್ಟುಗಳನ್ನು ಸೇರಿಸಲಾಗಿದೆ ಎಂದು ಈ ಭಾಷಣದಲ್ಲಿ ಹೇಳಿರುವಂತೆ ಏನೇನು ಕಾರ್ಯಕ್ರಮಗಳನ್ನು ಅವುಗಳ ಬಗ್ಗೆ ತೆಗೆದುಕೊಂಡಿದ್ದೇವೆ ಎನ್ನುವುದನ್ನು ಹೇಳಿದ್ದರೆ ಚೆನ್ನಾಗಿರುತ್ತಿತ್ತು. ಏಕೆಂದರೆ ಯಾವ ರೀತಿಯಾದ ನೀತಿ ನಿಯಮಗಳನ್ನು ಹಾಕಿಕೊಳ್ಳಬೇಕು ಎನ್ನುವುದಕ್ಕೆ ದೇಶದ ಆಯವ್ಯಯವನ್ನು ಪರಿಶೀಲನೆ ಮಾಡಿಕೊಂಡು ಅದಕ್ಕೆ ಸಾಕಷ್ಟು ಹಣವನ್ನು ನಿಗದಿ ಮಾಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ.

2-30 P.M.

ಈ ವರ್ಷ ಹೊಸ ಪದ್ಧತಿಯಾದರೂ ಕೂಡ ರಾಜ್ಯಪಾಲರ ಭಾಷಣದಲ್ಲಿ ಹೊಸದೇನೂ ನೋಡುತ್ತಾ ಇಲ್ಲ. ಜನ ನೋಡಿದರೆ ಇದರಲ್ಲಿ ಏನೂ ಹೊಸ ಅಂಶವೇ ಇಲ್ಲ ಎಂದು ಹೇಳುತ್ತಾರೆ. ಇದರಿಂದ ಜನಗಳ ಮೇಲೆ ಆಗತಕ್ಕ ಪರಿಣಾಮವೇನು ? ಇವರು ಯೋಚನೆ ಮಾಡತಕ್ಕ ಶಕ್ತಿಯನ್ನು ಕಳೆದುಕೊಂಡಿದ್ದಾರೆ. ಕಾರಣ ಯೋಜನಾ ಸಮಿತಿಯವರಿಗೆ ಎಲ್ಲಾ ಕೆಲಸವನ್ನೂ ಬಿಟ್ಟುಬಿಟ್ಟಿದ್ದಾರೆ. ರಾಜ್ಯ ಸರ್ಕಾರದವರು ಅದರ ರೂಪರೇಖೆಗಳನ್ನು ಯಾವ ರೀತಿ ಇರಬೇಕೆಂಬುದನ್ನು ಹೇಳಬೇಕು. ಆ ರೀತಿ ನಿಯಮಗಳು ಯಾವುದನ್ನೇ ನೋಡಿದರೂ ರಾಜ್ಯಪಾಲರ ಭಾಷಣದಲ್ಲಿ ಹೊಸದೇನೂ ಕಾಣುವುದಿಲ್ಲ. ಇನ್ನು ನಾಲ್ಕನೆಯ ಯೋಜನೆಯ ಸರ್ವೆಯ ವಿಚಾರ ಈ ಸಭೆಯಲ್ಲಿ ಸೂಚಿಸಿದ್ದಾರೆ. ಈ ಇವ್ಯಾಲ್ಯುವೇಶನ್ ಇಷ್ಟು ಹೊತ್ತಿಗೆ ಆಗಬೇಕಾಗಿತ್ತು ? ಉದಾಹರಣೆಗೆ ತೆಗೆದುಕೊಳ್ಳುವುದಾದರೆ, ಆಹಾರದ ಪರಿಸ್ಥಿತಿ ತೆಗೆದುಕೊಳ್ಳೋಣ. ಜನಗಳನ್ನು ಆಹಾರದ ಬಗ್ಗೆ ಎಂದರೆ, ಊಟ ಉಪಚಾರಗಳನ್ನು ಬದಲಾವಣೆ ಮಾಡಿಕೊಳ್ಳಿ ಎಂದು

ಹೇಳುತ್ತಿದ್ದೀರಿ. ಇವತ್ತು ಅಕ್ಕಿ ತಿನ್ನುವವರು, ನಾಳೆ ಮಾಂಸ ತಿನ್ನೋಣ. ಆದರೆ ಅದು ಎಲ್ಲಿ ಅಗ್ಗವಾಗಿ ಸಿಕ್ಕುತ್ತದೆ ಸ್ವಾಮಿ ? ಇದರಲ್ಲಿ ಎರಡು ಪ್ರಶ್ನೆಗಳಿವೆ. ಒಂದು ಆಹಾರ ಬೆಳೆಯುವಂತಹುದು, ಇನ್ನೊಂದು ತಿನ್ನುವಂತಹದು. ಒಂದು ಸಾಮಾನ್ಯ ಪ್ರಜೆಗೆ ಒಂದೇ ಆಹಾರವನ್ನು ತಿನ್ನುವುದಕ್ಕಾಗುವುದಿಲ್ಲ. ಬಹಳ ಸುಲಭವಾಗಿ ಊಟ ಉಪಚಾರಗಳನ್ನು ಬದಲಾಯಿಸಿಕೊಳ್ಳಿ ಎಂದು ಹೇಳಬಹುದು, ಆದರೆ ಅದನ್ನು ಕಾರ್ಯತಃ ಮಾಡುವುದು ಬಹಳ ಕಷ್ಟ. ಇವತ್ತು ನಮ್ಮ ದೇಶದಲ್ಲಿ ಅಗ್ಗವಾಗಿ ಏನು ಸಿಕ್ಕುತ್ತದೆ ಸ್ವಾಮಿ ? ಇವತ್ತು ಸಾಮಾನ್ಯ ಜನರಿಗೆ ಅಗ್ಗವಾಗಿ ಸಿಗುವುದೆಂದರೆ, ರಾಗಿ ಮತ್ತು ಅಕ್ಕಿ. ಅದನ್ನೇ ಸಾಮಾನ್ಯವಾಗಿ ಎಲ್ಲ ಜನರೂ ಉಪಯೋಗಿಸುತ್ತಿದ್ದಾರೆ. ಏಕೆಂದರೆ ಅದು ಸ್ವಲ್ಪ ಕಡಿಮೆ ಬೆಲೆಗೆ ಸಿಕ್ಕುತ್ತದೆ. ಹಾಗೆ ಇಂದು ಸಾಮಾನ್ಯ ಪ್ರಜೆಗೆ ಕೊಂಡು ತಿನ್ನುವುದಕ್ಕೆ ಸಿಗದಿರತಕ್ಕ ಆಹಾರದಲ್ಲಿ ಎರಡು ಮುಖ್ಯವಾದವುಗಳು. ನಾನು ಇದನ್ನು ಯಾತಕ್ಕೆ ಹೇಳುತ್ತೇನೆಂದರೆ, ನಮ್ಮ ಈ ಒಂದು ದೇಶದ ಮಿತವ್ಯಯ ಯಾವರೀತಿ ಒಂದು ನೀತಿ ನಿಯಮಗಳನ್ನು ಅನುಸರಿಸಿಕೊಂಡು ಇಲ್ಲ. ಈಗ ಅಭಾವಕ್ಕೆ ಕಾರಣ, ಮಳೆ ಎಂದು ಹೇಳುತ್ತಾರೆ. ಒಪ್ಪಿಕೊಳ್ಳೋಣ, ನಿಜ. ಆದರೆ ನಾವು ದೇಶವನ್ನು ನೋಡುವಾಗ, ಹಿಮಾಲಯದಿಂದ ಕನ್ಯಾಕುಮಾರಿಯವರೆಗೂ ನೋಡಬೇಕೆಂದು ಹೇಳುತ್ತೇನೆ. ಈ ಆಹಾರ ಪರಿಸ್ಥಿತಿಯ ಬಗ್ಗೆ ಯೋಜನೆ ಮಾಡಿದರೆ ಅದು ಒಂದು ಇಡೀ ದೇಶಕ್ಕೆ ಅನ್ವಯವಾಗತಕ್ಕ ಒಂದು ನೀತಿಯನ್ನು ಅನುಸರಿಸುವಂತೆ ನಾವು ಮಾಡುತ್ತಾ ಇಲ್ಲ. ಅದಕ್ಕೆ ಒಂದು ರೀತಿ ಇಲ್ಲ. ಪ್ರತಿಯೊಂದು ರಾಜ್ಯಕ್ಕೂ ತನ್ನದೇ ಆದ ಒಂದು ನೀತಿನಿಯಮವನ್ನು ಇಟ್ಟುಕೊಂಡಿದೆ. ಇವತ್ತು ನಮ್ಮ ರಾಜ್ಯಕ್ಕೆ ಆಂಧ್ರದೇಶದಿಂದ ಬರಬೇಕಾಗಿದ್ದ ಆಹಾರಧಾನ್ಯ ರಾಜಕೀಯ ಕಾರಣಗಳಿಂದ ಬರುತ್ತಾ ಇಲ್ಲ. ಒಂದೊಂದು ರಾಜ್ಯ ಒಂದೊಂದು ರೀತಿಯ ನೀತಿನಿಯಮಗಳಿಂದ ನಮಗೆ ಸಾಮಾನ್ಯವಾಗಿ ಬರತಕ್ಕಂಥ ನೆರವು ಕೂಡ ಬರುವುದಕ್ಕೆ ಸಾಧ್ಯವಾಗಿಲ್ಲ. ಇದರಿಂದಾಗಿ ನಮ್ಮ ಆಹಾರದ ಮಾರ್ಜಿನಲ್ ಡಿಫಿಸಿಟ್, 10, 15, 20, ಪರ್‌ಸೆಂಟಿನ ವರೆಗೆ ಹೋಗುತ್ತಾ ಇದೆ. ಎರಡನೆಯದಾಗಿ ಈಗ ಇರತಕ್ಕ ನಿಯಮವನ್ನು ಪಾಲಿಸಿ ಎಷ್ಟು ಹಂಚಿಕೆಯಾಗುತ್ತದೆ ಎಂಬುದು ಈ ಸಭೆಯಲ್ಲಿ ಸಾಕಷ್ಟು ಚರ್ಚೆಯಾಗಿದೆ. ಈ ಸರ್ಕಾರದವರಲ್ಲಿ ಆಹಾರದ ಬಗ್ಗೆ ಒಂದು ಧೃಡವಾದ ಪಾಲಿಸಿ ಇಲ್ಲವಾದ ಕಾರಣವೇ ಈ ಕೊರತೆಗಳು ಬಂದಿರುವುದು. ಇನ್ನೊಂದು ಉದಾಹರಣೆ. ಹೋದ ವರ್ಷ ಬಜೆಟ್ ಅಧಿವೇಶನದಲ್ಲಿ ಕೇಳಿದಾಗ ಹೇಳಿದರು, ಯೋಚನೆ ಮಾಡಬೇಡಿ, ಬರುವ ವರ್ಷ ಸಮ್ಮರ್ ಕ್ರಾಪ್ ಬರುತ್ತದೆ. ಎಲ್ಲರೂ ತೆಗೆದುಕೊಂಡ ಎಲ್ಲರಿಗೂ ಸಮಾನವಾಗಿ ಒಂದು ಫೇರ್ ಪ್ರೈಸ್ ಡಿಪೋಗಳ ಮೂಲಕ ಕೊಡುತ್ತೇವೆಂದು. ಆದರೆ ಹೋದ ವರ್ಷದ ಸಮ್ಮರ್ ಕ್ರಾಪ್ ಏನಾಯಿತು ಎಷ್ಟು ಇತ್ತು ಎಂಬುದು ತಿಳಿಯಲೇ ಇಲ್ಲ. ಈ ದೇಶದಲ್ಲಿ ಅಲ್ಪ ಸ್ವಲ್ಪ ಬೆಳೆಯಾದರೂ ಕೂಡ ಅದು ಸರಿಯಾದ ರೀತಿಯಲ್ಲಿ ವಿತರಣೆಯಾಗದೆ ಪಕ್ಕದ ರಾಜ್ಯಗಳಿಂದ ಸಾಕಷ್ಟು ಪ್ರಮಾಣದಲ್ಲೇ ಸುಲಭವಾಗಿ ದೊರೆಯುತಕ್ಕ ವ್ಯವಸ್ಥೆ ಇವತ್ತಿನ ದಿವಸ ನಡೆದುಕೊಂಡು ಬಂದಿಲ್ಲ. ಅದರಿಂದ ನಮ್ಮ ಮೈಸೂರು ದೇಶದಲ್ಲಿ ಹೆಚ್ಚಿನ ಕಷ್ಟಗಳನ್ನು ಕಾಣುತ್ತಿದ್ದೇವೆ. ಇದಕ್ಕೆ ಇನ್ನೊಂದು ಕಾರಣವೇನೆಂದರೆ, ಈ ವರ್ಷದ ಬೆಳೆಯಲ್ಲಿ ಎಷ್ಟು ಮಾರ್ಕೆಟ್ಟಿಗೆ ಬಂದಿದ್ದೆ ಎನ್ನುವ ಅಂಕಿ ಅಂಶ ಕೂಡಾ ಸರ್ಕಾರದಲ್ಲಿ ಸಿಕ್ಕುತ್ತಾ ಇಲ್ಲ. ಏಕೆಂದರೆ ಸಾಮಾನ್ಯವಾಗಿ ಜಾಸ್ತಿ ದಾಸ್ತಾನು ಇಡತಕ್ಕ ವರ್ತಕ ಜನರೇ ಇರುವುದರಿಂದ ಜನ ಎಷ್ಟುಮಟ್ಟಿಗೆ ಹಿಡಿದು ಇಟ್ಟಿದ್ದಾರೆ ಎಂದು ಕೂಡಾ ಸರ್ಕಾರದ ಗಮನಕ್ಕೆ ಬರಲಿಲ್ಲ ಎಂದು ಅನಿಸುತ್ತದೆ. ಆದ್ದರಿಂದ ಈ ಬಗ್ಗೆ ಯಾವ ಒಂದು ನೀತಿ ನಿಯಮವನ್ನೂ ಪಾಲಿಸದೆ ಹೋದರೆ ರಾಜ್ಯದಲ್ಲಿ ಸುಭಿಕ್ಷ ಕಾಣುವುದು ಸಾಧ್ಯವಿಲ್ಲ. ಎಷ್ಟು ಪಂಪ್ ಸೆಟ್ಟು ಹಾಕಿದರೂ, ಎಷ್ಟು ಅಭಿವೃದ್ಧಿ ಮಾಡಿದರೂ ಸಾಧ್ಯವಿಲ್ಲ. ಹಂಚಿಕೆ ವಿತರಣೆ ಸರಿಯಾಗಿ ಮಾಡಬೇಕು. ಇದರಿಂದ ಸಾಮಾನ್ಯ ದರ್ಜೆಯ ಮನುಷ್ಯನಿಗೆ ತುಂಬಾ ಅನುಕೂಲವಾಗುತ್ತದೆ. ಈ ಬಗ್ಗೆ ರಾಜ್ಯಪಾಲರು ಆಹಾರ ಅಲ್ಲಿಂದ ತರಿಸುತ್ತೇವೆ, ಇಲ್ಲಿಂದ ತರಿಸುತ್ತೇವೆ ಎಂದು ಹೇಳಿದರೇ ವಿನಃ ಒಂದು ಪರಿಣಾಮಕಾರಿಯಾಗತಕ್ಕಂಥ ರೀತಿಯಲ್ಲಿ ಅವರು ಹೇಳಲಿಲ್ಲ. ಇವತ್ತು ಎಷ್ಟು ಮಟ್ಟಿಗೆ ಪ್ರಕೃತಿಯು ಇದಕ್ಕೆಲ್ಲಾ ಕಾರಣವಾಗಿದೆಯೋ, ಅಷ್ಟೇ ಮಟ್ಟಿಗೆ ಸರ್ಕಾರವು ಕೂಡಾ ಹೊಣೆಯಾಗುತ್ತದೆ, ಎಂಬುದನ್ನು ಕೂಡ ಒಪ್ಪಿಕೊಳ್ಳಬೇಕಾಗುತ್ತದೆ. ಈ ವಿಚಾರದಲ್ಲಿ ಒಂದುಮಾತು ಹೇಳುವುದಾದರೆ ಇವತ್ತು ಬೆಳಗ್ಗೆ ಪೇಪರಿನಲ್ಲಿ ಫುಡ್ ಮಿನಿಸ್ಟರು ಒಂದು ಸ್ಟೇಟ್‌ಮೆಂಟ್ ಮಾಡಿರುವುದನ್ನು ಓದಿದೆ. ಅದರಲ್ಲಿ ಅವರು ಮೊನಾಪೊಲಿ ಪ್ರೊಕ್ಯೂರ್‌ಮೆಂಟ್ ಸೆಪ್ಟಂಬರಿನಿಂದ ಮಾಡತ್ತೇವೆ ಎಂದು ಹೇಳಿದ್ದಾರೆ. 'I congratulate the Food Minister. It is a master stroke. He has used it very well'.

ಈಗ ಸೆಪ್ಟೆಂಬರಿನಿಂದ ಮಾಡುವುದಕ್ಕಾಗುತ್ತದೆಯೇ ಎನ್ನುವ ಪ್ರಶ್ನೆ ಇದ್ದರೂ ಕೂಡ ನಿರ್ಧಾರವಾಗುವ ಆರು ತಿಂಗಳ ಮುಂಚಿತವಾಗಿ ಹೇಳಿರುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಅದರಿಂದ ನಮಗೆ ಸಾಕಷ್ಟು ರೀಯಾಕ್ಷನ್ ಆಗಬಹುದು ಎನ್ನುವ ಭಾವನೆ ಇದರಲ್ಲಿ ಕಾಣುತ್ತದೆ. ನಾನು ಅವರಲ್ಲಿ ಕೇಳಿಕೊಳ್ಳುವುದೇನೆಂದರೆ, ದಯವಿಟ್ಟು ಅವರ ಮಾತಿನಲ್ಲಿ ಬೆಲೆ ಇರುವುದಾದರೆ ಆ ವೇಳೆಗೆ

(ಶ್ರೀ ಕೆ. ಎಸ್. ಸೂರ್ಯನಾರಾಯಣ ರಾವ್)

ಕಡ್ಡಾಯವಾಗಿ ಪ್ರೊಕ್ಯೂರ್‌ಮೆಂಟ್ ಪಾಲಿಸಿ ತಂದು ಸ್ಟೇಟ್ಯುಟರಿ ರೇಷನಿಂಗ್ ಮಾಡಬೇಕು. ಸ್ವಲ್ಪ ಮಟ್ಟಿಗೆ ಅಭಾವವಿರುವುದರಿಂದ ಸ್ಟೇಟ್ಯುಟರಿ ರೇಶನಿಂಗ್‌ನಿಂದ ಮಾತ್ರವಲ್ಲದೆ ಬೇರೆ ಯಾವ ಮಾರ್ಗ ದಿಂದಲೂ ಸಾಮಾನ್ಯ ಜನರಿಗೆ ನಾವು ಆಹಾರವನ್ನು ಒದಗಿಸಿಕೊಡಲಿಕ್ಕೆ ಸಾಧ್ಯವಾಗುವುದಿಲ್ಲ. ಅವರು ದಯವಿಟ್ಟು ಅಷ್ಟು ಮಾಡಿದರೆ ಜನರಿಗೆ ತುಂಬಾ ಅನುಕೂಲವಾಗುತ್ತದೆ.

ರಾಜ್ಯಪಾಲರ ಭಾಷಣದ ಮೇಲೆ ಕೆಲವು ವಿಷಯಗಳನ್ನು ಹೇಳಲು ಇಷ್ಟಪಡುತ್ತೇನೆ. ರಾಜ್ಯ ಪಾಲರು ಮುಖ್ಯವಾದ ಕೆಲವು ತತ್ವಗಳಿಗೆ ಗಮನ ಕೊಟ್ಟಿಲ್ಲ. ಬದಲಾಗಿ ಅವರು ಟ್ಯಾಕ್ಸ್ ಪಾಲಿಸಿಯ ವಿಚಾರವಾಗಿ ಹೇಳಿದ್ದಾರೆ. ಎಂತೆಂತಹ ಬಿಲ್ಲುಗಳು ಬರುತ್ತವೆ ಎಂದು ಹೇಳಿದ್ದಾರೆ. ಈ ಟ್ಯಾಕ್ಸ್ ಹಾಕುವುದರಿಂದ ಎಷ್ಟು ತೊಂದರೆಯಾಗುತ್ತದೆ, ಎಷ್ಟು ಮಟ್ಟಿಗೆ ಇದರ ಪರಿಣಾಮವಾಗುತ್ತದೆ, ಇದು ಯಾವುದನ್ನೂ ಯೋಚನೆ ಮಾಡದೆ ಈ ಟ್ಯಾಕ್ಸನ್ನು ಹಾಕುತ್ತಾರೆ ಎಂದು ನನಗನಿಸುತ್ತದೆ. ಇದರಿಂದಾಗಿ ಇವತ್ತು ಜನರೊಳಗೆ ಜಿಜ್ಞಾಸೆ ಇದೆ. ಟ್ಯಾಕ್ಸ್ ಹಾಕದೇನೇ ಇರಲಿಕ್ಕೆ ಸಾಧ್ಯವಿದೆ. ಮನಸ್ಸು ಮಾಡಿದರೆ ಈಗಿರತಕ್ಕ ಶಿಥಿಲವಾದ ಆಡಳಿತ ಯಂತ್ರವನ್ನು ಬಿಗಿ ಮಾಡಿದರೆ ಟ್ಯಾಕ್ಸ್ ಆಗಲೀ, ಲ್ಯಾಂಡ್‌ರೆವಿನ್ಯೂ ಸರ್ಚಾರ್ಜುಗಳೇ ಇಲ್ಲದೆ ಮಾಡುವುದಕ್ಕೆ ಅವಕಾಶವಿದೆ. ಉದಾಹರಣೆಗೆ ಹೇಳುವುದಾದರೆ, ಅರ್ಬನ ಲ್ಯಾಂಡ್ ಟ್ಯಾಕ್ಸ್ ಹಾಕಿದ್ದಾರೆ. ಸಾಮಾನ್ಯ ಮನುಷ್ಯನಿಗೆ, 40—50 ಸೈಟ್ ಇಟ್ಟುಕೊಂಡಿರತಕ್ಕವರಿಗೆ, ಒಂದು ಸೈಟಿಗೆ ಇವತ್ತು 50 ರೂಪಾಯಿ ಟ್ಯಾಕ್ಸ್ ಹಾಕುತ್ತಾರೆ. ಅವನಿಗೆ ವರ್ಷಕ್ಕೆ 50 ರೂಪಾಯಿ ಟ್ಯಾಕ್ಸ್ ಹಾಕುವುದಾದರೂ ಯಾವನಿಗೂ ಬೆಂಗಳೂರು, ಹುಬ್ಬಳ್ಳಿ, ಧಾರವಾಡಗಳಲ್ಲಿ ಮನೆಕಟ್ಟಿಕೊಂಡು ಜೀವನ ಮಾಡುವುದಕ್ಕೆ ಆಗುತ್ತದೆಯೇ? ಟ್ಯಾಕ್ಸ್ ಹೆಚ್ಚಿಸುತ್ತಾ ಹೋದರೆ ಮನೆ ಕಟ್ಟುವುದಿಲ್ಲ ಎಂದು ಹೇಳುತ್ತಾರೆ. ಯಾರಾದರೂ ಮನೆ ಕಟ್ಟಿ ಬಾಡಿಗೆಗೆ ಕೊಡು ತ್ತಾರೆಂದರೆ, ಈ ರೀತಿಯಾಗಿ ಟ್ಯಾಕ್ಸು ಹೆಚ್ಚು ಮಾಡುವುದರಿಂದ ಪ್ರಯೋಜನವಾಗುವುದಿಲ್ಲ. ಟ್ಯಾಕ್ಸ್ ಹೆಚ್ಚು ಮಾಡುವುದರಿಂದ ಮನೆ ಕಟ್ಟುವುದು ಕಡಿಮೆಯಾಗುತ್ತದೆ.

ಸರ್ಕಾರದ ಕಡೆಯಿಂದ ಮನೆ ಕಟ್ಟಿದರೆ ದೇಶದಲ್ಲಿ ಮನೆಗಳ ಅಭಾವ ನಿಂತು ಹೋಗು ತ್ತದೆಯೇ? ಪ್ರೈವೇಟ್ ಸೆಕ್ಟಾರ್ ಮನೆ ಕಟ್ಟುವುದಕ್ಕೆ ಎನ್‌ಕರೇಜ್ ಮಾಡಬೇಕು. ಈ ರಾಜ್ಯ ದಲ್ಲಿ ನೀವು ಅನುಸರಿಸುತ್ತಿರುವ ತೆರಿಗೆ ನೀತಿಯಿಂದ ಎಷ್ಟರಮಟ್ಟಿಗೆ ಜನಗಳ ಮೇಲೆ ಪರಿಣಾಮ ವಾಗುತ್ತವೆ ಎನ್ನುವುದನ್ನು ಯೋಚನೆ ಮಾಡಬೇಕು. ಒಂದು ಉದಾಹರಣೆ ಹೇಳುವುದಾದರೆ, ಇವೊತ್ತು ಸೇಲ್ಸ್‌ಟ್ಯಾಕ್ಸ್ ಹಾಕುತ್ತೀರಿ; ಜೊತೆಗೆ ಪ್ರೊಹಿಬಿಷನ್ ಪಾಲಿಸಿ ರಿಲ್ಯಾಕ್ಸ್ ಮಾಡುತ್ತೀರಿ. ಈ ಸಭೆಯೊಳಗೆ ಇದರ ವಿಚಾರದಲ್ಲಿ ಸಾಕಷ್ಟು ಚರ್ಚೆ ನಡೆದಿದೆ. ಒಂದು ಕಡೆಯಿಂದ ಬರತಕ್ಕ ಆದಾಯ ಇನ್ನೊಂದು ಕಡೆ ಹೊರಟು ಹೋಗುತ್ತಿದೆ. ಸೇಲ್ಸ್ ಟ್ಯಾಕ್ಸ್ ಜಾಸ್ತಿ ಮಾಡುತ್ತೀರಿ ಇದ ರಿಂದ ಧಾರಣೆವಾಸಿ ತನ್ನಷ್ಟಕ್ಕೆ ತಾನೇ ಹೆಚ್ಚಿ ಹೋಗುತ್ತದೆ. ಧಾರಣೆವಾಸಿಗಳನ್ನು ಕಡಿಮೆ ಮಾಡಿ ಎಂಬ ಕೂಗು ಇದೆ. ಧಾರಣೆವಾಸಿಗಳು ಹೆಚ್ಚು ಹೆಚ್ಚುತ್ತಾ ಇರುವುದನ್ನು ಕಡಿಮೆ ಮಾಡುವುದಕ್ಕೆ ಇದು ಮಾರ್ಗ ಎಂದು ಹೇಳಿದರೆ ಅದು ತಪ್ಪು ಭಾವನೆ. ಟ್ಯಾಕ್ಸ್ ಹಾಕುವಾಗ ಪರಿಣಾಮ ಏನು ಆಗುತ್ತದೆ? ಎಲೆಕ್ಟ್ರಿಕಲ್ ಗೂಡ್ಸ್, ಲಕ್ಷುರಿ ಆರ್ಟಿಕಲ್ಸ್ ಮೇಲೆ ಟ್ಯಾಕ್ಸ್ ಹೆಚ್ಚು ಮಾಡುವುದರಿಂದ ಅದನ್ನು ಉಪಯೋಗ ಮಾಡುವವರ ಸಂಖ್ಯೆ ಕಡಿಮೆ ಆಗುತ್ತದೆ. ವ್ಯಾಪಾರ ಕಡಿಮೆ ಆಗುತ್ತದೆ. ಅದರ ಪರಿಣಾಮ ಲೇಬರ್ ಫೀಲ್ಡ್‌ನಲ್ಲಿ ಆಗುತ್ತದೆ. ಅನ್‌ಎಂಪ್ಲಾಯಮೆಂಟ್ ಪ್ರಾಬ್ಲಮ್ ದಿನೇ ದಿನೇ ಜಾಸ್ತಿ ಆಗುತ್ತಿದೆ. ಟ್ಯಾಕ್ಸ್ ಹಾಕುವುದರಿಂದ ಸಾಮಾನ್ಯ ಮನುಷ್ಯನಿಗೆ ಖರ್ಚು ಹೆಚ್ಚಾಗಲು ಅವಕಾಶವಾಗುತ್ತದೆ. ರಾಜ್ಯಪಾಲರು ಒಂದು ಪಾಲಿಸಿ ಸ್ಟೇಟ್‌ಮೆಂಟ್ ಮಾಡುವಾಗ, ಒಂದು ನೀತಿಯನ್ನು ಹಾಕುವಾಗ ಅದರಿಂದ ದೇಶದಲ್ಲಿ ಏನು ಪರಿಣಾಮವಾಗುತ್ತದೆ ಎನ್ನುವುದನು ಯೋಚನೆಮಾಡಿ ಮಾಡಬೇಕು. ಟ್ಯಾಕ್ಸ್ ಹಾಕುತ್ತೇವೆ ಎನ್ನುವ ಒಂದು ದೃಷ್ಟಿಯಿಂದ ಹಾಕಿದರೆ ಸರಿ ಹೋಗುವುದಿಲ್ಲ ಎಂದು ಹೇಳುತ್ತೇನೆ. ಇದುವರೆಗೆ ಮೂರು ಪಂಚವಾರ್ಷಿಕ ಯೋಜನೆಗಳನ್ನು ಜನರ ಆರ್ಥಿಕ ಪರಿಸ್ಥಿತಿ ಉತ್ತಮಪಡಿಸುವ ದೃಷ್ಟಿಯಿಂದ ಮಾಡಿದ್ದೀರಿ. ಪ್ರೊಡಕ್ಷನ್ ಹೆಚ್ಚು ಮಾಡಬೇಕು ಎಂದು ಹೇಳುವಾಗ ಸೋಷಿಯಲ್ ಸೆಕ್ಯೂರಿಟಿ; ಸೋಷಿಯಲ್ ಸರ್ವಿಸಸ್ ಎಷ್ಟರಮಟ್ಟಿಗೆ ಪ್ರಗತಿ ಸಾಧಿಸಿದೆ ಎನ್ನುವ ಬಗ್ಗೆ ಗಮನ ಕೊಡಬೇಕು. ಒಂದು ಕಡೆ ಆರ್ಥಿಕ ಪ್ರಗತಿ ಆಗಿ ಇನ್ನೊಂದು ಕಡೆ ಸೋಷಿಯಲ್ ಅಂಡ್ ಮಾರಲ್ ಆಸ್ಪೆಕ್ಟ್ಸ್ ಆಫ್ ಲೈಫ್ ಬೆಳೆಸುವುದಕ್ಕೆ ಅವಕಾಶ ಕೊಡದೇ ಹೋದರೆ ಅದರಿಂದ ಯಾವ ದುಷ್ಪರಿಣಾಮವಾಗುತ್ತದೆ ಎನ್ನುವುದಕ್ಕೆ ಅನೇಕ ನಿದರ್ಶನಗಳನ್ನು ಕೊಡಲಿಕ್ಕೆ ಬರುತ್ತದೆ. ಈ ಬಗ್ಗೆ ಹೆಚ್ಚಿನ ಪರಿಶೋಧನೆ ಮಾಡಿ ಅದರಿಂದ ಆಗತಕ್ಕ ಒಳ್ಳೆಯ ಮತ್ತು ಕೆಟ್ಟ ಪರಿಣಾಮಗಳನ್ನು ಹೇಳಬೇಕಾಗಿತ್ತು. Unemployment among the educated is rising very steeply. ಕ್ವಾಲಿಫೈಡ್ ಟೆಕ್ನಿಕಲ್ ಪೀಪಲ್ ಅವರಲ್ಲೂ ಕೂಡ ನಿರುದ್ಯೋಗ ಜಾಸ್ತಿ ಆಗುತ್ತಿದೆ. ಜೂನಿಯರ್

ಸ್ಕೂಲ್ಸ್ ಸ್ಟಾರ್ಟ್ ಮಾಡುತ್ತೇವೆಂದು ಹೇಳುತ್ತಾರೆ. ಜೂನಿಯರ್ ಟೆಕ್ನಿಕಲ್ ಸ್ಕೂಲ್ಸ್ ಮಾಡಬೇಕು. ಅದಕ್ಕೆ ನನ್ನ ವಿರೋಧವಿಲ್ಲ. ಇವೊತ್ತು ಟ್ರೇಡ್ಸ್‌ನಲ್ಲಿ ಟ್ರೈನಿಂಗ್ ಆದವರಿಗೆ ಅನೇಕರಿಗೆ ಕೆಲಸ ಸಿಕ್ಕಿಲ್ಲ. ಏತಕ್ಕೆ ಸಿಕ್ಕಿಲ್ಲ ಎಂದು ಯೋಚನೆ ಮಾಡಿ. ತಾವು ಕೊಡುವ ವಿದ್ಯೆಯಲ್ಲಿ ತಪ್ಪು ಇದೆಯೇ, ತಮ್ಮ ನೀತಿಯಲ್ಲಿ ತಪ್ಪು ಇದೆಯೇ ಅಥವಾ ಅನ್‌ಎಂಪ್ಲಾಯ್‌ಮೆಂಟಿನಲ್ಲಿ ತಪ್ಪು ಇದೆಯೇ ಎನ್ನುವುದನ್ನು ಯೋಚನೆ ಮಾಡಿ, ಈ ವಿಚಾರದಲ್ಲಿ ಸರಿಯಾದ ಪ್ರೋತ್ಸಾಹವನ್ನು ಕೊಡತಕ್ಕ ರೀತಿಯೊಳಗೆ ರಾಜ್ಯಪಾಲರು ಹೇಳಬೇಕಾಗಿತ್ತು. ಸೋಷಿಯಲ್ ಸೆಕ್ಯೂರಿಟಿ ಇದೆ? ಸರ್ಕಾರಿ ನೌಕರರನ್ನು ಬಿಟ್ಟರೆ ಇನ್ನು ಯಾರಿಗೂ ಸೋಷಿಯಲ್ ಸೆಕ್ಯೂರಿಟಿ ಇಲ್ಲ. ಅದನ್ನು ಯೋಚನೆ ಮಾಡಬೇಕು. ಆಕ್ಸಿಡೆಂಟ್ ಆದರೆ, ಕೆಲಸದಿಂದ ನಿವೃತ್ತಿ ಆದರೆ, ಅಂಥವರಿಗೆ ಸೆಕ್ಯೂರಿಟಿ ಇಲ್ಲ. Social security is found in the Constitution. ಇವೊತ್ತು ವಯಸ್ಸು ಆದವರಿಗೆ, ಕೆಲಸದಲ್ಲಿ ನಿವೃತ್ತಿ ಆದವರಿಗೆ ಕೆಲಸ ಮಾಡುವುದಕ್ಕೆ ಕೆಲಸ ಸಿಕ್ಕದೇ ಹೋದವರಿಗೆ ಅಂಥವರನ್ನು ನೋಡಿಕೊಳ್ಳುವವರು ಯಾರು ? ಇದು ಸಮಾಜದಲ್ಲಿ ಬಹಳ ದೊಡ್ಡ ಪ್ರಶ್ನೆಯಾಗಿದೆ. ಸೋಷಿಯಲ್ ಸೆಕ್ಯೂರಿಟಿ ಬಗ್ಗೆ ಏನು ಮಾಡಬೇಕು ಎನುವುದನ್ನು ಯೋಚನೆ ಮಾಡಬೇಕು. It is found only in the Constitution.

ಪಾಲಿಸಿ ವಿಷಯ ಹೇಳುತ್ತಾ ಇರುವಾಗ, ಇಷ್ಟು ಎಲೆಕ್ಟ್ರಿಸಿಟಿಗೋಸ್ಕರ ಪ್ರೊವೈಡ್ ಮಾಡುತ್ತೇವೆ, ಇಷ್ಟು ಎಲೆಕ್ಟ್ರಿಸಿಟಿ ಪ್ರೊಡ್ಯೂಸ್ ಮಾಡಿದ್ದೇವೆ ಎಂದು ಹೇಳಿದ್ದಾರೆ. ಪ್ರೊಡ್ಯೂಸ್ ಮಾಡಿ ಏನು ಮಾಡುತ್ತಾರೆ ? ಪಕ್ಕದ ರಾಜ್ಯಕ್ಕೆ ಕೊಟ್ಟಿದ್ದಾರೆ. ಅವರು ಉಪಯೋಗ ಮಾಡಿಕೊಳ್ಳುತ್ತಿದ್ದಾರೆ. ಟ್ಯಾರಿಫ್ ಹೆಚ್ಚಾಗಿ ಹಾಕಿದರೆ, ಆಲ್ಟರ್‌ನೇಟೀವ್ ಸೋರ್ಸಸ್ ಆಫ್ ಪವರ್ ಉಪಯೋಗಿಸಿಕೊಳ್ಳಲಿಕ್ಕೆ ಜನರು ಪ್ರಯತ್ನ ಮಾಡುತ್ತಾರೆ. ಹೆಚ್ಚಾಗಿ ಪವರ್ ಇದೆ ಅದನ್ನು ಪಕ್ಕದ ರಾಜ್ಯಕ್ಕೆ ಕೊಡುತ್ತೇರಿ. ಜನರು ಅಲ್ಲಿಗೆ ಹೊರಟು ಹೋಗುತ್ತಾರೆ. ಆದ್ದರಿಂದ ರೇಟು ಹೆಚ್ಚಾಗಿ ಹಾಕುವುದನ್ನು ಯೋಚನೆ ಮಾಡಬೇಕು.

ಬೆಂಗಳೂರು ಸಿಟಿ ವಾಟರ್ ಸಪ್ಲೈ ವಿಚಾರ ತೆಗೆದುಕೊಳ್ಳಿ. ಜನರು ಸತ್ಯಾಗ್ರಹ ಮಾಡುತ್ತಾ ಇದ್ದಾರೆ. ಇದು ಇವೊತ್ತಲ್ಲ ನಾಳೆ ಚರ್ಚೆಗೆ ಬರುತ್ತದೆ. ರೇಟ್ ಫಿಕ್ಸ್ ಮಾಡುವಾಗ ನೀತಿ ನಿಯಮಗಳನ್ನು ಯೋಚನೆ ಮಾಡಿ ಮಾಡಬೇಕು. ಸರ್ಕಾರದ ಅಧಿಕಾರಿಗಳು ಲೆಕ್ಕಚಾರ ಹಾಕಿದರೆ, ಅದೇ ಸರಿ, ಕಡೆಯ ತೀರ್ಮಾನ ಎಂದು ಹೇಳಿ 10 ರೂಪಾಯಿ ವಾಟರ್ ಟ್ಯಾಕ್ಸ್ ಕೊಡುವವರು 100-120 ರೂಪಾಯಿ ವಾಟರ್ ಟ್ಯಾಕ್ಸ್ ಕೊಡುವ ಪರಿಸ್ಥಿತಿ ಬಂದಿದೆ. ಬೆಂಗಳೂರು ನಗರದಲ್ಲಿರತಕ್ಕ ಪ್ರೆಷರ್ ಕಡಿಮೆ ಮಾಡುವ ದೃಷ್ಟಿಯಿಂದ ಅರ್ಬನ್ ಏರಿಯಾ ಟ್ಯಾಕ್ಸ್ ಹಾಕುತ್ತೇವೆಂದು ಪಾಲಿಸಿ ಸ್ಟೇಟ್ಮೆಂಟ್ ಮಾಡಿದರೆ that is a welcome suggestion ಎಂದು ಹೇಳುತ್ತಾರೆ. ಜನ ಬೇರೆ ಎಲ್ಲಾದರೂ ಜೀವನ ಮಾಡಿಕೊಂಡು ಹೋದರೆ ಸರಿ. ಹಾಗಿಲ್ಲವೇ ಹೋದರೆ ತಾವು ಯೋಚನೆ ಮಾಡಬೇಕು. ಇವುಗಳನ್ನು ತೀರ್ಮಾನ ಮಾಡುವಾಗ ಇವುಗಳ ಸಾಧಕಬಾಧಕಗಳನ್ನು ಯೋಚನೆ ಮಾಡಬೇಕು. ಪರಂತು ಪಂಚವಾರ್ಷಿಕ ಯೋಜನೆಗೆ ದುಡ್ಡು ಬೇಕು ಎಂದು ಮಾಡುವುದರಿಂದ ಪ್ರಯೋಜನವಾಗುವುದಿಲ್ಲ. ಆ ಬಗ್ಗೆ ರಾಜ್ಯಪಾಲರು ಹೆಚ್ಚಿನ ಗಮನವನ್ನು ಕೊಡಬೇಕು ಎಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

Sri. R. S. HEGDE (Honnavar).—Mr. Speaker, Sir, while whole heartedly supporting the motion of thanks to the Address of the Governor, it has to be acknowledged that the Address has very brilliantly and with caution and meticulous care outlined the shape of things for 1966-67 and the achievements of the Government in 1964-65. Unfortunately, Sir, it has been rather a human folly, a weakness of democracy which guarantees freedom of speech, that human beings as we are, we are apt to forget the achievements of the past but make much of the so-called shortcomings for which the Government cannot be blamed, which was beyond the control of the Government and none could have done better under the circumstances. Sir, the entire stress in the Address of the Governor is on the development of agriculture sector which requires to be extensively developed with a view to reduce the deficit in food to the minimum. The food production sector has to be tackled and is

(SRI R. S. HEGDE)

being tackled on a emergency basis and it has to be done so for the coming 20 or 25 years. until the State and the country attains self-sufficiency in food.

SRI C. J. MUCKANNAPPA.—We are starving here.

SRI R. S. HEGDE.—You are not starving. People are not starving. You must make a distinction between starving and not eating enough. They may not be able to get so much food as before. Nevertheless the fact remains that people are not starving. Starvation means death. Not a single death is reported. The opposition can go on making it as a political weapon. The various steps that are supposed to be taken by the Government are to be done on an emergent basis until self-sufficiency is reached and the plan must be a longrange one. Bearing this in mind the Government has been devoting equal attention to major, medium and minor irrigation projects. Ignoring any one of these will be detriment to the interest of the State in the food front. The Address rightly points out that 90 per cent of the cultivable area in the State depend upon the monsoon and if the monsoon fails the crops fail. Hence the stress on irrigation, that too minor irrigation has been most opportune and if successfuily implemented and executed, I am sure it is bound to change the face of the State in the food front. Thanks to the efforts of the Government for supplying irrigation pumpsets to the Taluk Development Boards and various Village Panchayats with a view to save the existing crops on account of the failure of the monsoon in 1965 and also to boost up rabi production. In fact a panel of ministers, namely, the P. W. D. Minister and Finance Minister toured with the Chief Engineer and the engineering staff and also Divisional Commissioners over so many districts and they had a meeting of Taluk Board Presidents and Block Development Officers with a view to understand the difficulties of farmers are confronted with, to find out a ready solution if possible and the supply of pumpsets, I am sure, has been the result of the tour of these ministers who had taken a decision on the spot. In the present circumstances the supply of irrigation pumpsets is the only solution by which the paddy lands can be irrigated. The sanction of irrigation wells which are now channelised through the Land Development Banks are expedited. In my assumption the Government have spared no pains to tackle the problem with all its might within the financial frame work of the State. It may be that the finances of the State may not be enough to give a ready solution to the entire problems confronting the State at one stroke. Nevertheless it has to be appreciated whether the action of the Government is not *bona fide* in the discharge of its duties and in the implementation of the various schemes within the frame of limited resources.

It is often repeated specially by the Opposition that 18 years have passed after independence and what is the achievement. In my submission after all 18 years is not a big period in the history of a nation, a

nation where there are many communities of different cultures, a country beset with many difficult problems and it must be noted that the conditions which were prevailing before 18 years have definitely improved economically, socially and educationally. Education is the rock bottom and the very foundation of the successful implementation of the democratic ideals. The Address which narrates the achievements in the field of education for 1964-65 has given a great relief. The secondary education is made free throghout the State in 1966-67.

Sri C. J. MUCKANNAPPA.—Are you providing them all employment? There are more than a lakh unemployed.

Sri R. S. HEGDE.—Employment and education should not be confused. Employment is one thing and education is another. They are not inter-related. It is important to note that during the time of Britishers education was imparted to manufacture clerks and mainly for the purpose of employing people. That attitude has to be changed even by the opposition. Then the idea of making a person pass SSLC was to get clerks posts.! That was the greatest tragedy for India. Education is to have a better kind of life, to be a better citizen, to have better democratic ideals in the democratic set up. That is education. Education never means to get only jobs. If that be the case if tomorrow all the 45 crores of people are educated is there guarantee that the Government is going to give employment to all?

3-00 P.M.

That will be a foolish conception. In England, Sir, 98 per cent of the people educated have not all been employed. Some are doing some other business—agriculture, trade, etc. Whatever knowledge we obtain by way of education is to become a good citizen of the State but not to get employment. If that is the conception it is basically wrong. Sir, a great sigh of relief has been given in the address of the Governor that the Secondary Education is going to be free from 1966-67 and in my estimation our State is a pioneer State in the field of education, in making secondary education free and in carrying the torch of knowledge to every door irrespective of the position in life, caste or creed. The time is not far off when the College education is going to be made free in the near future. The Plan target of secondary High Schools has been exceeded during the Third Plan. What is happening to-day is even the private insitutions and private agencies are coming forward to start new High Schools even if the Government is not going to give grant for the first three years. This shows a great awakening has been created among the people. In the field of education, we should be educated, our people should be educated and they should not starve from the disease of ignorance. A lot of Institutions are coming forward and making facilities for education. It is stated, Sir, by starting new High Schools, there has been a decrease in the standards. It is a false conception Sir. As I personally see in the rural centres, percentage of passes is above 80 per

(SRI R. S. HEGDE)

cent at the S.S.L.C. examination. By starting new High Schools there is a deterioration in the standards of education is falsified.

It is a welcome sign that the Government through the Housing Board has been tackling the problem of housing. Instead of building houses indiscriminately in several places, the Government should make a survey, assess the necessity of each district and prepare a priority list and get the building constructed according to the priorities through panchayat bodies.

Fisheries Department is going to be expended to expiolat the wealth of the sea. I am going to suggest that more boat building yards should be established in some of the coastal Taluks of the State by which the problem of distribution of mechanised launches could be solved.

Finally. I want to tell something about co-operation. Co-operative movement has been gaining moment 40 mills had to be started during 1964-65. But unfottunately, ths progress made in that direction is meagre. Some of the Co-operative Societies have come forward and are willing to purchase the existing mills. The Government should consider this aspect and try to establish Rice Mills. On the whole the achievements of the Government are praiseworthy and no Government under the circumstances would have been able to do better.

Thank you.

ಶ್ರೀ ಎಚ್. ಡಿ. ದೇವೇಗೌಡ (ಹೊಳೆನರಸೀಪುರ).—ಮಾನ್ಯ ಸಭಾಪತಿಗಳೇ, ರಾಜ್ಯಪಾಲರ ಭಾಷಣಕ್ಕೆ ವಂದನೆಯನ್ನು ಅರ್ಪಿಸುವ ನಿರ್ಣಯದ ಮೇಲೆ ಅನೇಕ ಸದಸ್ಯರು ಈಗಾಗಲೇ ಚರ್ಚೆಯನ್ನು ನಡೆಸಿದ್ದಾರೆ. ಈಗತಾನೆ ಭಾಷಣ ಮಾಡಿದಂಥ ಶ್ರೀಮಾನ್ ಆರ್. ಎಸ್. ಹೆಗ್ಗಡೆ ಅವರು ಬಹಳ ಕಠಿಣವಾಗಿ, ವೆಹಿಮೆಂಟ್ ಆಗಿ, ಅದರಲ್ಲಿಯೂ ವಿರೋಧ ಪಕ್ಷದವರು ಟೀಕೆ ಮಾಡುವುದರ ಬಗ್ಗೆ ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿದರು. ಅವರು ಭಾಷಣ ಮಾಡತಕ್ಕ ಕಾಲದಲ್ಲಿ 1965-66ನೆಯ ಇಸವಿಯು ಆಗು ಹೋಗುಗಳು ಹಾಗೂ 1966-67ನೆ ಇಸವಿಗೆ ಸರ್ಕಾರ ಹಾಕಿಕೊಂಡಿರತಕ್ಕ ಧ್ಯೇಯ ಧೋರಣೆಗಳ ಬಗ್ಗೆ ರಾಜ್ಯಪಾಲರು ಮಾಡಿರತಕ್ಕ ಭಾಷಣದಲ್ಲಿ ಅಡಕವಾಗಿದೆ ಎನ್ನುವುದನ್ನು ವ್ಯಕ್ತಪಡಿಸಿದರು. ನಾನು ಒಂದು ಪ್ರಶ್ನೆಯನ್ನು ಕೇಳುವುದಕ್ಕೆ ಇಚ್ಛೆಪಡುತ್ತೇನೆ: 1965-66 ನೆ ಇಸವಿಯಲ್ಲಿ ಸಾಧನೆ ಮಾಡಿರತಕ್ಕ ಅಂಶಗಳನ್ನೇನಾದರೂ ಸರ್ಕಾರ ಒಂದು ಪಟ್ಟಿ ಮಾಡಿ ಸಭೆಯ ಮುಂದೆ ಇಡುವುದಾದರೆ ಸರ್ಕಾರಕ್ಕೆ ನಮ್ಮ ಅಭಿನಂದನೆಗಳನ್ನು ಸಲ್ಲಿಸುತ್ತೇವೆ. ಒಂದೇ ಒಂದು ವಿಷಯದ ಬಗ್ಗೆ ಮಾನ್ಯ ಸದಸ್ಯರನ್ನು ಪ್ರಶ್ನೆ ಮಾಡುವುದಕ್ಕೆ ಇಚ್ಛಿಸುತ್ತೇನೆ. ಈ ದೇಶದಲ್ಲಿ ಈ ದಿವಸ ಪೆಡಂಭೂತವಾಗಿ ಇರತಕ್ಕ ಕ್ಷಾಮವನ್ನು ಓಡಿಸಿ ಜನರಿಗೆ ಆಹಾರ ಒದಗಿಸುವಂತೆ ಮಾಡುವಂಥ ಮಹತ್ಕಾರ್ಯದಲ್ಲಿ 26 ಜನ ಮಂತ್ರಿಗಳು ಎಷ್ಟೋ ಸಾರಿ ಮಂತ್ರಿಮಂಡಲದ ಸಭೆಯನ್ನು ಮಾಡಿ, ಹೊರಗಡೆ ಎಷ್ಟೋ ಸಾರಿ ಪ್ರವಾಸ ಮಾಡಿದ್ದಾರೆ. ಇಷ್ಟಾದರೂ ಎಷ್ಟು ಎಕರೆಗಳಲ್ಲಿದ್ದಂಥ ಸ್ಟ್ಯಾಂಡಿಂಗ್ ಕ್ರಾಪ ಅನ್ನು ಉಳಿಸಿದ್ದಾರೆ ಮತ್ತು 'ರಾಬಿ' ಬೆಳೆಯನ್ನು ಬೆಳೆಸುವುದರ ಬಗ್ಗೆ ಸರ್ಕಾರ ಏನೇನು ವ್ಯವಸ್ಥೆ ಮಾಡಿದೆ ಎನ್ನುವುದರ ಬಗ್ಗೆ ಒಂದು ಪಟ್ಟಿಯನ್ನು ಸಭೆಯ ಮುಂದೆ ಇಡುವುದಾದರೆ ನಮ್ಮ ಟೀಕೆಗಳನ್ನು ವಾಪಸು ತೆಗೆದುಕೊಳ್ಳಲು ಸಿದ್ಧರಾಗಿದ್ದೇವೆ.

ಸ್ವಾಮಿ, ಡಿವಿಜನಲ್ ಕಮಿಷನರ ಆಫೀಸಿನಲ್ಲಿ ಎಷ್ಟೋ ಸಭೆಗಳು ನಡೆಯುತ್ತವೆ. ನಾನು ಡಿವಿಜನಲ್ ಕಮಿಷನರ್ ಆಫೀಸಿಗೆ ಒಂದು ವಿಚಾರ ಪ್ರಸ್ತಾಪ ಮಾಡಲು ಹೋಗಿದ್ದೆ. ಆಗ ಆ ಡಿವಿಜನ್ನಿಗೆ ಸೇರಿದ ಏಳು ಜನ ಎಕ್ಸಿಕ್ಯೂಟಿವ್ ಇಂಜಿನಿಯರುಗಳು, ಸೂಪರಿಂಟೆಂಡಿಂಗ್ ಇಂಜಿನಿಯರು, ಡೆಪ್ಯುಟಿ ಡೈರೆಕ್ಟರು ಹೀಗೆ ಅನೇಕ ಜನ ಅಧಿಕಾರಿಗಳು ಬಂದಿದ್ದರು. ಆ ಸಭೆಗೆ ಆಗಿರತಕ್ಕ ಖರ್ಚು ಎಷ್ಟು, ಅದು ಸಾಧಿಸಿರುವ ಕೆಲಸವೇನು ಎಂದು ನಾನು ಬಹಳ ವ್ಯಥೆಯಿಂದ ಕೇಳಬೇಕಾಗಿದೆ.

ಕೇವಲ ನಾಲ್ಕೈದು ಲಕ್ಷ ರೂಪಾಯಿಗಳನ್ನು ಪರಿಹಾರ ಕಾಮಗಾರಿಗಳಿಗಾಗಲಿ, ಪಂಪ್‌ಸೆಟ್ ತೆಗೆದುಕೊಳ್ಳುವುದಕ್ಕೆ ಆಗಲಿ ಕೊಡುವಂಥ ವ್ಯವಸ್ಥೆಯನ್ನು ಮಾಡುವಾಗ ಅದನ್ನು ವಿತರಣೆ ಮಾಡತಕ್ಕ ರೀತಿಯನ್ನು ನೋಡಿದರೆ ಸರ್ಕಾರಕ್ಕೆ ಮುಂದಾಲೋಚನೆ ಇದೆಯೋ, ಸರಿಯಾದ ತಾರತಮ್ಯವನ್ನು ಇಟ್ಟುಕೊಂಡು ಸರ್ಕಾರ ಆ ವ್ಯವಹಾರವನ್ನು ನಡೆಸಿದೆಯೋ ಎನ್ನುವುದರ ಬಗ್ಗೆ ಯೋಚನೆ ಮಾಡುವುದಾದರೆ ಬಹಳ ಕಠಿಣವಾಗಿ ಸರ್ಕಾರದ ಆಡಳಿತ ನೀತಿಯನ್ನು ಟೀಕೆ ಮಾಡಬೇಕಾಗಿ ಬರುತ್ತದೆ. ಹಾಸನ ಜಿಲ್ಲೆಯನ್ನು ಪ್ರತಿನಿಧಿಸತಕ್ಕ ಶ್ರೀಮತಿ ಯಶೋಧರಮ್ಮ ಅವರು ಮಂತ್ರಿಯಾಗಿದ್ದ ಕಾಲದಲ್ಲಿ ನಮ್ಮ ತಾಲ್ಲೂಕಿನಲ್ಲಿ ಮತ್ತು ನಮ್ಮ ಜಿಲ್ಲೆಯಲ್ಲಿ ಪ್ರವಾಸಮಾಡಿ ಅಲ್ಲಿ ಆಗಬೇಕಾದ ಕೆಲಸಗಳ ಒಂದು ಪಟ್ಟಿಯನ್ನು ಸರ್ಕಾರದ ಮುಂದೆ ಇಟ್ಟರು. ಅದರಲ್ಲಿ ಎಷ್ಟು ಕೆಲಸಗಳು ಕಾರ್ಯಗತವಾಗಿವೆ ಎನ್ನುವುದನ್ನು ಅವರೇ ಹೇಳಿದರೆ ಸಾಕು. ಸರ್ಕಾರ ಜನತೆಯ ಮೌಢ್ಯತೆಯನ್ನು ದುರುಪಯೋಗಪಡಿಸಿಕೊಂಡು ತಮ್ಮ ಬೆನ್ನು ತಟ್ಟಿಕೊಂಡು ಬಹಳ ಕೆಲಸ ಮಾಡಿದ್ದೇವೆ ಎನ್ನುವಂಥ ಮಾತನ್ನು ಹೇಳುವುದಾದರೆ ಅದು ನಿಜವಾಗಿಯೂ ಬಹಳ ಅಗೌರವವನ್ನು, ಕೆಳಮಟ್ಟದ ನೀತಿಯನ್ನು ವ್ಯಕ್ತಪಡಿಸಿದಂತಾಗುತ್ತದೆ. ರಾಜ್ಯಪಾಲರ ಭಾಷಣ ಸೊಸೈಟಿಯ ವರದಿಯಂತಿದೆ ಎಂದರೆ ತಪ್ಪಾಗಲಾರದು.

ರಾಜ್ಯಪಾಲರ ಭಾಷಣವನ್ನು ನೋಡಿ ಅದರಲ್ಲಿರುವುದನ್ನು ಪರಿಶೀಲಿಸಿದರೆ ಯೋಜನೆಗಳಲ್ಲಿ ನೂರಕ್ಕೆ 97 ಭಾಗ ಕಾರ್ಯವನ್ನು ಮಾಡಿದ್ದೇವೆ ಎಂದು ಹೇಳಿದ್ದಾರೆ. ಮೂರನೆಯ ಯೋಜನೆಯಲ್ಲಿ 250 ಕೋಟಿ ರೂಪಾಯಿಗಳನ್ನು ಖರ್ಚು ಮಾಡುವಂಥ ಕೆಲಸಗಳನ್ನು ಸರ್ಕಾರ ತೆಗೆದುಕೊಂಡು ಕಾಲದಲ್ಲಿ ನಮ್ಮ ರಿಸರ್ವ್ 36 ಕೋಟಿ ರೂಪಾಯಿ ಇತ್ತು. ಅದರಲ್ಲಿ 15 ಕೋಟಿ ರೂಪಾಯಿಗಳನ್ನು ತೆಗೆದುಕೊಂಡು ಯೋಜನೆಗೆ ಬೇಕಾದ 250 ಕೋಟಿ ರೂಪಾಯಿಗಳನ್ನು ಭರ್ತಿ ಮಾಡುವುದಕ್ಕೆ ಬದಲಾಗಿ ಇವತ್ತು 36 ಕೋಟಿ ರೂಪಾಯಿಗಳನ್ನೂ ಖರ್ಚು ಮಾಡಿದ್ದಾರೆ. ಕೇವಲ ಫೈನಾನ್ಸಿಯಲ್ ಟಾರ್ಗೆಟ್ ಅಚೀವ್ ಆಗಿದೆ, ಆದರೆ ಏನು ಮಾಡಿದೆ ಎಂದು ಹೇಳುವ ಧೈರ್ಯ ಸರ್ಕಾರಕ್ಕೆ ಇದೆಯೇ ಎಂದು ಸರ್ಕಾರವನ್ನು ಕೇಳಬೇಕಾಗುತ್ತದೆ.

ಯಾವ ಆಧಾರದಮೇಲೆ ಇವತ್ತು 97 ಪರ್ಸೆಂಟ್ ಫೈನಾನ್ಸಿಯಲ್ ಟಾರ್ಜೆಟ್ ರೀಚ್ ಮಾಡುತ್ತೇವೆ ಎಂಬುದನ್ನು ದೃಢೀಕರಿಸುತ್ತೀರಾ ತಮ್ಮ ಅಂಕಿ-ಅಂಶದಿಂದ ಎಂಬುದನ್ನು ಹೇಳಬೇಕು. ಕೇವಲ ತಪ್ಪು ಅಂಕಿ-ಅಂಶಗಳನ್ನು ನಮ್ಮ ಮುಂದೆ ಇಟ್ಟು ನಮ್ಮನ್ನು ಮುಸುಕಿನಲ್ಲಿ ತೆಗೆದುಕೊಂಡು ಹೋಗುತ್ತಾ ಇದ್ದೀರಿ. ಇವತ್ತು 250 ಕೋಟಿ ರೂಪಾಯಿಗಳ ಪ್ಲಾನ್ ಏನಿದೆ ಅದನ್ನು ಕಾರ್ಯಗತ ಮಾಡುವುದರಲ್ಲಿ ಅನುಸರಿಸಬೇಕಾದ ಎಲ್ಲ ವ್ಯವಸ್ಥೆಗಳನ್ನೂ ಮಾಡಿಕೊಂಡಿದ್ದೀರಿ. ಇವತ್ತಿನ ಪರಿಸ್ಥಿತಿ ಏನಿದೆ? 29.1 ಕೋಟಿ ರೂಪಾಯಿಗಳ ಓವರ್‌ಡ್ರಾಫ್ಟ್ ತೆಗೆದುಕೊಂಡಿದ್ದೀರಿ ಅದರಲ್ಲಿ 9.1 ಕೋಟಿ ರೂಪಾಯಿಗಳ ಅನ್‌ಸೆಕ್ಯೂರಿಟೀಸ್ ಇದೆ. ಅನ್‌ಸೆಕ್ಯೂರ್ಡ್ ಡೆಟ್ಸ್ ಇಂದ ಓವರ್‌ಡ್ರಾಫ್ಟ್ ತೆಗೆದುಕೊಂಡಿದ್ದೀರಿ, ಈ ಎಲ್ಲಾ ಅಂಕಿ-ಅಂಶಗಳ ವಿವರಣೆಯನ್ನು ನೋಡುವುದಾದರೆ ಯಾವ ಒಂದು ಆಧಾರದ ಮೇಲೆ 97 ಪರ್ಸೆಂಟ್ ಹಣವನ್ನು ಫೈನಾನ್ಸಿಯಲ್ ಟಾರ್ಜೆಟ್ ಆಗಿ ಇಟ್ಟುಕೊಂಡಿದ್ದೀರಿ? ಫಿಸಿಕಲ್ ಟಾರ್ಜೆಟ್ ಬಗ್ಗೆ ಹೇಳುವುದಿಲ್ಲ; ಅದಕ್ಕೆ ಎವಾಲ್ಯೂಯೇಷನ್ ಡೈರೆಕ್ಟರನ್ನು ನೇಮಕಮಾಡಿ ಯೋಚನೆ ಮಾಡುತ್ತೇವೆ ಎಂದು ಹೇಳಿದ್ದೀರಿ. ಆದರ ಬಗ್ಗೆ ನಾನು ಏನೂ ಹೇಳುವುದಿಲ್ಲ. ಈ ಫೈನಾನ್ಸಿಯಲ್ ಟಾರ್ಜೆಟ್ 97 ಪರ್ಸೆಂಟ್ ಅಲ್ಲ ಎಂದು ಹೇಳಿ ತಾವು ಕೊಟ್ಟಂತಹ ಒಂದೆರಡು ನಿದರ್ಶನಗಳಿಂದ ಹೇಳತಕ್ಕ ಸಾಮರ್ಥ್ಯವನ್ನು ಹೊಂದಿದ್ದೇನೆ ಎಂದು ಹೇಳಿ ಮುಂದಕ್ಕೆ ಹೋಗುತ್ತೇನೆ.

ಸೀಸನಲ್ ಕಂಡೀಷನ್. ಇದು ಯಾರ ಕೈಯಲ್ಲೂ ಇಲ್ಲ. ಶ್ರೀಮಾನ್ ಆರ್. ಎಂ. ಪಾಟೀಲ್ ಅವರು ವಿರೋಧ ಪಕ್ಷದವರು ಮಳೆ ಹೊಯ್ಸಲಿ ನೋಡೋಣ ಎಂದು ಹೇಳಿದರು. ವಿರೋಧ ಪಕ್ಷದವರು ಮಳೆ ಹೊಯ್ಸುವುದಕ್ಕೆ ಆಗುವುದಿಲ್ಲ. ಆಡಳಿತ ಹಿಡಿದಿರತಕ್ಕ ಕಾಂಗ್ರೆಸ್‌ನವರಾಗಲಿ, ಮಂತ್ರಿಗಳಾಗಲಿ ಯಾರಿಂದಲೂ ಈ ಮಳೆ ಹೊಯ್ಸತಕ್ಕ ಶಕ್ತಿ ಇಲ್ಲ ಎಂದು ನಾವು ತಿಳಿದಿದ್ದೇವೆ, ಸೀಸನಲ್ ಕಂಡೀಷನ್ ಅಫೆಕ್ಟ್ ಆದ ಕಾಲದಲ್ಲಿ ಸರ್ಕಾರ ಎಷ್ಟುಮಟ್ಟಿಗೆ ಅವಶ್ಯಕವಾದ ಕೆಲಸಗಳನ್ನು ನಡೆಸಿದ್ದಾರೆ ಎಂಬುದನ್ನು ಯೋಚನೆ ಮಾಡಬೇಕು. ರೈತರಿಗೆ ಕೆಲವು ಸೌಲತ್ತುಗಳನ್ನು ಕೊಡತಕ್ಕ ಬಗ್ಗೆ ತಮ್ಮ ಕಾರ್ಯವನ್ನು ಮುಂದುವರಿಸಿದ್ದೀರಿ. ರಿಲೀಫ್ ಕಾಂಗಾರಿಗಳನ್ನು ಮಾಡುವುದು, ತಕಾವಿ ಸಾಲಗಳನ್ನು ಕೊಡುವುದು, ಲ್ಯಾಂಡ್ ಇಂಪ್ರೂವ್‌ಮೆಂಟ್ ಲೋನ್‌ಗಳನ್ನು ಕೊಡುವುದು ಮತ್ತು ರೈತರಿಗೆ ಅನುಕೂಲವಾಗತಕ್ಕ ಕೆಲವು ಪಂಪ್ ಸೆಟ್ಟುಗಳನ್ನು ಕೊಡುವುದರ ಬಗ್ಗೆ ಸರ್ಕಾರ ತನ್ನ ಸಹಾಯವನ್ನು ರೈತರಿಗೆ ಕೊಡುವುದಕ್ಕೆ ಪ್ರಯತ್ನಮಾಡಿದೆ. ಇದು ಎಷ್ಟು ಮಟ್ಟಿಗೆ ಕಾರ್ಯಗತವಾಗುತ್ತಾ ಇದೆ ಎಂಬುದರ ಬಗ್ಗೆ ಯೋಚನೆ ಮಾಡಬೇಕು. ಇವತ್ತು ನೀವು ಕೊಡತಕ್ಕ ಒಂದು ಸಹಾಯದ ಅಂಶವನ್ನೂ ಪ್ರಸ್ತಾಪಮಾಡಿ ಆಮೇಲೆ ಮುಂದಿನ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಹೋಗುತ್ತೇನೆ. ತಕಾವಿ ಸಾಲ ಹಂಚುವುದರಲ್ಲಿ, ಲ್ಯಾಂಡ್ ಇಂಪ್ರೂವ್

(ಶ್ರೀ ಹೆಚ್. ಡಿ. ದೇವೇಗೌಡ)

ಮೆಂಟ್ ಲೋನ್ ಹಂಚುವುದರಲ್ಲಿ ಎಷ್ಟು ಮಟ್ಟಿಗೆ ಆ ಹಣ ರೈತರ ಕೈ ಸೇರುತ್ತಾ ಇದೆ ಎಂಬ ಬಗ್ಗೆ ನೀವು ಇವತ್ತು ಸರ್ಕಾರದ ವ್ಯವಹಾರ ಬೇಡ, ಯಾವ ಕ್ಷೇತ್ರದಲ್ಲಿ ಚುನಾಯಿತರಾಗಿ ಬಂದು ಈ ಸಭೆಯಲ್ಲಿ ಮಂತ್ರಿ ಸ್ಥಾನವನ್ನು ಅಲಂಕರಿಸಿದ್ದೀರೋ ಆ ಕ್ಷೇತ್ರಕ್ಕೆ ಹೋಗಿ ರೈತನಿಗೆ ಎಷ್ಟು ಮಟ್ಟಿಗೆ ಸಾಲ ದೊರೆಯುತ್ತಾ ಇದೆ ಎಂಬುದನ್ನು ನೋಡಿದ್ದೇ ಆದರೆ ನಿಮಗೆ ಸಂಕಟವಾಗುತ್ತದೆ. ರೈತನಿಗೆ ಕೊಡತಕ್ಕ ಸಾಲ ಕೇವಲ ನೂರು ರೂಪಾಯಿ. ಅದರಲ್ಲಿ ಸುಮಾರು 30-35 ರೂಪಾಯಿಗಳ ಹಣವನ್ನು ಅವನು ಹಿಂಬದಿಯ ವ್ಯವಹಾರಕ್ಕೆ ಖರ್ಚು ಮಾಡಬೇಕಾಗಿ ಬಂದರೆ ನಿಜವಾಗಿಯೂ ಇದು ವ್ಯಥೆಪಡಬೇಕಾದ ವಿಚಾರವಲ್ಲವೇ? ಸರ್ಕಾರ ಏನಾದರೂ ಒಂದು ರೀತಿಯನ್ನು ಇಟ್ಟುಕೊಂಡಿದೆಯೋ? ನೀವು ಯಾವ ರೀತಿ ನೀತಿ-ನಿಯಮಾವಳಿಗಳನ್ನು ಸಡಿಲಪಡಿಸಿದರೂ ಚಿಂತೆ ಇಲ್ಲ. ರೈತನಿಗೆ ಕೊಟ್ಟ ಸಾಲ ವಾಪಸು ಬರದಿದ್ದರೂ ಚಿಂತೆ ಇಲ್ಲ ಕೊಡತಕ್ಕ ಸಹಾಯವನ್ನು ನೇರವಾಗಿ, ಸಂಪೂರ್ಣವಾಗಿ ಅವನ ಕೈ ಸೇರುವಂತೆ ಏರ್ಪಾಡು ಮಾಡದಿದ್ದರೆ ಏನು ಪ್ರಯೋಜನ? ಪ್ರತಿಯೊಂದು ಸಾರಿಯೂ ಜಿಲ್ಲಾಧಿಕಾರಿಗಳಿಗಾಗಲಿ, ಡಿವಿಜನಲ್ ಕಮೀಷನರಿಗಾಗಲೀ ನಮ್ಮ ತಾಲ್ಲೂಕಿಗೆ ತಕಾವಿ ಸಾಲ ಕೊಡಿ ಎಂದು ಹೇಳುವುದಕ್ಕೆ ನಮಗೂ ಮನಸ್ಸಿಗೆ ನೋವಾಗುತ್ತದೆ. ನೀವು ಕೊಡತಕ್ಕ ಹಣ ಬಹಳಮಟ್ಟಿಗೆ ದುರುಪಯೋಗವಾಗುತ್ತಾ ಇದೆ. ರೈತನ ಹೆಸರಿನಲ್ಲಿ ಅವನ ಶೋಷಣೆಯಾಗುತ್ತಾ ಇದೆ. ಇದನ್ನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಅಡ್ ಹಾಕ್ ಬೇಸಿಸ್ ಮೇಲೆ ಹಳ್ಳಿಗಳಲ್ಲಿರತಕ್ಕ ಜನರಿಗೆ ಆಹಾರವನ್ನು ಒದಗಿಸುವುದರ ಬಗ್ಗೆ ಆಹಾರ ಮಂತ್ರಿಗಳ ಒಂದು ಅಂಕಿ-ಅಂಶದ ಮೇಲೆ 7.10 ಲಕ್ಷ ಟನ್ ಒದಗಿಸತಕ್ಕ ಏರ್ಪಾಡನ್ನು ಮಾಡಿದ್ದೇವೆ ಎಂದು ತಿಳಿಸುತ್ತಾ ಇದ್ದಾರೆ. ನಮ್ಮ ಸರ್ಕಾರದ ನೀತಿಯಾದರೂ ಏನು ಎಂದು ಕೇಳಬೇಕಾಗಿದೆ. ಯಾವುದೋ ಒಂದು ಲೆವಿ ಪರಿಮಿತಿಯೊಳಗೆ ಬತ್ತವನ್ನು ಸರ್ಕಾರಕ್ಕೆ ಕೊಡತಕ್ಕವನಿಗೆ ಒಂದು ರೇಟ್‌ನ್ನು ನಿಗದಿ ಮಾಡಿದ್ದೀರಿ, 70 ರೂಪಾಯೋ 80 ರೂಪಾಯೋ ಇದೆ. ಅದರ ಕ್ವಾಲಿಟಿ ಮೇಲೆ. ಇನ್ನುಳಿದ ಬತ್ತವನ್ನು ಯಾವ ರೇಟಿಗೆ ಬೇಕೋ ಆ ರೇಟಿನಂತೆ ಮಾರಿ ಎಂದು ಹೇಳುವ ಮುಖ್ಯ ಮಂತ್ರಿಗಳ ಹೇಳಿಕೆ ಹಾಸ್ಯಾಸ್ಪದವಾಗುತ್ತದೆ, ಅದು ಗೊಂದಲ ಪರಿಸ್ಥಿತಿಗೆ ಎಡೆಮಾಡುತ್ತದೆ. ಇದನ್ನು ಬಹಳ ನೊಂದ ಮನಸ್ಸಿನಿಂದ ಹೇಳಬೇಕಾಗಿದೆ. ಕೋ-ಆಪರೇಟೀವ್ ಸೊಸೈಟಿ ಆಗಲಿ, ಮುನಿಸಿಪಾಲಿಟಿ ಆಗಲಿ, ಲೋಕಲ್ ಬಾಡೀಸ್ ಆಗಲಿ ಯಾರೇ ಆಗಲಿ 20-30 ರೂಪಾಯಿ ಹೆಚ್ಚು ಕೊಟ್ಟು ಲಾಭ ಅಥವಾ ನಷ್ಟವಿಲ್ಲದೆ ವ್ಯಾಪಾರ ಮಾಡಬಹುದು ಎಂದು ಹೇಳಿ ತಿಳಿಸಿದ್ದೀರಿ. ಒಂದು ಬಾಯಲ್ಲಿ ಲೆವಿ ಪರಿಮಿತಿಯೊಳಗೆ ಸರ್ಕಾರದವರು ಒಂದು ರೇಟ್‌ನಂತೆ ಕೊಳ್ಳುತ್ತೇವೆ ಎಂದು ಹೇಳುವುದು ಇನ್ನೊಂದು ಬಾಯಲ್ಲಿ ಲೋಕಲ್ ಬಾಡೀಸ್, ಕೋ-ಆಪರೇಟೀವ್ ಸೊಸೈಟಿಗಳವರು ಓಪನ್ ಮಾರ್ಕೆಟ್‌ನಲ್ಲಿ 20-30 ರೂಪಾಯಿ ಹೆಚ್ಚು ಕೊಟ್ಟು ಲಾಭ ನಷ್ಟ ಇಲ್ಲದೇ ವ್ಯಾಪಾರ ಮಾಡಬಹುದು ಎಂದು ಹೇಳಿ ಇಂತಹ ಒಂದು ವ್ಯವಸ್ಥೆಯನ್ನು ಮಾಡುವುದಕ್ಕೆ ಹೊರಟಿದ್ದೀರಿ. ಸ್ವಾಮಿ ಈ ರೀತಿ ಹೇಳುತ್ತಾ ಹೋದರೆ ನಿಮ್ಮ ನೀತಿಯಾದರೂ ಏನು? ಸರ್ಕಾರದಲ್ಲಿ ಯಾವುದಾದರೂ ಒಂದು ನೀತಿ ನಿಯಮ ಇದೆಯೇ ಎಂದು ಇವತ್ತಿನ ದಿವಸ ತಾವು ಬಿಚ್ಚು ಮನಸ್ಸಿನಿಂದ ವಿಚಾರ ಮಾಡಿನೋಡಿ. ಇದು ಕೇವಲ ಟೀಕೆಯ ಮಾತು ಅಲ್ಲ. ಮೊನ್ನೆಯಲ್ಲಿ ಮಾನ್ಯ ಮಂತ್ರಿಯವರು ಸೆಪ್ಟೆಂಬರ್‌ನಿಂದ ಮನಾಪಲಿ ಪ್ರೊಕ್ಯೂರ್‌ಮೆಂಟ್ ಮಾಡುತ್ತೇವೆ ಎಂದು ಹೇಳಿದ್ದಾರೆ, ಇವತ್ತೇ ಏಕೆ ಮಾಡಬಾರದು ಅಲ್ಲಿಯವರೆಗೂ ಏಕೆ ಕಾಯಬೇಕು, ಅದರ ಅವಶ್ಯಕತೆಯಾದರೂ ಏನಿದೆ ಎಂದು ನಾನು ಕೇಳುತ್ತೇನೆ. ಜನ ಸತ್ತು ಹೋಗಿದ್ದಾರೆಯೇ ಎಂದು ಶ್ರೀಮಾನ್ ಆರ್. ಎಸ್. ಹೆಗ್ಗಡೆಯವರು ಕೇಳಿದರು. ಸತ್ತು ಹೋದರೇ ಸ್ಟಾರ್ವೇಷನ್ ಇದೆ ಎಂದು ಅರ್ಥವಲ್ಲ. ಒಂದು ದಿನ ಆಗಲಿ, ಒಂದು ವಾರ ಆಗಲಿ ಉಪವಾಸಮಾಡಿ ಜನ ಬದುಕಲಿಕ್ಕೆ ಸಾಧ್ಯವಿದೆ. ಬದುಕಿದ್ದ ಮಾತ್ರಕ್ಕೆ ಸ್ಟಾರ್ವೇಷನ್ ಇಲ್ಲ ಎಂದು ಅರ್ಥವಲ್ಲ. ಜನತೆಯನ್ನು ತಾವು ಈ ಡಿ.ಐ.ಆರ್. ಮುಂತಾದ ಕಾನೂನುಗಳಿಂದ ಹದ್ದುಬಸ್ತಿನಲ್ಲಿಡತಕ್ಕ ಪರಿಸ್ಥಿತಿ ಸನ್ನಿವೇಶ ದೇಶದಲ್ಲಿರುವುದರಿಂದ ತಾವು ಯಾವ ರೀತಿ ಬೇಕಾದರೂ ವ್ಯವಹಾರ ನಡೆಸುವುದಕ್ಕೆ ಹೊರಟಿದ್ದೀರಿ.

ಇನ್ನು ಕೋ-ಆಪರೇಟೀವ್ ಇನ್‌ಸ್ಟಿಟ್ಯೂಷನ್ಸ್ ಬಗೆ ಒಂದು ಮಾತನ್ನು ಹೇಳಿ ಮುಗಿಸುತ್ತೇನೆ. ಈ ಕೋ-ಆಪರೇಟೀವ್ ಇನ್‌ಸ್ಟಿಟ್ಯೂಷನ್‌ಗಳಲ್ಲಿ ಅಧಿಕಾರಿಗಳ ನಿರ್ಮಾಣ ಆಗಿದೆ. 16 ಜನ ಜಾಯಿಂಟ್ ರಿಜಿಸ್ಟ್ರಾರ್‌ಗಳು ಇದ್ದಾರೆ; ಒಬ್ಬರು ರಿಜಿಸ್ಟ್ರಾರ್ ಅವರು ಇದ್ದಾರೆ. ಒಂದು ಕಡೆ ನಮ್ಮ ಪ್ಲಾನ್‌ಗಳನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ನಮ್ಮಲ್ಲಿ ಹಣ ಇಲ್ಲ ಎಂದು ಹೇಳುತ್ತೀರಿ. ಇನ್ನೊಂದು ಕಡೆ ಪ್ರತಿ ವರ್ಷ ಒಬ್ಬೊಬ್ಬ ದೊಡ್ಡ ದೊಡ್ಡ ಅಧಿಕಾರಿಗಳ ಹುದ್ದೆಯನ್ನು ನಿರ್ಮಾಣ ಮಾಡುತ್ತಾ ಇದ್ದೀರಿ. ಇದು ಯಾವ ರೀತಿಯ ವ್ಯವಹಾರ ಎಂಬುದು ತಿಳಿಯದಾಗಿದೆ. 16 ಜನ ಜಾಯಿಂಟ್ ರಿಜಿಸ್ಟ್ರಾರ್ ಅವರ ಅವಶ್ಯಕ ಏನಿತ್ತು ಎಂದು ಹೇಳಿ ನಾನು

ಇವತ್ತಿನ ದಿವಸ ಪ್ರಶ್ನೆಮಾಡುತ್ತೇನೆ. ಇವತ್ತು ಅಲ್ಲ ಆದರೂ ನಡೆಯುತ್ತಾ ಇರುವುದಾದರೂ ಏನು? ಈ ಮಾನ್ಯ ಸಭೆಗೆ ಬಂದಂಥ ಪ್ರಥಮದಲ್ಲೇ ನಾನು ಒಂದು ಪ್ರಶ್ನೆಯನ್ನು ಹಾಕಿ ಸ್ಟೇಟ್ ಅಪೆಕ್ಸ್ ಬ್ಯಾಂಕಿನಲ್ಲಿ ನಡೆಯತಕ್ಕ ವ್ಯವಹಾರದ ಬಗ್ಗೆ ತನಿಖೆಯನ್ನು ನಡೆಸಬೇಕೆಂದು ಪ್ರಾರ್ಥನೆಯನ್ನು ಮಾಡಿದೆ. ಅದರ ಬಗ್ಗೆ ಒಂದು ಆರ್ಡರ್ ಮಾಡಿದಿರಿ, ಅಥವಾ ಮಾಡುತ್ತೇವೆ ಎಂದು ಹೇಳಿ ಇದೇ ಶಾಸನಸಭೆಯಲ್ಲಿ ತಮ್ಮ ಒಂದು ಭರವಸೆಯನ್ನು ಕೊಟ್ಟಿರಿ. ಈಗ ವಿಚಾರಣೆ ಮಾಡುವ ಕಾಲಕ್ಕೆ ಮೂರು ಜನ ಅಧಿಕಾರಿಗಳು ಆ ಸ್ಥಾನ ಬಿಟ್ಟು ಹೊರಟುಹೋಗಿದ್ದರು. ಮ್ಯಾನೇಜಿಂಗ್ ಬಾಡಿಯವರ ಪ್ರಭಾವಕ್ಕೆ ಒಳಗಾಗಿ ಮೂರು ಜನ ಅಧಿಕಾರಿಗಳನ್ನು ಬದಲಾಯಿಸತಕ್ಕ ಒಂದು ನಿರ್ವೀರ್ಯ ಸರ್ಕಾರಕ್ಕೆ ಉಂಟಾಯಿತೇ ಎಂದು ನಾನು ಪ್ರಶ್ನೆಮಾಡುತ್ತೇನೆ. ಲಕ್ಷಾಂತರ ರೂಪಾಯಿ ವ್ಯವಹಾರ ಮಾಡತಕ್ಕ ಸ್ಟೇಟ್ ಅಪೆಕ್ಸ್ ಬ್ಯಾಂಕಿನಲ್ಲಿ ತನಿಖೆ ಮಾಡತಕ್ಕ ಧೈರ್ಯ, ಎದೆಗಾರಿಕೆ ಸರ್ಕಾರಕ್ಕೆ ಇಲ್ಲವೇ ಹೋದರೆ ಸರ್ಕಾರದ ಆಡಳಿತ ಹೇಗೆ ನಡೆಸುತ್ತಾ ಇದ್ದೀರಿ, ಸರ್ಕಾರ ಇದೆಯೇ ಮೈಸೂರು ಸಂಸ್ಥಾನದಲ್ಲಿ ಅಂತ ಹೇಳಲು ಅನುಮಾನವಾಗುತ್ತಾ ಇದೆ. ಇವತ್ತು ಸ್ಟೇಟ್ ಮಾರ್ಕೆಟಿಂಗ್ ಕೋ-ಆಪರೇಟೀವ್ ಸೊಸೈಟಿಯಲ್ಲಿ ನಡೆದಿರತಕ್ಕ ವ್ಯವಹಾರದ ಬಗ್ಗೆ ವಿಚಾರಣೆ ಮಾಡಲು ಹೊರಟಿದ್ದೇ ಆದರೆ ಕೇವಲ ಫರ್ಟಿಲೈಸರ್ಸ್‌ನಲ್ಲಿ 15 ಲಕ್ಷ ರೂಪಾಯಿಗಳ ದುರ್ವ್ಯವಹಾರವಾಗಿದೆ ಎಂದರೆ ಈ ಇಲಾಖೆಯ ಬಗ್ಗೆ ಇದು ಯಾವ ದಿಕ್ಕಿನಲ್ಲಿ ಕೆಲಸಮಾಡುತ್ತಾ ಇದೆ ಎಂಬುದನ್ನು ತಾವು ಯೋಚನೆ ಮಾಡಬೇಕಾಗಿದೆ. ಹೀಗೆ ಹೇಳುತ್ತಾ ಹೋದರೆ ಬೇಕಾದಷ್ಟು ಇದೆ. ನಮ್ಮ ತಾಲ್ಲೂಕಿನಲ್ಲಿ ರೆಗ್ಯುಲೇಟೆಡ್ ಮಾರ್ಕೆಟ್ ಕಮಿಟಿ ಇದೆ. ಅದನ್ನು ಹೊಸದಾಗಿ ಪ್ರಾರಂಭ ಮಾಡಿದರು. ಅದಕ್ಕೆ 4-5 ಸಾವಿರ ರೂಪಾಯಿ ಹಣ ಸರ್ಕಾರ ಕೊಟ್ಟಿದೆ. ಯಾರೋ ಒಬ್ಬರು ಮಂತ್ರಿಗಳಿಂದ ಅದರ ಓಪನಿಂಗ್ ಸೆರಿಮನಿ ಮಾಡಿಸಲಿಕ್ಕೆ ಅದಕ್ಕೆ 800 ರೂಪಾಯಿ ಖರ್ಚುಮಾಡಲು ನೂರಾರು ರೂಪಾಯಿ ಟಿ.ಎ. ಡಿ.ಎ ಖರ್ಚು, ಸರ್ಕಾರದ ಅಧಿಕಾರಿಗಳಿಗೆ ನೂರಾರು ರೂಪಾಯಿ ಸಂಬಳ ಕೊಡಲು ಒಂದು ಬಡ್ಜೆಟ್ ತಯಾರು ಮಾಡಿದ್ದಾರೆ. ಹೀಗಾದರೆ ಸರ್ಕಾರ ಅದರಿಂದ ಏನಾದರೂ ಆದಾಯವನ್ನು ನಿರೀಕ್ಷಣೆ ಮಾಡುವುದಕ್ಕೆ ಸಾಧ್ಯವಿದೆಯೇನು ಎಂದು ನಾನು ಪ್ರಶ್ನೆ ಮಾಡಬೇಕಾಗಿದೆ. ಇದರಿಂದ ರೈತನ ಉದ್ದೇಶ ಸಫಲವಾಗುತ್ತದೇನು ಎಂದು ಕೇಳುತ್ತೇನೆ. ಆದುದರಿಂದ ರೆಗ್ಯುಲೇಟೆಡ್ ಮಾರ್ಕೆಟ್ ಬಗ್ಗೆ ವಿಚಾರಣೆ ಮಾಡಿ ಸರಕಾರ ತಿಳಿಸಬೇಕು ಎಂದು ಹೇಳುತ್ತೇನೆ.

ಇನ್ನು ಇರಿಗೇಷನ್ ಬಗ್ಗೆ ಒಂದು ವಿಚಾರ ಪ್ರಸ್ತಾಪ ಮಾಡುತ್ತೇನೆ. ಅನೇಕ ಭಾಷಣಗಳನ್ನು ಮಂತ್ರಿಗಳು ಮಾಡುತ್ತಾರೆ. ಈ ಸಭೆಗೆ ಎಷ್ಟೋ ಅಂಕಿ ಅಂಶಗಳನ್ನು ಕೊಟ್ಟಿದ್ದಾರೆ. ಮೈಸೂರು ದೇಶ ಹೆಚ್ಚು ನೀರಾವರಿ ಸೌಲಭ್ಯ ಈಗ ಇಲ್ಲ ಎಂದು ಹೇಳುತ್ತಾರೆ. ಆದರೆ ನಾವು ಇರಿಗೇಷನ್ ಪೊಟೆನ್ಸಿಯಾಲಟಿ ವಿಚಾರದಲ್ಲಿ ಹಿಂದೆ ಉಳಿದಿದ್ದೇವೆ. ಮದ್ರಾಸ್ ಆಂದ್ರ ರಾಜ್ಯದಲ್ಲಿ ಹೆಚ್ಚು ಶಕ್ತಿ ಇದೆ ಎಂದು ಹೇಳತಕ್ಕಂಥಾದ್ದನ್ನು ಕೇಳಿದ್ದೇನೆ. ನಮ್ಮ ರಾಜ್ಯದ ಶಕ್ತಿ ಹೆಚ್ಚಿಸುವುದಕ್ಕೆ ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ? ರಾಜ್ಯಪಾಲರವರ ಭಾಷಣಕ್ಕೆ ವಂದನಾರ್ಪಣೆ ಮಾಡುವ ನಿರ್ಣಯದ ಮೇಲಿನ ಚರ್ಚೆಗೆ ಉತ್ತರ ಕೊಡುವಾಗ್ಗೆ ಈ ಅಂಶವನ್ನು ತಿಳಿಸಬೇಕು ಎಂದು ಕೇಳಿಕೊಳ್ಳುತ್ತೇನೆ. ಇದೇ ಮಾನ್ಯ ಸಭೆಯಲ್ಲಿ ಕಾವೇರಿ ಬೇಸಿನ್‌ನಲ್ಲಿ ಪೂರ್ಣ ನೀರು ಉಪಯೋಗಿಸುವುದಕ್ಕಾಗಿ ಎರಡು ದಿವಸದವರೆಗೆ ಒಂದು ಖಾಸಗಿ ನಿರ್ಣಯದ ಮೇಲೆ ಚರ್ಚೆ ನಡೆದಿದೆ. ಆ ನಿರ್ಣಯಕ್ಕೆ ಉತ್ತರ ಕೊಡುವಾಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಎಲ್ಲ ಪ್ರಯತ್ನ ಮಾಡುತ್ತೇವೆಂದು ಅವರು ಈ ಸಭೆಗೆ ಆಶ್ವಾಸನೆ ಕೊಟ್ಟಿದ್ದರು. ಅವರ ಆಶ್ವಾಸನೆ ಯಾವ ರೀತಿ ಕಾರ್ಯಗತವಾಗಿದೆ! ಕರಾರು ಮಾಡಿದ ಪ್ರಕಾರ ನೀರು ಉಪಯೋಗಿಸ ಬೇಕಾದ ಅವಧಿ 1974 ರಲ್ಲಿ ಮುಗಿದು ಹೋಗುತ್ತದೆ. ಈ ಕಾಲ ಕಳೆದುಕೊಂಡ ಮೇಲೆ ನಮ್ಮ ಸ್ಥಿತಿ ಏನಾಗುತ್ತದೆ ಎಂಬುದನ್ನು ಯೋಚನೆ ಮಾಡಬೇಕು. ಇದರ ಬಗ್ಗೆ ವಿವರ ಕೊಡ ಬೇಕು. ಮೈಸೂರು ರಾಜ್ಯದಿಂದ ಯಾವುದಾದರೂ ಪತ್ರಿಕೆ ಹೋದರೆ ಆದಕ್ಕೆ ಮದ್ರಾಸ್ ಸರ್ಕಾರ ಏನಾದರೂ ಬೆಲೆ ಕೊಟ್ಟಿದ್ದಾರೆಯೇ? ಕೆ. ಆರ್ ಸಾಗರದಲ್ಲಿ ಒಂದು ಕುಸೆಕ್ಸ ನೀರು ಬಿಡವೆ ಇದ್ದರೆ ನಿಮ್ಮ ತಲೆಯ ಮೇಲೆ ಕುಳಿತು ನೀರು ಬಿಡಿಸಲು ಮದ್ರಾಸ ಸರಕಾರ ಅಲ್ಲಿ ಒಬ್ಬ ಎಂಜಿನಿಯರ್ ಇಟ್ಟಿದ್ದಾರೆ. ಅದೇ ರೀತಿ ನಮ್ಮ ಸರಕಾರ ಏನಾದರೂ ಹಿಡಿತ ಇಟ್ಟುಕೊಂಡಿದ್ದಾರೆಯೇ? ಖಾಸಗಿಯಾಗಿ ಎಂಜಿನಿಯರ್ ಕಳಿಸಿ ಪರಿಶೀಲನೆ ಮಾಡಿ ಯೋಚನೆ ಮಾಡಿದ್ದೀರಾ? ಕಾಲಾವಧಿ ಮುಗಿದು ಹೋದ ಮೇಲೆ ಏನು ಮಾಡುತ್ತೀರಿ? ಮಂತ್ರಿಗಳ ಆಶ್ವಾಸನೆ ಶಾಶ್ವತ ಅಲ್ಲ. ಆದುದರಿಂದ ಏನು ಕ್ರಮ ತೆಗೆದುಕೊಳ್ಳಲು ಯೋಚನೆ ಮಾಡಿದ್ದೀರಿ ತಿಳಿಸಬೇಕು. ಅಸ್ತಿಭಾರ ಹಾಕುವುದು ಮಂತ್ರಿಗಳು ಜನಗಳಿಗೆ ಆಶ್ವಾಸನ ಕೊಡುವುದು ಇದರಿಂದ ಜನರ ಹೊಟ್ಟೆ ತುಂಬುವುದಿಲ್ಲ. ಶ್ರೀಮತಿ ಯಶೋಧರಮ್ಮನವರು ನಮ್ಮ ಹಾಸನ ಜಿಲ್ಲೆಗೆ ಬಂದಾಗ್ಗೆ ಹೇಮಾವತಿ ಯೋಜನೆಯ ಅಸ್ತಿಭಾರ ಹಾಕಿದ್ದಾರೆ. ಆದರೆ ಎಷ್ಟರ ಮಟ್ಟಿಗೆ ಕೆಲಸ ಕಾರ್ಯ ನಡೆಯುತ್ತಿದೆ ಎಂಬುದನ್ನು ವಿಚಾರ ಮಾಡಬೇಕು. ಶ್ರೀಮಾನ್ ವೀರೇಂದ್ರ ಪಾಟೀಲರವರು

(ಶ್ರೀ ಎಚ್. ಡಿ. ದೇವೇಗೌಡ)

ಉತ್ತರ ಕೊಡುವಾಗ್ಗೆ ಮೈನರ್ ಇನ್‌ವೆಸ್ಟಿಗೇಷನ್ ಇಲಾಖೆಯಿಂದ ಹತ್ತು ಲಕ್ಷ ಪ್ರೊಜೆಕ್ಟ್‌ನ ಇನ್‌ವೆಸ್ಟಿಗೇಷನ್ ಮಾಡಿದೆ ಎಂದು ಉತ್ತರ ಕೊಟ್ಟಿದ್ದಾರೆ. ಇದಕ್ಕೆ ಎಷ್ಟು ಹಣ ಒದಗಿಸಿದ್ದೀರಿ? ಶೇಕಡ ಎಷ್ಟು ಹಣ ಇನ್‌ವೆಸ್ಟಿಗೇಶನ್‌ಕ್ಕೆ ಹೋಗಿದೆ ಎಂಬ ಲೆಕ್ಕಾಚಾರ ವಿಚಾರ ಮಾಡಿದ್ದೀರಾ? ಅಧಿಕಾರಿಗಳ ಸಂಬಳಕ್ಕೆ ಎಷ್ಟು ಹಣ ಖರ್ಚಾಗಿದೆ? ಸರಕಾರದ ಇಂಥ ನೀತಿಯಿಂದ ರಾಜ್ಯದ ಎರಡು ಕೋಟಿ ಮೂವತ್ತು ಲಕ್ಷ ಜನರ ಹಿತ ದೃಷ್ಟಿಯಿಂದ ಆಗ ಬೇಕಾದ ಕೆಲಸ ಕಾರ್ಯಗಳು ಸಫರ್ ಆಗುತ್ತಿವೆ. ಆದುದರಿಂದ ಸರಕಾರ ಇದಕ್ಕೆ ತೀವ್ರ ಗಮನ ಕೊಡುವುದು ಅಗತ್ಯ.

ಇನ್ನು ಕೊನೆಯದಾಗಿ ವಿದ್ಯಾಭ್ಯಾಸ ವಿಚಾರ ಹೇಳಿ ನನ್ನ ಮಾತು ಮುಗಿಸಲು ಅಪೇಕ್ಷಿಸುತ್ತೇನೆ. ಶ್ರೀಮಾನ್ ಆರ್. ಎಸ್. ಹೆಗ್ಗಡೆಯವರು ಮಾತನಾಡುತ್ತಾ ಈ ವಿಚಾರ ವಿಸ್ತಾರವಾಗಿ ಹೇಳಿದ್ದಾರೆ. ಸೆಕೆಂಡರಿ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಉತ್ತೇಜನ ಕೊಡುವ ನಿಮಿತ್ತವಾಗಿ ಫೀ ಮಾಫಿ ಮಾಡಲಾಗಿದೆ ಮತ್ತು ಎಲ್ಲ ಮಕ್ಕಳಿಗೆ ಉಚಿತವಾಗಿ ಸೆಕೆಂಡರಿ ವಿದ್ಯಾಭ್ಯಾಸ ಕೊಡಿಸುವ ತೀರ್ಮಾನವನ್ನು ಸರಕಾರದವರು ಕೈಕೊಂಡಿದ್ದಾರೆ ಎಂದು ರಾಜ್ಯಪಾಲರ ಭಾಷಣದಲ್ಲಿ ಹೇಳಿದೆ. ಆದರೆ ಜನತೆಯ ಮೇಲೆ ಬೇರೆ ರೀತಿಯಿಂದ ಈ ಹೊರೆ ಹೊರಿಸುತ್ತಿದ್ದೀರಿ. ಫ್ರೀ ಎಜ್ಯುಕೇಷನ್ ಎಂದು ಹೇಳಿ ಮಕ್ಕಳಿಂದ ಫೀ ಹಣ ವಸೂಲ್ಮಾಡಲಾಗುತ್ತದೆ. ಈ ರೀತಿ ಮಾಡದೆ ಸರಕಾರವೇ ಎಲ್ಲ ಖರ್ಚನ್ನು ಪೂರ್ಣವಾಗಿ ವಹಿಸಿಕೊಂಡು ಪುಕ್ಕಟೆ ವಿದ್ಯಾಭ್ಯಾಸ ಏರ್ಪಾಡು ಇರುವ ಹಾಗೆ ಮಾಡಬೇಕು. ಯಾಕೆಂದರೆ ಜನರಿಂದ ಬೆಟರ್‌ಮೆಂಟ್ ಫೀ ಎಂದು ವಸೂಲ್ಮಾಡುತ್ತಾರೆ, ಖಾಸಗಿ ಸಂಸ್ಥೆಯವರು ಮಕ್ಕಳ ಹೆಸರಿನಲ್ಲಿ ಎಷ್ಟೋ ಹಣ ವಸೂಲ್ಮಾಡುತ್ತಿದ್ದಾರೆ. ಈ ರೀತಿ ಹಣ ವಸೂಲ್ಮಾಡಿಕೊಂಡು ಪುಕ್ಕಟೆ ವಿದ್ಯಾಭ್ಯಾಸ ಕೊಡುತ್ತೇವೆಂದು ಹೇಳುವ ವಾದದಲ್ಲಿ ತಿರುಳು ಇಲ್ಲ. ಇದರಿಂದ ಪ್ರಯೋಜನ ಇಲ್ಲ. ಇದರಲ್ಲಿ ಭ್ರಷ್ಟಾಚಾರ ಎಷ್ಟಿದೆ ಎಂಬುದನ್ನು ಕಂಡು ಹಿಡಿಯಲು ಶ್ರೀಮಾನ್ ಕಂಠಿಯವರು ತನಿಖೆ ಮಾಡುವುದಕ್ಕೆ ಒಂದು ನಿಷ್ಪಕ್ಷಪಾತ ಸಮಿತಿ ನೇಮಕ ಮಾಡಿದರೆ ಒಳ್ಳೆಯದಾಗುತ್ತದೆ. ಬರೀ ಸ್ಲೋಗನ್‌ನಿಂದ ಏನೂ ಪ್ರಯೋಜನವಾಗಲಾರದು.

ಕೊನೆಯದಾಗಿ ಮಾನ್ಯ ಅಧ್ಯಕ್ಷರು ಅಪ್ಪಣೆ ಕೊಟ್ಟರೆ ಇನ್ನೊಂದು ವಿಷಯ ಪ್ರಸ್ತಾಪ ಮಾಡುತ್ತೇನೆ. ಹಳ್ಳಿಗಳಿಗೆ ಹುಲ್ಲು ಸರಬರಾಜು ಮಾಡುವ ಬಗ್ಗೆ ಒಂದು ಮಾತು ಹೇಳಲು ಬಯಸುತ್ತೇನೆ. ಪಿ. ಡಬ್ಲ್ಯು. ಡಿ. ಲಾರಿಗಳಲ್ಲಿ ಹುಲ್ಲು ತರಿಸಿ ಜಾನುವಾರುಗಳಿಗೆ ಸರಬರಾಜು ಮಾಡುವುದರಿಂದ ಜಾನುವಾರುಗಳ ಸಂಕಷ್ಟ ನಿವಾರಣೆಯಾಗುವುದಿಲ್ಲ. ಒಂದು ಟನ್ನಿಗೆ 50 ರೂ. ಕಟಿಂಗ್ ಚಾರ್ಜಸ್ ವಸೂಲ್ಮಾಡುತ್ತಾರೆ. ಕೊಡತಕ್ಕಂಥ ಹುಲ್ಲು ಬಹಳ ಕಡಿಮೆ ಪ್ರಮಾಣದಲ್ಲಿ ಇರುವುದರಿಂದ ಪ್ರತಿಯೊಬ್ಬರಿಗೆ ಒಂದೆರಡು ಕೇಜಿ ಕೂಡ ಬರುವುದಿಲ್ಲ. ಒಂದು ಪಂಚಾಯಿತಿಗೆ ಎರಡು ಲಾರಿ ಹುಲ್ಲು ಕಳಿಸಿದರೂ ಕೂಡ ಐದಾರು ಹಳ್ಳಿಗಳಿಗೆ ಹಂಚಬೇಕಾಗುತ್ತದೆ. ಒಬ್ಬೊಬ್ಬರಿಗೆ ಒಂದೆರಡು ಕೇಜಿ ಹುಲ್ಲು ಬರುವುದಿಲ್ಲವಾದಕಾರಣ ಐದೋ ಹತ್ತೋ ಪೈಸೆ ವಸೂಲ್ಮಾಡುತ್ತಾರೆ. ಇದರಿಂದ ಹಂಚತಕ್ಕ ಅಧಿಕಾರಿಗಳಿಗೆ ಬಹಳ ತೊಂದರೆಯಾಗಿದೆ. ಲೆಕ್ಕ ಹೇಗೆ ಇಡುವುದು? ತೂಕ ಹೇಗೆ ಮಾಡುವುದು? ಆದುದರಿಂದ ಸರಕಾರದವರು ಉದಾರ ಮನೋಭಾವನೆಯಿಂದ ಟ್ರಾನ್ಸ್‌ಪೋರ್ಟೇಷನ್ ಫ್ರೀಯಾಗಿ ಕೊಟ್ಟು ಕಟಿಂಗ್ ಚಾರ್ಜಸ್ ಕೂಡ ವಸೂಲ್ಮಾಡದೆ ಸರಕಾರದವರೇ ಅದನ್ನು ಸಹ ಕೊಟ್ಟು ಬಿಡಬೇಕು ಎಂದು ಕೇಳಿಕೊಳ್ಳುತ್ತೇನೆ. ಕೊನೆಯದಾಗಿ ಮಾನ್ಯ ಅಧ್ಯಕ್ಷರನ್ನು ವಂದಿಸಿ ನನ್ನ ಭಾಷಣ ಮುಗಿಸುತ್ತೇನೆ.

ಶ್ರೀ ವಿ. ಎಸ್. ಲಕ್ಷ್ಮೀಕಾಂತಪ್ಪ (ಸಾಗರ).—ಮಾನ್ಯ ಸಭಾಪತಿಗಳವರೇ, ರಾಜ್ಯಪಾಲರವರ ಭಾಷಣಕ್ಕೆ ವಂದನೆಗಳನ್ನು ಅರ್ಪಿಸುವ ನಿರ್ಣಯವನ್ನು ಅನುಮೋದಿಸುತ್ತಾ ಒಂದೆರಡು ಮಾತುಗಳನ್ನು ಆಡುತ್ತೇನೆ. ನಮ್ಮ ರಾಜ್ಯದ ಮೂರನೇ ಪಂಚವಾರ್ಷಿಕ ಯೋಜನಾವಧಿಯಲ್ಲಿ 250 ಕೋಟಿ ರೂಪಾಯಿ ವೆಚ್ಚವಾಗತಕ್ಕದ್ದೆಂದು ಗೊತ್ತುಪಡಿಸಲಾಗಿತ್ತು. ಇದರಲ್ಲಿ 243 ಕೋಟಿ ರೂಪಾಯಿ ವೆಚ್ಚವಾಗುವುದೆಂಬ ನಿರೀಕ್ಷೆಯಿದೆ ಎಂದು ರಾಜ್ಯಪಾಲರವರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ನಮ್ಮ ಗುರಿ ಸಾಧಿಸಿದ ಬಗ್ಗೆ ಸರಕಾರವನ್ನು ಅಭಿನಂದಿಸುತ್ತೇನೆ. ಈ ಯೋಜನೆಯ ಪ್ರಗತಿ ಸಾಧನೆ ನೋಡಿದರೆ ಸಮಾಧಾನ ಪಡುವಂತೆ ಆಗಿದೆ. ನನ್ನ ಕ್ಷೇತ್ರದಲ್ಲಿ ಇರತಕ್ಕಂಥಾದ್ದು ಸಣ್ಣಪುಟ್ಟ ನೀರಾವರಿ ಸೌಲಭ್ಯಗಳು, ಕೆರೆಗಳು ಇವೆ. ಸೊರಬ್, ಮತ್ತು ಸಾಗರ ತಾಲ್ಲೂಕುಗಳಲ್ಲಿ ಸಣ್ಣ ಪುಟ್ಟ ನೀರಾವರಿಯೋಜನೆಗಳಿವೆ. ಚಿಕ್ಕಪುಟ್ಟ ನೀರಾವರಿ ಯೋಜನೆಗಳಿಗೆ ಎರಡರಷ್ಟು ಹಣ ಖರ್ಚು ಮಾಡಬೇಕೆಂದು ಇಟ್ಟುಕೊಂಡಿರುವುದು ಸಂತೋಷವಾಗುತ್ತದೆ. ಆದರೆ ನಮ್ಮ ಕ್ಷೇತ್ರ ಹತ್ತು ವರ್ಷಗಳ ಹಿಂದೆ ಯಾವ ಪರಿಸ್ಥಿತಿಯಲ್ಲಿ ಇದ್ದಿತೋ ಅದೇ ಪರಿಸ್ಥಿತಿಯಲ್ಲಿ ಇಂದೂ ಇದೆ. ಈ ವರ್ಷ ಕೆರೆಯಲ್ಲಿ ನೀರು ನಿಲ್ಲುವುದಕ್ಕೆ ಸಾಧ್ಯವಾಗದೆ ಇದ್ದುದರಿಂದ ಕ್ಷಾಮ ಪರಿಸ್ಥಿತಿ ಎದುರಿಸ

ಬೇಕಾಗಿದೆ. ಸೊರಬ ಮತ್ತು ಸಾಗರ ತಾಲ್ಲೂಕುಗಳು ಭತ್ತದ ಖಣಜ ಎಂದು ಪ್ರಸಿದ್ಧವಾಗಿದ್ದರೂ ಕೂಡ ಇಂದು ಬರೀ ಬಿದರಿನ ಕಣಜವಾಗಿದೆ. ಕ್ಷಾಮ ಈ ಪ್ರದೇಶದಲ್ಲಿ ಬಂದಿದೆ.

3-30 P.M.

ಅಂಥ ಒಂದು ಸನ್ನಿವೇಶ ಅಲ್ಲಿ ಈಗ ಉಂಟಾಗಿದೆ. ಈ ಭಾಗದಲ್ಲಿ ಏನೊಂದೂ ನೀರಾವರಿ ಕೆಲಸಗಳನ್ನು ಇಲ್ಲಿಯವರೆಗೆ ಸರ್ಕಾರದವರು ಕೈಗೊಳ್ಳದೆ ಇದ್ದ ಕಾರಣದಿಂದ ಇಂದು ಜನರಲ್ಲಿ ಬಹಳ ಕಷ್ಟಕ್ಕೀಡಾಗುವಂತಾಗಿದೆ. ಸರ್ಕಾರದವರು ಈ ವಿಚಾರದಲ್ಲಿ ಅತ್ತಕಡೆಗೆ ಹೆಚ್ಚಿನ ಗಮನವನ್ನು ಕೊಟ್ಟು ದೇಶಾದ್ಯಂತವೂ ಒಂದು ಸರಿಸಮವಾದ ರೀತಿಯಲ್ಲಿ ದೇಶಾಭಿವೃದ್ಧಿ ಹೊಂದುವುದಕ್ಕೆ ಅವಕಾಶ ಉಂಟುಮಾಡಬೇಕೆಂದು ನಾನು ಸರ್ಕಾರದವರನ್ನು ವಿನಮ್ರ್ಯಪೂರ್ವಕದಿಂದ ಕೇಳಿ ಕೊಳ್ಳುತ್ತೇನೆ.

ಹೀಗೆ ನಮ್ಮಲ್ಲಿ ಕೆರೆಗಳ ದುಸ್ಥಿತಿ ಹೀಗಾಗಿರುವಾಗ ಇನ್ನು ಆಹಾರ ಸಮಸ್ಯೆಯ ಕಡೆಗೆ ತಿರುಗು ವುದಾದರೆ: ಸರ್ಕಾರದವರು ಈಗ ನಿರ್ಧಾರ ಮಾಡಿರತಕ್ಕ ಅವರ levy ಪ್ರೊಕ್ಯೂರ್‌ಮೆಂಟ್ ಪಾಲಿಸಿಯು ಬೆಳೆಗಾರರಿಗೆ ಎಷ್ಟರಮಟ್ಟಿಗೆ ಅನುಕೂಲವಾಗಿದೆ, ಇವರು ಲೆವಿಯನ್ನು ಯಾವ ರೀತಿ ನಿಗದಿ ಮಾಡಿದ್ದಾರೆ ಎಂಬುದನ್ನು ಪರಿಶೀಲನೆ ಮಾಡಿದಲ್ಲಿ ಅದರಿಂದ ರೈತರಿಗೆ ಬಹಳ ನಷ್ಟವಾಗು ವಂತಿದೆ. ಸರ್ಕಾರದವರು ಯಾವ ನೀತಿಯನ್ನೇ ಜಾರಿಗೆ ತರಲಿ ಅದರಿಂದ ಬೆಳೆಗಾರನಿಗೆ ಅವನ ಬೆಳೆಗೆ ಒಂದು ಸರಿಯಾದ ಬೆಲೆ ಸಿಕ್ಕುವಂತೆ ಇವರು ನೀತಿಯನ್ನು ರೂಪಿಸಬೇಕಾದ್ದು ಅಗತ್ಯ. ಹಾಗೆ ಮಾಡ ದಿದ್ದರೆ ಬೆಳೆಯತಕ್ಕ ರೈತನಿಗೆ ನಿರುತ್ಸಾಹ ಉಂಟಾಗುವುದು, ಅದರಿಂದ ದೇಶಕ್ಕೆ ಹೆಚ್ಚಿನ ಅಪಾಯ ವಾಗುವುದು. ಅದನ್ನು ಮಾಡದೆ ಸರ್ಕಾರದವರು ರೈತನಿಗೆ ಇವರು ಎಷ್ಟೇ ಸಲದ ಸೌಲಭ್ಯ ನೀರಾವರಿ ಸೌಲಭ್ಯಗಳನ್ನು ಒದಗಿಸಿದ್ದಾಗ್ಯೂ ಅವನ ಬೆಳೆಗೆ ಒಂದು ಸರಿಯಾದ ಬೆಲೆಯನ್ನು ಇವರು ಸಿಗುವಂತೆ ಮಾಡದಿದ್ದರೆ ಅವನಿಗೆ ಕೆಲಸಮಾಡುವುದಕ್ಕೆ ಉತ್ಸಾಹವೇ ಇರುವುದಿಲ್ಲ. ಈ ಒಂದು ದೃಷ್ಟಿಯಿಂದ ಹೇಳುವುದಾದರೆ ಈ ವರ್ಷ ಸರ್ಕಾರದವರು ಬತ್ತಕ್ಕೆ ಹಾಗೂ ಜೋಳಕ್ಕೆ ನಿಗದಿ ಮಾಡಿರತಕ್ಕ ಬೆಲೆಗಳನ್ನು ನೋಡಿದರೆ—ಕೇಂದ್ರ ಸರ್ಕಾರದವರು ಧಾನ್ಯಗಳ ಬಗ್ಗೆ ಒಂದು ಸಪೋರ್ಟ್ ಪ್ರೈಸ್ ಎಂದು ನಿಗದಿ ಮಾಡಿದ್ದರೆ, ನಮ್ಮ ರಾಜ್ಯ ಸರ್ಕಾರದವರು ಪರ್ಚೇಸ್ ಪ್ರೈಸ್ ಎಂಬುದಾಗಿ ನಿಗದಿ ಮಾಡಿದ್ದಾರೆ. ಬತ್ತಕ್ಕೆ ಕೇಂದ್ರ ಸರ್ಕಾರದವರ ಸಪೋರ್ಟ್ ಪ್ರೈಸ್ 39.00 ರೂಪಾಯಿ ಗಳಿದ್ದರೆ ನಮ್ಮ ಸರ್ಕಾರದವರ ಪರ್ಚೇಸ್ ಪ್ರೈಸ್ ಕ್ವಿಂಟಾಲಿಗೆ 42.00 ರೂಪಾಯಿಗಳಿರುತ್ತೆ. ಹೀಗಾಗಿ ಈ ದಿವಸದ ಬತ್ತದ ದರಕ್ಕೂ ಮತ್ತು ಅಕ್ಕಿಯ ದರಕ್ಕೂ ಸುಮಾರು 22.00 ರೂಪಾಯಿಗಳ ವ್ಯತ್ಯಾಸವಿದೆ. ಇದನ್ನು ನೋಡಿ ಜನರು ಕೊಳ್ಳತಕ್ಕವರಿಗೆ ಬತ್ತವನ್ನು ಕೊಡಲೇಬಾರದೆಂಬ ಭಾವನೆಗೆ ಬರುತ್ತಾರೆ. ಜನರಲ್ಲಿ ಇಂಥ ಒಂದು ಭಾವನೆ ಬೆಳೆಯಲು ಅವಕಾಶ ಕೊಡಬಾರದೆಂದು ಪ್ರಾರ್ಥಿಸಿ ಕೊಳ್ಳುತ್ತೇನೆ. ಇನ್ನು ನಮ್ಮ ರಾಜ್ಯದಲ್ಲಿ ಬತ್ತಕ್ಕೆ ಇರತಕ್ಕ ಕೊರತೆ ಎಷ್ಟೆಂದರೆ— 4.63 ಲಕ್ಷ ಟನ್ ಆದರೆ ನಮ್ಮಲ್ಲಿ ಜೋಳಕ್ಕಿರತಕ್ಕ ಕೊರತೆ ಭತ್ತಕ್ಕಿಂತ ಹೆಚ್ಚಿಗೆ ಇರುವುದಿಲ್ಲ.

[MR. SPEAKER in the Chair.]

ನಮ್ಮಲ್ಲಿ ಯಾವುದಕ್ಕೆ ಹೆಚ್ಚಿನ ಕೊರತೆಯಿದೆಯೋ ಅದಕ್ಕೆ ಹೆಚ್ಚಿನ ಪ್ರೋತ್ಸಾಹ ಮತ್ತು ಹೆಚ್ಚಿನ ದರವನ್ನು ನಿಗದಿ ಮಾಡಬೇಕಾದ್ದು ನ್ಯಾಯ. ಆದರೆ ಈಗ ಇಲ್ಲಿ ಜೋಳಕ್ಕೆ ನಮ್ಮಲ್ಲಿ ಅಂಥ ಕೊರತೆ ಯಿಲ್ಲದಿದ್ದರೂ ಅದಕ್ಕೆ ಬತ್ತಕ್ಕಿಂತ ಹೆಚ್ಚಿನ ದರವನ್ನು ನಿಗದಿ ಮಾಡಿದ್ದಾರೆ. ಕೊರತೆಯಿಲ್ಲದಿರುವ ಜೋಳಕ್ಕೆ ಕ್ವಿಂಟಾಲಿಗೆ 13 ರೂಪಾಯಿಗಳ ಹೆಚ್ಚಿನ ಬೆಲೆ ನಿಗದಿ ಮಾಡಿ ಹೆಚ್ಚು ಕೊರತೆಯುಳ್ಳ ಬತ್ತಕ್ಕೆ ಮೂರು ರೂಪಾಯಿಗಳನ್ನು ಮಾತ್ರ ಜಾಸ್ತಿ ಮಾಡಿದ್ದಾರೆ. ಆದುದರಿಂದ ಈ ಲೆವಿ ಪದ್ಧತಿ ಸರಿಯಾಗಿಲ್ಲ, ಸರ್ಕಾರದವರು ಇದನ್ನು ಪುನರ್ಪರಿಶೀಲನೆ ಮಾಡಿ ಬತ್ತಕ್ಕೆ ಸರಿಯಾದ ಬೆಲೆಯನ್ನು ನಿಗದಿ ಮಾಡಬೇಕೆಂದು ಹೇಳುತ್ತೇನೆ. ಹೀಗೆ ನಮ್ಮಲ್ಲಿರತಕ್ಕ ರೈತರಿಗೆ ಬತ್ತಕ್ಕೆ ಒಂದು ಸರಿಯಾದ ಧಾರಣೆ ಸಿಕ್ಕದಿರುವುದರ ಜೊತೆಗೆ ನಮ್ಮಲ್ಲಿ ಯಾರಿಗೆ ಬೆಳೆಯಾಗಿಲ್ಲ ಅಂಥವರಿಂದ ಪ್ರೊಕ್ಯೂರ್ ಮಾಡ ಬಾರದೆಂದು ಅಧಿಕಾರಿಗಳಿಗೆ ತಿಳಿಸಿರುವುದಾಗಿ ಇಲ್ಲಿ ಮಂತ್ರಿಗಳು ಹೇಳುತ್ತಿದ್ದಾಗ್ಯೂ ಅಲ್ಲಿರತಕ್ಕ ಅಧಿಕಾರಿಗಳು ಕಾನೂನನ್ನು ಜಾರಿಗೆ ಕೊಡುವಾಗ ಅವರ ಮನಸ್ಸಿಗೆ ಬಂದಂತೆ ಕಾನೂನನ್ನು ಜಾರಿ ಮಾಡುತ್ತಿರುವುದರಿಂದ ಅನಾವೃಷ್ಟಿ ಪ್ರದೇಶದಲ್ಲಿರತಕ್ಕ ಬೆಳೆ ಇಲ್ಲದ ರೈತರಿಗೆ ತುಂಬಾ ತೊಂದರೆ ಯುಂಟಾಗಿದೆ. ಈಗಲಾದರೂ ಸರ್ಕಾರದವರು ಇತ್ತಕಡೆಗೆ ಸ್ವಲ್ಪ ಹೆಚ್ಚಿನ ಗಮನವನ್ನು ಕೊಡ ಬೇಕು ಎಂದು ಪ್ರಾರ್ಥಿಸುತ್ತೇನೆ.

ಇನ್ನು ರೈತರಿಗೆ ವ್ಯವಸಾಯಾಭಿವೃದ್ಧಿಗಾಗಿ ಸಾಲಗಳನ್ನು ಕೊಡತಕ್ಕ ಹಾಗೂ ನೀರಾವರಿ ಸೌಲಭ್ಯಗಳನ್ನು ಮತ್ತು ಪಂಪ್‌ಸೆಟ್‌ಗಳನ್ನು ಸಕಾಲಕ್ಕೆ ರೈತರಿಗೆ ಒದಗುವಂತೆ ಲ್ಯಾಂಡ್

(ಶ್ರೀ ವಿ. ಎಚ್. ಲಕ್ಷ್ಮೀಕಾಂತಪ್ಪ)

ಮಾರ್ಟ್‌ಗೇಜ್ ಬ್ಯಾಂಕಿನಿಂದ ವ್ಯವಸ್ಥೆ ಮಾಡಲಾಗಿದೆ ಎಂದು ಹೇಳಿದ್ದಾರೆ. ಆದರೆ ಮೊದಲು ಏನು ರೈತರು ಈ ವ್ಯವಹಾರದಲ್ಲಿ ತಾಲ್ಲೂಕ್ ಬೋರ್ಡ್‌ನ್ನು ಅವಲಂಬಿಸಿದ್ದರೋ ಅಲ್ಲಿಗಿಂತ ಈಗ ಇಲ್ಲಿ ಹೆಚ್ಚಿನ ನಿಧಾನವಾಗುತ್ತಿದೆ. ಹಿಂದಿನ ಡೆವಲಪ್‌ಮೆಂಟ್ ಬೋರ್ಡಿನವರಿಂದ ಇದ್ದಷ್ಟು ಸಹಕಾರ ಈ ಬ್ಯಾಂಕಿನಿಂದ ಇರುವುದಿಲ್ಲವಾದ್ದರಿಂದ ಇದನ್ನು ತಪ್ಪಿಸಿ ಮೊದಲಿದ್ದ ಹಾಗೆ ಇದನ್ನು ತಾಲ್ಲೂಕ್ ಡೆವಲಪ್‌ಮೆಂಟ್ ಬೋರ್ಡಿನ ಮೂಲಕವೇ ನಡೆಸಬೇಕೆಂದು ನಾನು ಸಲಹೆ ಮಾಡುತ್ತೇನೆ. ಇನ್ನು ಹೆಲ್ತ್ ಸರ್ವೀಸ್ ವಿಚಾರಕ್ಕೆ ಬಂದರೆ—ಅದರ ಬಗ್ಗೆ ಒಂದು ದೊಡ್ಡ ಸಾಧನೆಯನ್ನೇ ಮಾಡಿದ್ದಾರೆಂದೂ, ಅನೇಕ ಹೊಸ ಆಸ್ಪತ್ರೆಗಳನ್ನು ತೆರೆದಿದ್ದಾರೆಂದೂ ಮತ್ತು ಅವುಗಳ ಬಗ್ಗೆ ಹೆಚ್ಚಿನ ವ್ಯವಸ್ಥೆಯನ್ನು ಒದಗಿಸುವುದಾಗಿ ಹಿಂದೆಲ್ಲಾ ಆಶ್ವಾಸನೆಗಳನ್ನು ಕೊಟ್ಟಿದ್ದರು. ಆದರೆ ಇಂದು ಈ ಬಾಬಿನಲ್ಲಿ ಏನು ಸಾಧನೆಯಾಗಿದೆ ಎಂಬುದನ್ನು ನೋಡುವುದಾದರೆ—ಡೈರೆಕ್ಟರ್ ಆಫ್ ಮೆಡಿಕಲ್ ಸರ್ವೀಸಿನಲ್ಲಿ ಅಧಿಕಾರವರ್ಗದವರ ಸಂಬಳಸಾರಿಗೆ, ಹೆಚ್ಚು ಸಿಬ್ಬಂದಿವರ್ಗ ಇವುಗಳು ಮಾತ್ರ ಆಗಿರುತ್ತವೆಯೇ ಹೊರತು ಜನರಿಗೆ ಬೇಕಾಗಿದ್ದ ಔಷಧಿ ಇತ್ಯಾದಿಗಳ ಬಗ್ಗೆ ಯಾವ ಪ್ರಗತಿಯೂ ಆಗಿಲ್ಲ. ಇತ್ತ ಕಡೆಗೂ ಸರ್ಕಾರ ಹೆಚ್ಚಿನ ಗಮನ ಕೊಡಬೇಕು ಎಂದು ಹೇಳುತ್ತೇನೆ. ನಮ್ಮಲ್ಲಿ 14 ಆಸ್ಪತ್ರೆಗಳೇನೋ ಹೆಸರಿಗಿದ್ದರೂ, ಅಲ್ಲಿ ಮೂರು ಜನ ಡಾಕ್ಟರುಗಳು ಮಾತ್ರ ಇದ್ದಾರೆ, ಔಷಧಿಗಳಿಲ್ಲ, ಲಿನನ್ ಇತ್ಯಾದಿ ಸಾಮಾನುಗಳಿಲ್ಲ. ಅವು ಬಹಳ ಅಸಮರ್ಪಕ ರೀತಿಯಲ್ಲಿ ಕೆಲಸಮಾಡುತ್ತಿವೆ. ಇನ್ನಾದರೂ ಈ ಆಸ್ಪತ್ರೆಗಳಿಂದ ಜನರಿಗೆ ಹೆಚ್ಚಿನ ಅನುಕೂಲವಾಗುವಂತೆ ವ್ಯವಸ್ಥೆಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ದೇಶದಲ್ಲಿ ಶಾಂತಿ ಮತ್ತು ಸುವ್ಯವಸ್ಥಿತಿಗಳ ಬಗ್ಗೆ ಜಿಲ್ಲಾಮಟ್ಟದಲ್ಲಿ ಹೆಚ್ಚಿನ ಕೋರ್ಟುಗಳನ್ನು ತೆರೆದಿರುವುದಾಗಿ ಇಲ್ಲಿ ಉಲ್ಲೇಖಿಸಲಾಗಿದೆ. ಆದರೆ ನಮ್ಮ ಭೂಸುಧಾರಣಾ ಶಾಸನದ ಪರಿಣಾಮವಾಗಿ ದೇಶದಲ್ಲಿ ಭೂಮಾಲಿಕರಿಗೂ ಮತ್ತು ಗೇಣಿದಾರರಿಗೂ ಬಹಳ ಅಶಾಂತಿ ಉಂಟಾಗಿದೆ. ಇದರ ಕಡೆಗೆ ಸರ್ಕಾರದವರು ಹೆಚ್ಚಿನ ನಿಗಾ ವಹಿಸಿ ಅವರವರ ಹಕ್ಕುಬಾಧ್ಯತೆ ತೀರ್ಮಾನದ ಬಗ್ಗೆ ಪ್ರತಿಯೊಂದು ತಾಲ್ಲೂಕಿನಲ್ಲೂ ಒಂದೊಂದು ಟ್ರಿಬ್ಯುನಲ್ಲನ್ನು ಏರ್ಪಡಿಸಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಪ್ರಸಕ್ತ ಸಾಲಿನಲ್ಲಿ ಅನಾವೃಷ್ಟಿಯುಂಟಾಗಿ ಬಹುಭಾಗದ ಜನರು ಕ್ಷಾಮಕ್ಕೆ ತುತ್ತಾಗಿದ್ದಾರೆ. ಅಂಥವರಿಗೆ ಈ ಸಾಲಿನಲ್ಲಿ ಕಂದಾಯ ವಸೂಲಿಯ ಬಗ್ಗೆ ರಿಮಿಷನ್ ಸಾಲದ ಕಂತುಗಳ ವಸೂಲಿಯನ್ನು ಮುಂದಕ್ಕೆ ಹಾಕತಕ್ಕದ್ದು ಬಹಳ ಅಗತ್ಯ. ಈ ವಿಚಾರದಲ್ಲಿ ರಾಜ್ಯಪಾಲರ ಭಾಷಣದಲ್ಲೇನೂ ಹೇಳಿಯೇ ಇಲ್ಲ. ಆದ್ದರಿಂದ ಈ ರಿಮಿಷನ್ ವಿಚಾರದಲ್ಲಿ ಸರ್ಕಾರ ಹೆಚ್ಚಿನ ಅನುಕೂಲವನ್ನು ಒದಗಿಸಬೇಕಾದ್ದು ಅಗತ್ಯವೆಂದು ಒತ್ತಾಯಮಾಡುತ್ತೇನೆ.

ಇನ್ನು ನಾನು ಕೊನೆಯದಾಗಿ ಫಾರೆಸ್ಟಿನ ವಿಚಾರದಲ್ಲಿ ಎರಡು ಮಾತನ್ನು ಹೇಳಿ ನನ್ನ ಮಾತುಗಳನ್ನು ಮುಗಿಸಬೇಕೆಂದಿದ್ದೇನೆ. ನಮ್ಮ ಅರಣ್ಯ ಇಲಾಖೆಯಲ್ಲಿ ವಿದ್ಯುಚ್ಛಕ್ತಿ ಇಲಾಖೆಗೆ ಬೇಕಾಗುವಂಥ ಪೋಲುಗಳು ವಿಶೇಷವಾಗಿರುತ್ತವೆ. ನಾನು ಮಲೆನಾಡಿನಿಂದ ಬರತಕ್ಕವನಾದ್ದರಿಂದ ನನಗೆ ಈ ವಿಚಾರ ಚೆನ್ನಾಗಿ ಗೊತ್ತಿದೆ. ಆದರೆ ವಿದ್ಯುಚ್ಛಕ್ತಿ ಇಲಾಖೆಯವರು ಇದಕ್ಕೆ ಸಾಕಷ್ಟು ಗಮನ ಕೊಡದೇನೇ ಸಿಮೆಂಟಿನ ಪೋಲುಗಳನ್ನು ಬಳಸುವುದಕ್ಕೆ ಹೊರಟು ಹಣವನ್ನು ವ್ಯಥಾ ವ್ಯಯಮಾಡುತ್ತಿದ್ದಾರೆ. ಇದರಿಂದ ರೈತರಿಗೂ ತೊಂದರೆ. ಕಾಡಿನಲ್ಲಿ ದೊರೆಯತಕ್ಕ ಪೋಲುಗಳನ್ನೇ ಉಪಯೋಗ ಮಾಡಿಕೊಂಡರೆ ಕಡಮೆ ಖರ್ಚಿನಲ್ಲಿ ರೈತರಿಗೆ ಪವರನ್ನು ಸರಬರಾಯಿ ಮಾಡಬಹುದು. ನಾವು ಮೇಲಾಗಿ ಆ ಶರಾವತಿ ವ್ಯಾಲಿಯ ಪವರನ್ನೆಲ್ಲಾ ಸುಲಭವಾಗಿ ಉಪಯೋಗಿಸಲು ಸಾಧ್ಯವಾಗುತ್ತದೆ. ಈ ವಿಚಾರಕ್ಕೆ ಅರಣ್ಯ ಇಲಾಖೆಯವರೂ ಮತ್ತು ವಿದ್ಯುಚ್ಛಕ್ತಿ ಇಲಾಖೆಯವರೂ ಹೆಚ್ಚಿನ ನಿಗಾ ಕೊಡಬೇಕೆಂದು ಹೇಳಿ ನಾನು ನನಗಿಷ್ಟು ಮಾತನಾಡಲು ಅವಕಾಶಮಾಡಿಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಸಿ. ಆರ್. ರಂಗೇಗೌಡ (ಮಾಗಡಿ).—ಪೂಜ್ಯ ಸಭಾಪತಿಯವರೇ, ನಮ್ಮ ಮುಂದೆ ಶ್ರೀಮಾನ್ ಮಂಜಯ್ಯ ಶೆಟ್ಟರು ರಾಜ್ಯಪಾಲರ ಭಾಷಣದ ಬಗ್ಗೆ ಮಂಡಿಸಿರತಕ್ಕ ನಿರ್ಣಯವನ್ನು ಸ್ವಾಗತಿಸುತ್ತಾ ಕೆಲವು ವಿಷಯಗಳನ್ನು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರಲಿಚ್ಛಿಸುತ್ತೇನೆ.

ಸ್ವಾಮಿ, ರಾಜ್ಯಪಾಲರು ಪ್ಲಾನಿಂಗ್ ಐಟಮ್ ಬಗ್ಗೆ ಮಾತನಾಡುತ್ತಾ 1966–67ನೇ ಸಾಲಿನ ಯೋಜನೆಗೆ 50.72ಕೋಟಿ ರೂಪಾಯಿಗಳನ್ನು ವೆಚ್ಚವಾಗಬೇಕೆಂದು ಇದರಲ್ಲಿ 34 ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರದಿಂದ ಪಡೆಯುತ್ತೇವೆಂದು ಹೇಳಿದ್ದಾರೆ. ಈ ಬಗ್ಗೆ ಒಂದು ವಿಷಯ ಹೇಳುವುದಾದರೆ, ಅನೇಕ ಸಾರಿ ನಮ್ಮ ಮುಖ್ಯ ಮಂತ್ರಿಗಳು ಕೇಂದ್ರದಿಂದ ನಮಗೆ

ಸಾಕಷ್ಟು ಸಹಾಯ ಸಕಾಲದಲ್ಲಿ ದೊರೆಯುತ್ತಿಲ್ಲವೆಂದು ಅನೇಕ ಕಡೆ ಹೇಳಿಕೆ ಕೊಟ್ಟಿದ್ದಾರೆ. ಹಾಗೂ ಕೂಡ ನೆನ್ನೆ ತಾನೆ ನಮ್ಮ ರಾಜ್ಯದ ಕೆಲವು ಕಾಂಗ್ರೆಸ್ ಮುಂದಾಳುಗಳು, ಜರ್ನಲಿಷ್ಟುಗಳು, ಲಾಯರ್‌ಗಳು ದೆಹಲಿಯಲ್ಲಿ ಪ್ರಧಾನಮಂತ್ರಿಗಳನ್ನು ಕಂಡು ನಮ್ಮ ದೇಶಕ್ಕೆ ಸರಿಯಾದ ಪ್ರಾತಿನಿಧ್ಯ ವಿಲ್ಲವೆಂದು, ಆದ್ದರಿಂದ ಸಕಾಲದಲ್ಲಿ ಸಹಾಯ ದೊರೆಯುವಂತೆ ಮಾಡಲು ಜಾಗ್ರತೆ ಒಬ್ಬ ಮಂತ್ರಿ ಪ್ರತಿನಿಧಿಯನ್ನು ನೇಮಕ ಮಾಡಬೇಕೆಂದು ಮನವಿ ಸಲ್ಲಿಸಿದರು. ಪ್ರಧಾನ ಮಂತ್ರಿಗಳು ಸಹ ಇದನ್ನು ಪರಿಶೀಲನೆ ಮಾಡುವುದಾಗಿ ಹೇಳಿದ್ದಾರೆ. ಕಾದು ನೋಡಬೇಕಾಗಿದೆ.

ನಮ್ಮ ದೇಶದ ಪ್ಲಾನಿಂಗ್‌ನಲ್ಲಿ ಅಳವಡಿಸಿಕೊಂಡಿರತಕ್ಕಂಥ ಯೋಜನೆಗಳಿಗೆ ಏನೇನು ಸಹಾಯ ಸೌಲಭ್ಯಗಳು ಬೇಕೋ, ಅದನ್ನು ದೊರಕಿಸಿಕೊಳ್ಳುವುದಕ್ಕೆ ಕೇಂದ್ರದಲ್ಲಿ ಒಬ್ಬ ಏಜೆಂಟನ್ನು ಸರ್ಕಾರದ ಪರವಾಗಿ ಇಟ್ಟಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ಅವರು ಸೆಕ್ರೆಟರಿ ಅಥವಾ ಡೆಪ್ಯುಟಿ ಸೆಕ್ರೆಟರಿ ಗ್ರೇಡಿನಲ್ಲಿದ್ದಾರೋ ನನಗೆ ಗೊತ್ತಿಲ್ಲ. ಆದರೆ ಅವರು ಸಂಬಂಧಪಟ್ಟ ಮಂತ್ರಿಗಳನ್ನಾಗಲೀ, ಹಾಗೂ ಇಲಾಖಾ ಅಧಿಕಾರಿಗಳನ್ನಾಗಲೀ ಸಂದಿಸಿ ನಮ್ಮ ರಾಜ್ಯದ ಬಗ್ಗೆ ಬಿಚ್ಚು ಮನಸ್ಸಿನಿಂದ, ಧೈರ್ಯದಿಂದ ಹೇಳುವುದಕ್ಕೆ ಆಗುವುದಿಲ್ಲ. ಏಕೆಂದರೆ ಅಧಿಕಾರಿಗಳಿಗೂ ಒಂದು ಮಿತಿ ಇದೆ; ಆದರೆ ಆ ಮಿತಿಯನ್ನು ಮೀರಿ ಕೆಲಸಮಾಡುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ನಮ್ಮ ದೇಶಕ್ಕೆ ಬೇಕಾಗುವ ಸಹಾಯ ಸೌಲಭ್ಯಗಳನ್ನು ದೊರಕಿಸಿಕೊಳ್ಳಲು ಮಾನ್ಯ ಸಭೆಯು ಒಬ್ಬ ಸದಸ್ಯರನ್ನು ಮಂತ್ರಿ ಮಟ್ಟದಲ್ಲಿ ದೆಹಲಿಯಲ್ಲಿಟ್ಟರೆ ಒಳ್ಳೆಯದೆಂದು ನಾನಾದರೂ ಹೇಳುತ್ತೇನೆ. ಈಗಲಾದರೂ ನಮ್ಮ ಸರ್ಕಾರ ಮಂತ್ರಿಮಂಡಲದಲ್ಲಿ ಒಬ್ಬ ಮಂತ್ರಿಯನ್ನು, ಪೋರ್ಟ್‌ಫೋಲಿಯೋ ಇಲ್ಲದ ಒಬ್ಬರನ್ನು, ಏಜೆಂಟ್ ಆಗಿ ನೇಮಕ ಮಾಡಿ ಇಟ್ಟರೆ ಕೇಂದ್ರ ಸರ್ಕಾರದಿಂದ ನಮ್ಮ ಪ್ಲಾನಿಗೆ ಬೇಕಾದ ಸೌಲಭ್ಯಗಳು ಸಕಾಲದಲ್ಲಿ ದೊರೆಯಬಹುದೆಂದು ನನ್ನ ವಿಶ್ವಾಸವಿದೆ. ಸರ್ಕಾರದವರು ಈ ರೀತಿ ಮಾಡುವುದು ಸೂಕ್ತವೆಂದು ನಾನು ಸಲಹೆ ಮಾಡುತ್ತೇನೆ.

50 ಪರ್‌ಸೆಂಟ್ ವ್ಯವಸಾಯುಕ್ಕೋಸ್ಕರ ಇಟ್ಟಿದ್ದೇವೆಂದು ಹೇಳಿದ್ದೀರಿ. ಆದರೆ ಎರಡನೆ ಬೆಳೆಗೆ ಬೇಕಾದ ಹಣವನ್ನು ಎಷ್ಟು ಇಟ್ಟುಕೊಂಡಿದ್ದೀರಿ ಎಂದು ಕೇಳುತ್ತೇನೆ. ಅಗ್ರಿಕಲ್‌ಚರ್ ಪ್ರೊಡಕ್ಷನ್ ಪ್ಲಾನಿಗೆ ಏನೇನು ವ್ಯವಸ್ಥೆಯಿದೆ ಎನ್ನುವುದು ಪೂರ್ತಿಯಾಗಿ ನನಗೆ ಅರ್ಥವಾಗುತ್ತಿಲ್ಲ. ಅವೈಲಬಲ್ ಫಂಡ್ಸ್ ಎಂದು ಹೇಳುತ್ತೀರಿ. ನಮ್ಮ ಗ್ರಾಮಾಂತರ ಪ್ರದೇಶಗಳಲ್ಲಿ 100-200 ಎಕರೆ ಅಗ್ರಿಕಲ್‌ಚರ್ ಪ್ರೊಡಕ್ಷನ್ ತೆರಿಗೆ ತರುತ್ತೇವೆಂದು ಹೇಳುತ್ತಾರೆ. ಅಷ್ಟು ವಿಸ್ತೀರ್ಣಕ್ಕೆ ನಿಮ್ಮಲ್ಲಿ ಉತ್ತಮವಾದ ತಳಿ ಬೀಜ, ಗೊಬ್ಬರ ಸಾಕಾದಷ್ಟು ಇದೆಯೇ ? ಎಂದು ಕೇಳಿದ್ದಲ್ಲಿ ಸಂಬಂಧಪಟ್ಟ ಇಲಾಖೆಯಲ್ಲಿ ವ್ಯವಹರಿಸುತ್ತಿರುವುದಾಗಿ ಹೇಳಿದರು. ಆದರೆ ವ್ಯವಹಾರ ಸಕಾಲಿಕ ಸಹಾಯವಾಗುವುದಿಲ್ಲ. ಯಾವುದೂ ಮುಂಗಡವಾಗಿ ಶೇಖರಿಸಬೇಕು. ನಾನೂ ಸಹ ಅನೇಕ ಸಾರಿ ಸಂಬಂಧಪಟ್ಟ ಅಧಿಕಾರಿಗಳನ್ನು, ಮಂತ್ರಿಗಳನ್ನು ಸಂದಿಸಿ, ನಮ್ಮ ತಾಲ್ಲೋಕಿಗೆ ಅನಾವೃಷ್ಟಿ ಉಂಟಾದ ಕಾಲದಲ್ಲಿ ಬೆಳೆ ತೆಗೆಯಲು ಅನುಕೂಲಗಳನ್ನು ಕೇಳಿದಾಗ, ಬೆಂಗಳೂರು ಗ್ರಾಮಾಂತರ ಪ್ರದೇಶಗಳಿಗೆ ಒಂದು ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆಂದು ಹೇಳಿದರು. ಆದರೆ ಎಷ್ಟು ಪಂಪ್‌ಸೆಟ್‌ಗಳನ್ನು ಸಪ್ಲೈಮಾಡಿದ್ದೇವೆಂದು ಹೇಳುವುದಕ್ಕೆ ಅವರಿಗೆ ಸಾಧ್ಯವಾಗಲಿಲ್ಲ. ಒಂದು ಲಕ್ಷ ರೂಪಾಯಿ ಕೊಟ್ಟರೆ 30 ಪಂಪ್‌ಸೆಟ್‌ಗಳು ಬರುತ್ತದೆ. ಬೆಂಗಳೂರು ಡಿಸ್ಟ್ರಿಕ್ಟ್‌ನಲ್ಲಿ ಒಂಬತ್ತು ತಾಲ್ಲೋಕ್‌ಗಳಿವೆ. ನನ್ನ ಕ್ಷೇತ್ರದಲ್ಲಿ ಆರು ಹೋಬಳಿಗಳು ಇವೆ. ಅಂದರೆ ಈ ಮೂರು ಪಂಪ್‌ಸೆಟ್‌ಗಳನ್ನು ಯಾವ ರೀತಿ ನನ್ನ ಕ್ಷೇತ್ರದಲ್ಲಿ ಹಂಚುವುದು. ಇದರಿಂದ ಎಷ್ಟು ಭಾಗ ಸ್ಟಾಂಡಿಂಗ್ ಕ್ರಾಪ್‌ನ್ನು ರಕ್ಷಣೆ ಮಾಡಲು ಸಾಧ್ಯ. ನಮ್ಮ ತಾಲ್ಲೋಕಿಗೆ ಒಂದು ಸಾರಿ ನೀರಾವರಿ ಮಂತ್ರಿಗಳಾದ ಶ್ರೀ ಆಲೂರು ಹನುಮಂತಪ್ಪನವರು ಪ್ರವಾಸ ಬಂದಾಗ ಸ್ಟಾಂಡಿಂಗ್ ಕ್ರಾಪ್‌ನ್ನು ರಕ್ಷಣೆ ಮಾಡಲು ಪಂಪ್‌ಸೆಟ್‌ಗಳನ್ನು ಕೊಡಿಸುವಂತೆ ಪಂಚಾಯಿತಿಯವರು ಮನವಿ ಮಾಡಿಕೊಂಡರು. ಆದರೆ ಆ ಮನವಿ ಮನವಿಯಾಗೇ ಉಳಿಯಿತೇ ಹೊರತು ಕಾರ್ಯರೂಪಕ್ಕೆ ಬರಲಿಲ್ಲ. ಈ ರೀತಿ ಆದರೆ ಅಗ್ರಿಕಲ್‌ಚರ್ ಪ್ರೊಡಕ್ಷನ್ ಜಾಸ್ತಿಯಾಗುತ್ತದೆಯೇ, ಎಂದು ನಾನು ಈ ಸಭೆಯಲ್ಲಿ ಕೇಳುತ್ತೇನೆ. ಈ ತರಹ ಮಾಡಿದರೆ ನಾವು ಈ ಸಭೆಯಲ್ಲಿ ಭಾಷಣ ಮಾಡುವುದು ಏನು ಉಪಯೋಗವಾದಂಥಾಯಿತು, ಏನೇನು ಕಾರ್ಯರೂಪಕ್ಕೆ ತರಬೇಕೆಂದು ಇದ್ದೀರೋ ಅದಕ್ಕೆ ಬೇಕಾದ ಸೌಲಭ್ಯಗಳನ್ನು ಮುಂಗಡವಾಗಿ ಕೈಯಲ್ಲಿ ಇಟ್ಟುಕೊಂಡು ಯುದ್ಧದಲ್ಲಿ ಸೈನಿಕರು ಮುನ್ನುಗ್ಗುವಂತೆ ಮುನ್ನುಗ್ಗಬೇಕು.

ಸೀಸನಲ್ ಕಂಡೀಷನ್ ಬಗ್ಗೆ ಹೇಳುವಾಗ ಹೇಳಿದಿರಿ, energetie steps were taken by Government to ensure that standing crops were saved wherever possible ಎಂದು. ಇದು ನನಗೆ ಅರ್ಥವಾಗುವುದಿಲ್ಲ. ಇದನ್ನು ನಮ್ಮ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ರೈತರು ಓದಿದರೆ ಅವರಿಗೆ ಬಹಳ ಆಶ್ಚರ್ಯವಾಗುತ್ತದೆ. ಏಕೆಂದರೆ ಸರ್ಕಾರದವರು ಸ್ಟಾಂಡಿಂಗ್ ಕ್ರಾಪ್‌ಗೆ ಪ್ರೊಟೆಕ್ಷನ್ ಕೊಡುತ್ತೇವೆ, ಕ್ಯಾಬಿನೆಟ್ ಮೀಟಿಂಗ್‌ನಲ್ಲಿ ತೀರ್ಮಾನ ತಗೆದು

(ಶ್ರೀ ಸಿ. ಆರ್. ರಂಗೇಗೌಡ)

ಕೊಂಡೆವೆಂದು ಹೇಳಿರುವುದನ್ನು ಕೇಳಿರುತ್ತೇನೆ. ಆದರೆ ಅದನ್ನು ರಕ್ಷಿಸಬೇಕೆಂದು ತೀರ್ಮಾನಮಾಡಿ ಅದನ್ನು ಕಾರ್ಯರೂಪಕ್ಕೆ ತರಲು ಎಷ್ಟು ವಿಳಂಬವಾಗುತ್ತಿದೆ ಎಂಬುದನ್ನು ನೋಡಿದರೆ ಆಶ್ಚರ್ಯವಾಗುತ್ತದೆ. ಕಳೆದ ವರ್ಷ ಒಬ್ಬ ಮಂತ್ರಿಗಳು ನಮ್ಮ ತಾಲ್ಲೋಕಿಗೆ ಪ್ರವಾಸ ಬಂದಾಗ ಒಂದು ಅರ್ಜಿಯನ್ನು ಪಂಚಾಯಿತಿಯವರು ಕೊಟ್ಟಾಗ ಅದು ಇನ್ನೊಂದು ತಾಲ್ಲೋಕಿಗೆ ಹೋಗಿ ಬಿದ್ದಿತ್ತು. ಈ ರೀತಿ ಮಾಡದೆ ನಮ್ಮ ಗ್ರಾಮಾಂತರ ಪ್ರದೇಶಗಳಿಗೆ ಒಬ್ಬೊಬ್ಬ ಮಂತ್ರಿಗಳು ಪ್ರವಾಸ ಮಾಡಿ ಸ್ಟ್ಯಾಂಡಿಂಗ್ ಕ್ರಾಪ್‌ನ್ನು ಯಾವ ರೀತಿ ರಕ್ಷಿಸಬೇಕು ಎಂಬುದನ್ನು ನೋಡಿ ಅಧಿಕಾರಿಗಳಿಗೆ ಸ್ಥಳದಲ್ಲಿಯೇ ಸೂಕ್ತ ಸಲಹೆ ಮಾಡಿ ರೈತರಿಗೆ ಬೇಕಾದ ಅವಕಾಶಗಳನ್ನು ಕಲ್ಪಿಸಿಕೊಡಬೇಕು

ರಿಲೀಫ್ ವರ್ಕ್ಸ್‌ನ್ನು ನಮ್ಮ ತಾಲ್ಲೋಕಿನಲ್ಲಿ ತೆಗೆದುಕೊಳ್ಳುತ್ತೇವೆಂದು ಸರ್ಕಾರದವರು ಹೇಳಿದರು. ನಮ್ಮ ತಾಲ್ಲೋಕಿಗೆ ನೀರಾವರಿ ಮಂತ್ರಿಗಳು ಬಂದಾಗ ಅದರ ಬಗ್ಗೆ ಭಾಷಣ ಮಾಡಲಾಯಿತು. ಅವಕ್ಕೆ ಅವರು ಈ ಪರಿಹಾರ ಕಾಮಗಾರಿಗಳು ಮುನಿಸಿಪಲ್ ಲಿಮಿಟ್ಸ್ ನಲ್ಲಿರುವುದರಿಂದ ಸಂಬಂಧಪಟ್ಟ ಬೇರೆ ಇಲಾಖೆಯವರು ತೆಗೆದುಕೊಳ್ಳಬೇಕೆಂದು ನಾನು ಹೇಳಿದರೂ ಕೇಳದೆ ನಮ್ಮಲ್ಲಿ ಬೇಕಾದಷ್ಟು ಹಣವಿದೆ ಎಂದು ಮಂತ್ರಿಗಳು ಹೇಳಿದ ಮಾತಿನಂತೆ ನೀರಾವರಿ ಮಂತ್ರಿಗಳು ಮತ್ತು ಸಂಬಂಧಪಟ್ಟ ಅಧಿಕಾರಿಗಳು ಕೂಡ ಸೇರಿ ರಿಲೀಫ್ ಕಾಮಗಾರಿಗಳಾಗುವ ಜಾಗದಲ್ಲಿ ಅಂದರೆ ಮಾಗಡಿ ಟೌನ್ ಹೊಂಬಾಳಮ್ಮನ ಕೆರೆ ಸಿಲ್ಟ್ ತೆಗೆಯಲು ಒಂದು ಗುದ್ದಲಿ ಪೂಜೆಯೂ ಸಹ ಆಯಿತು. ಆದರೆ ರಿಲೀಫ್ ಕಾಮಗಾರಿಗಳನ್ನು ತೆಗೆದುಕೊಳ್ಳಲೇ ಇಲ್ಲ. ಯಾವುದೂ ಕಾರ್ಯರೂಪಕ್ಕೆ ಬರಲೇ ಇಲ್ಲ. ಈಗಲಾದರೂ ಉಪಮಂತ್ರಿಗಳು ಸಂಬಂಧಪಟ್ಟ ಇಲಾಖೆಯವರೊಡನೆ ಕುರಿತು ಈ ವಿಷಯವನ್ನು ಪರ್‌ಸ್ಯೂ ಮಾಡಬೇಕು. ಮತ್ತು ಅದನ್ನು ಕಾರ್ಯರೂಪಕ್ಕೆ ತರಬೇಕೆಂದು ಪ್ರಾರ್ಥಿಸುತ್ತೇನೆ.

ಶ್ರೀ ಆಲೂರು ಹನುಮಂತಪ್ಪ.—ಮಾನ್ಯ ಸದಸ್ಯರು ಡೆವಲಪ್‌ಮೆಂಟ್ ಕೌನ್ಸಿಲ್ ಮೆಂಬರ್ ಆದಮೇಲೆ 3 ಸಾರಿ ಮೀಟಿಂಗ್ ಆಗಿದೆ. ಈ ವಿಚಾರವನ್ನು ಏಕೆ ಎತ್ತಲಿಲ್ಲ ?

ಶ್ರೀ ಸಿ. ಆರ್. ರಂಗೇಗೌಡ.—ತಾವು ಬಂದಿದುದು ಅಭಾವ ಪ್ರದೇಶಕ್ಕೆ, ಮಳೆಯಾಗಿಲ್ಲ ಎಂಬುದು ತಿಳಿದು ತಕ್ಷಣ ಒಂದೆರಡು ತಿಂಗಳೊಳಗೆ ಕಾಮಗಾರಿ ಕೆಲಸ ನಡೆಯಲೆಂದು ಗುದ್ದಲಿ ಪೂಜೆ ಮಾಡಿದಿರಿ, ರೈತನಿಗೆ ಪರಿಹಾರ ತೆರೆಯಲೆಂದು ಮಾಡಿದಿರಿ, ಆದರೆ ರೈತನಿಗೆ ತಕ್ಷಣ ಪರಿಹಾರ ದೊರೆಯದೆ ಇದ್ದರೆ ರೈತರು ಎಷ್ಟು ದಿವಸ ಉಪವಾಸದಿಂದ ನರಳಬೇಕು. ಪ್ರತಿ ತಿಂಗಳು ಸಂಬಳ ಬರುವವರು ಮಾತ್ರ ಆಹಾರವನ್ನು ಕೊಂಡುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆಯೆ ಹೊರತು ಹಳ್ಳಿಯವರಿಗೆ ಆಗುವುದಿಲ್ಲ. ವೀಕರ್ ಸೆಕ್ಷನ್ಸ್‌ಗಳಿಗೆ ಕೊಡಬೇಕೆಂದು ಹೇಳುತ್ತೀರಾ, ಹಾಗೆ ಆದರೆ ಏನಾಗುತ್ತದೆಯೆಂದರೆ ಯಾರು ಪಟ್ಟಣದಲ್ಲಿರುತ್ತಾರೋ, ಯಾರಿಗೆ ಸೋಷಿಯಲ್ ಸೆಕ್ಯೂರಿಟಿ ಇದೆಯೋ, ಯಾರಿಗೆ ಪ್ರತಿ ತಿಂಗಳು ಸಂಬಳ ಸಾರಿಗೆ ಸಿಗುತ್ತದೋ ಅಂಥವರಿಗೆ ಕೊಡುವುದಾದರೆ ರೈತನಿಗೆ ಸಿಕ್ಕಿದಂತಾಗುತ್ತದೆಯೇ ? ರೈತನಿಂದ ಬಲವಂತ ಮಾಡಿ ಧಾನ್ಯಗಳನ್ನು ಕಿತ್ತುಕೊಳ್ಳುವುದಕ್ಕೆ ನಿಮಗೆ ಶಕ್ತಿ ಇದೆ, ಅವನಿಗೆ ಮಳೆಬೆಳೆ ಹೋಗಿ ಅವನು ಕಷ್ಟದಲ್ಲಿರುವಾಗ ಅವನ ಹೊಟ್ಟೆಗೆ ಅನ್ನ ಕೊಡದೆ ಅವನು ನರಳುವಂತೆ ಮಾಡುತ್ತಾ ಇದ್ದೀರಿ. ನಿಮಗೆ ದಕ್ಷತೆ ಯೋಗ್ಯತೆ ಇಲ್ಲದಿರುವಾಗ ಗ್ರಾಮಾಂತರ ಪ್ರದೇಶಗಳಲ್ಲಿ ಪ್ರವಾಸಮಾಡಿ ಅಲ್ಲಿರುವ ಲೋಪದೋಷಗಳನ್ನು ತಿದ್ದುವುದಕ್ಕೆ ಸಾಧ್ಯವೇ ? ನೀವು ಯೋಜನೆಗಳನ್ನು ಕಾರ್ಯರೂಪಕ್ಕೆ ತರುವುದು ನಿಮ್ಮ ಕರ್ತವ್ಯವಲ್ಲವೇ ! ಹಳ್ಳಿಯವರಿಗೆ ಆಹಾರ ಒದಗಿಸಲು ದಕ್ಷತೆ ಇಲ್ಲದಿರುವಾಗ ನೀವು ಸುಮ್ಮನೆ ಪ್ರವಾಸ ಮಾಡುವುದು ತಪ್ಪು ಎಂದು ಪದೇ ಪದೇ ಈ ಸಭೆಯಲ್ಲಿ ಹೇಳುತ್ತಿದ್ದೇನೆ. ನಮ್ಮ ತಾಲ್ಲೋಕಿನಲ್ಲಿ ಒಂದು ಅರ್ಕಾವತಿ, ಒಂದು ಕಣ್ವಾ ನದಿಗಳು ಹರಿಯುತ್ತಿದ್ದರೂ ಸಹ ಜಲಾಶಯಗಳನ್ನು ಬೇರೆ ತಾಲ್ಲೋಕ್‌ಗಳಿಗೆ ಕೊಟ್ಟಿದ್ದಾರೆ. ನಮ್ಮ ತಾಲ್ಲೋಕಿಗೆ ಸಣ್ಣಪುಟ್ಟ ನೀರಾವರಿ ಕಾಮಗಾರಿಗಳನ್ನು ಮಾಡಿಕೊಡಬೇಕೆಂದು ಉಪಮಂತ್ರಿಗಳನ್ನು ಕೇಳಿಕೊಂಡಿದ್ದರೂ ಏನೂ ಮಾಡಿಲ್ಲ. ಸರ್ಕಾರದವರು ಮೇಲುಗಡೆ ಇರುವ ಜಮೀನುಗಳಿಗೆ ನೀರನ್ನು ಒದಗಿಸುವುದು ಆದ್ಯಕರ್ತವ್ಯವೆಂದು ಹೇಳುತ್ತೇನೆ. ಇದಲ್ಲದೆ ಹಂಚಿಕುಪ್ಪೆ ಟ್ಯಾಂಕನ್ನು ರಿಪೇರಿ ಮಾಡಿಸಲು 50—60ಸಾವಿರ ರೂಪಾಯಿ ಖರ್ಚಾಗುತ್ತದೆಂದು ಪದೇ ಪದೇ ಹೇಳುತ್ತಾ ಬಂದಿದ್ದೇನೆ. ಇದು ಯಾವುದೋ ಒಂದು ದುರುದ್ದೇಶದಿಂದ ಯಾರೋ ಸ್ಥಳೀಯ ಜನಗಳ ಪ್ರಭಾವಕ್ಕೊಳಗಾಗಿ ಇದನ್ನು ಕಾರ್ಯರೂಪಕ್ಕೆ ತಂದಿಲ್ಲವೆಂದು ತುಂಬ ವಿಷಾದದಿಂದ ಹೇಳಬೇಕಾಗಿದೆ.

ಇನ್ನೊಂದು ವಿಷಯ. ಅವರ ಕ್ಷೇತ್ರದಲ್ಲಿ ಒಳ್ಳೆಯ ಕೆಲಸಗಳನ್ನು ಮಾಡಿದ್ದಾರೆ. ನಾನು ಅದನ್ನು ಒಪ್ಪಿಕೊಳ್ಳುತ್ತೇನೆ. ಒಂದು ತಾಲ್ಲೂಕ್‌ನಲ್ಲಿ ಎರಡು ಕ್ಷೇತ್ರಗಳಿದ್ದು ಒಂದು ಕ್ಷೇತ್ರದಲ್ಲಿ

ಸಣ್ಣಪುಟ್ಟ ಕೆಲಸಗಳು ಆಗುವಾಗ ಇನ್ನೊಂದು ಕ್ಷೇತ್ರದಲ್ಲಿ ಅಲ್ಲಿನ ಜನಗಳಿಗೆ ಅನ್ಯಾಯ ಮಾಡುವುದು ಎಂದು ಹೇಳಿದರೆ ಅದು ಕಾಂಗ್ರೆಸ್ ಸಂಸ್ಥೆಯಲ್ಲಿರತಕ್ಕ ಸದಸ್ಯರಿಗೆ ಗೌರವ ತರತಕ್ಕದ್ದಲ್ಲವೆಂಬುದಾಗಿ ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ. ನನ್ನ ತಾಲ್ಲೂಕಿನಲ್ಲಿ ಅತಿ ಜಾಗ್ರತೆಯಾಗಿ ನೀರಾವರಿ ಕೆಲಸಗಳನ್ನು ಮಾಡಬೇಕು. ರೈತರಿಗೆ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿನಿಂದ ನೀರಾವರಿ ಭಾವಿಗಳನ್ನು ತೆಗೆಯಲು ತಕ್ಕ ಹಣ ಸಹಾಯವನ್ನು ಕಲ್ಪಿಸಿಕೊಡಬೇಕು. ಆ ಹಣವನ್ನು ಆ ಬ್ಯಾಂಕಿನ ಮೂಲಕವೇ ರೈತರಿಗೆ ಹಂಚಬೇಕು. ಆ ಬ್ಯಾಂಕಿನಲ್ಲಿ ಸರ್ಕಾರದ ರಿಕಾರ್ಡು ಯಾವುದೂ ಸಹ ಇಲ್ಲದೇ ಇರುವವರನ್ನು ಅದರಲ್ಲೂ ಅರ್ಜಿ ಹಾಕದೇ ಇರುವವರನ್ನು ಒಂದು ಪಟ್ಟಿಮಾಡಿ ಆ ಪಟ್ಟಿಯನ್ನು ಜಿಲ್ಲಾಧಿಕಾರಿಗಳು ಆ ಬ್ಯಾಂಕಿಗೆ ಕಳುಹಿಸಿದ್ದಾರೆ. ಅದು ಬೆಲೆಯಿಲ್ಲದ ಪಟ್ಟಿಯಾಗಿದೆ. ಅದಕ್ಕಾಗಿ ರೈತರಿಗೆ ನಿಜವಾಗಿ ಸಲ್ಲಬೇಕಾದ ಸಹಾಯ ಸರಿಯಾಗಿ ಆಗುತ್ತಿಲ್ಲ. ಈ ವಿಚಾರದಲ್ಲಿ ಸರ್ಕಾರ ನಿಗಾ ಕೊಡಬೇಕು.

ಇನ್ನು ನನ್ನ ತಾಲ್ಲೂಕಿನಲ್ಲಿ ಆಗಿರತಕ್ಕ ಅಭಿವೃದ್ಧಿ ಕಾರ್ಯಗಳನ್ನು ನೋಡಿದರೆ ಅನೇಕ ಕಾಮಗಾರಿಗಳು ಅರ್ಧಮರ್ಧವಾಗಿ ನಿಂತುಹೋಗಿವೆ. ಅವನ್ನೆಲ್ಲಾ ಪೂರ್ತಿಮಾಡಬೇಕು. ರಾಷ್ಟ್ರೀಯ ವಿಸ್ತರಣಾ ಯೋಜನೆಯ ಕಾರ್ಯಗಳಿಗೆ ಹಣ ಕೊಟ್ಟಿದ್ದರೂ ಕೂಡ ಆ ಹಣವನ್ನು ದುರುಪಯೋಗ ಮಾಡಿಕೊಂಡಿದ್ದಾರೆ. ಅದೂ ಅಲ್ಲದೆ ಇವತ್ತಿನ ದಿವಸ ಅರ್ಜಿ ಇಲ್ಲದೇ ಇರುವವರನ್ನೆಲ್ಲಾ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿನ ಸದಸ್ಯರನ್ನಾಗಿ ತೆಗೆದುಕೊಳ್ಳಬೇಕೆಂದು ಜಿಲ್ಲಾಧಿಕಾರಿಗಳು ಬ್ಯಾಂಕಿಗೆ ಕಳುಹಿಸಿದ್ದಾರೆ. ರಿಲೀಫ್ ಕಾಮಗಾರಿಗಳ ಪೈಕಿ ನೀರಾವರಿ ಬಾವಿಗಳ ನಿರ್ಮಾಣ ಕಾರ್ಯವನ್ನು ಕೂಡಲೇ ಕೈಗೊಳ್ಳಬೇಕು. ಪದೇ ಪದೇ ನಾವು ಇಲ್ಲಿ ಭಾಷಣ ಮಾಡುತ್ತಿರುವುದನ್ನು ನೋಡಿ ನಮ್ಮ ರೈತರು ನಮ್ಮ ಕ್ಷೇತ್ರಕ್ಕೆ ನಾವು ಹೋದಾಗ ಅವರಿಗೆ ಸಂಬಂಧಪಟ್ಟ ವ್ಯವಸಾಯ ಇಲಾಖೆಗೆ ಹೋಗಿ ಕಂಬ ಕಂಬಗಳನ್ನು ಸುತ್ತುವ ಕೆಲಸವೇನೂ ಹೋಗಿಲ್ಲ, ಇನ್ನೂ ಅದು ಹೆಚ್ಚಾಗುತ್ತಲೇ ಇದೆ, ನಾವು ಎಷ್ಟು ಹಣ ಖರ್ಚುಮಾಡಿದರೂ ಪ್ರಯೋಜನವಿಲ್ಲ, ಎಷ್ಟೇ ಅರ್ಜಿಗಳನ್ನು ಕೊಟ್ಟರೂ ಫಲವಿಲ್ಲ ಎಂದು ಹೇಳುತ್ತಾರೆ. ಕೇವಲ ಸರ್ಕಾರದ 20 ನೀರಾವರಿ ಬಾವಿಗಳಿಂದ ಮಾತ್ರ ನನ್ನ ತಾಲ್ಲೂಕಿನಲ್ಲಿರತಕ್ಕ ರೈತರಿಗೆ ಅನುಕೂಲ ದೊರೆಯುತ್ತಿದೆ. ಇದು ಬೆಟ್ಟ ಅಗೆದು ಇಲಿಯನ್ನು ಹಿಡಿದರು ಎಂದು ಹೇಳುವ ಹಾಗೆ ಇದೆ. ಒಟ್ಟು 100-150 ಬಾವಿಗಳಲ್ಲಿ ಸ್ವಲ್ಪಮಟ್ಟಿಗೆ ನೀರು ಕಾಣುತ್ತಾ ಇದೆ. ಆದರೆ ಮುಂಗಾರು ಮಳೆಯೇನಾದರೂ ಬಂದರೆ ಈಗಿರತಕ್ಕ ನೀರಾವರಿ ಬಾವಿಗಳು ಕುಸಿದು ಬೀಳತಕ್ಕ ಪರಿಸ್ಥಿತಿಯಲ್ಲಿವೆ. ಆದ್ದರಿಂದ ಅವುಗಳ ಪಕ್ಕಾ ನಿರ್ಮಾಣ ಕಾರ್ಯಗಳನ್ನು ಸರ್ಕಾರದವರು ಕೂಡಲೇ ಕೈಗೊಳ್ಳಬೇಕು. ಕುಡಿಯುವ ನೀರಿನ ಬಾವಿಗಳನ್ನೂ ಸಹ ನನ್ನ ತಾಲ್ಲೂಕಿನಲ್ಲಿ ಹೆಚ್ಚು ಹೆಚ್ಚಾಗಿ ನಿರ್ಮಾಣಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇಷ್ಟು ಮಾತನಾಡಲು ನನಗೆ ಅವಕಾಶವನ್ನು ಕಲ್ಪಿಸಿಕೊಟ್ಟಂಥ ಪೂಜ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಜಿ. ಎ. ತಿಮ್ಮಪ್ಪಗೌಡ (ಅರಕಲಗೂಡು).—ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರು ಅವರ ಭಾಷಣದಲ್ಲಿ (ಪುಟ 2 ರಲ್ಲಿ) ಮೂರನೇ ಪಂಚವಾರ್ಷಿಕ ಯೋಜನಾವಧಿಯಲ್ಲಿ 250 ಕೋಟಿ ರೂಪಾಯಿಗಳು ವೆಚ್ಚವಾಗತಕ್ಕದೆಂದು ನಿರ್ಧಾರವಾದ ಮೊಬಲಗಿನಲ್ಲಿ ಸೇಕಡ 97ಕ್ಕಿಂತಲೂ ಕೊಂಚ ಹೆಚ್ಚು ಹಣವು ಖರ್ಚಾಗಿದೆ ಎಂಬುದಾಗಿ ಹೇಳಿದ್ದಾರೆ. ಆದರೆ ವಿರೋಧಪಕ್ಷದ ಕಡೆಯಿಂದ ಕೆಲವು ಸ್ನೇಹಿತರು ಈ ಪಂಚವಾರ್ಷಿಕ ಯೋಜನೆಯಲ್ಲಿ 250 ಕೋಟಿ ರೂಪಾಯಿಗಳಷ್ಟು ಹಣವೇನೋ ಖರ್ಚಾಗಿದೆಯೇ ಹೊರತು ಅದರ ಫಲವೇನೂ ಇಲ್ಲವೆಂದು ಹೇಳಿದರು. ಶ್ರೀಮಾನ್ ಮುಕ್ಕಣ್ಣಪ್ಪನವರು ಕೆಲವು ವಾಸ್ತವಾಂಶಗಳ ವಿಚಾರವಾಗಿ ನಿಜವಾಗಿ ಮಾತನಾಡಿದರು. ಅನೇಕ ವಿಷಯಗಳ ಬಗ್ಗೆ ಬಹಳ ಉತ್ಪ್ರೇಕ್ಷೆಯಿಂದ ಮಾತನಾಡಿದರು, ಕಾರಣ ಅವರದು ತಪ್ಪಲ್ಲ, ಮುಂದಿನ ವರ್ಷ ಚುನಾವಣೆ ಸಮೀಪಿಸುತ್ತಾ ಇದೆ. ಅದರಿಂದ ಅವರು ಇಲ್ಲಿಯೂ ಚುನಾವಣಾ ಪ್ರಚಾರದ ಭಾಷಣ ಮಾಡಿದ ಹಾಗೆ ಮಾತನಾಡಿದರು. ಈ 250 ಕೋಟಿ ರೂಪಾಯಿಗಳಲ್ಲಿ ಅನೇಕ ಇಲಾಖೆಗಳಲ್ಲಿ, ಅಂದರೆ, ವ್ಯವಸಾಯ, ವಿದ್ಯೆ ಮತ್ತು ಇತರ ಇಲಾಖೆಗಳಲ್ಲಿ ಯಾವ್ಯಾವ ರೀತಿಯಲ್ಲಿ ಎಷ್ಟೆಷ್ಟು ಮೊಬಲಗು ಖರ್ಚಾಗಿದೆ, ನೀರಾವರಿ ಕೆಲಸಕಾರ್ಯಗಳಿಗೆ ಎಷ್ಟು ಮೊಬಲಗು ಖರ್ಚಾಗಿದೆ ಹೀಗೆ ದೇಶಾಭಿವೃದ್ಧಿ ಕಾರ್ಯಗಳು ಏನೇನು ನಡೆದಿವೆ ಎಂಬುದನ್ನು ಸರಿಯಾಗಿ ತಿಳಿದುಕೊಳ್ಳದೇ ಈ ಪಂಚವಾರ್ಷಿಕ ಯೋಜನೆಯಲ್ಲಿ ಏನೂ ನಡೆದಿಲ್ಲ ಎನ್ನುವ ಧೋರಣೆಯಲ್ಲಿ ಮಾನ್ಯ ಶ್ರೀ ಮುಕ್ಕಣ್ಣಪ್ಪನವರೂ ಮತ್ತು ಇತರ ನನ್ನ ಸ್ನೇಹಿತರು ಅನೇಕರು ಮಾತನಾಡಿದರು. ಶ್ರೀಮಾನ್ ದೇವೇಗೌಡರೂ ಸಹ ಈಗತಾನೇ ಮಾತನಾಡುತ್ತಾ ಈ ಯೋಜನಾವಧಿಯಲ್ಲಿ ಸಂಪೂರ್ಣವಾಗಿ ಏನೂ ನಡೆದಿಲ್ಲವೆಂದು ಹೇಳಿದರು. ನಿನ್ನೆ ಶ್ರೀ ಮುಕ್ಕಣ್ಣಪ್ಪನವರು ಮಾತನಾಡುತ್ತಾ ಈ ಯೋಜನಾವಧಿಯಲ್ಲಿ 250 ಕೋಟಿ ರೂಪಾಯಿಗಳು ಖರ್ಚಾದರೂ ಕೂಡ ಕೊನೆಗೆ ಏನು ಆಗಿದ್ದು ಅಂದರೆ ಸೋಮವಾರ ಅನ್ನ ಊಟ

(ಶ್ರೀ ಡಿ. ಎ. ತಿಮ್ಮಪ್ಪ ಗೌಡ)

ಬಿಡಿ, ಇಡ್ಲಿ ಮತ್ತು ದೋಸೆ ಮಾಡಬೇಡಿ, ಇಷ್ಟೇ ಆಗಿರುವ ಫಲಿತಾಂಶ ಎಂಬುದಾಗಿ ಹೇಳಿದರು. ನಮ್ಮ ಸ್ನೇಹಿತರಲ್ಲಿ ನಾನು ಕೇಳುವುದಿಷ್ಟೆ. ಆ ಮಾನ್ಯ ಸದಸ್ಯರ ಕ್ಷೇತ್ರಗಳಲ್ಲಿ ಅಭಿವೃದ್ಧಿ ಕಾರ್ಯಗಳು ಏನೇನು ನಡೆದಿವೆ, ಈ 5 ವರ್ಷಗಳಲ್ಲಿ ಅವರವರ ಕ್ಷೇತ್ರದಲ್ಲಿ ಅವರವರ ಮನಸ್ಸಿನಲ್ಲಿ ಮಾಡಿದ್ದಂತಹ ಆಶೋತ್ತರಗಳು ಈಡೇರಿವೆಯೋ ಮತ್ತು ಅವರು ಕೇಳಿಕೊಂಡ ಮೇರೆಗೆ ಎಷ್ಟು ಸಣ್ಣ ಕೆರೆಗಳು ಮತ್ತು ಸಣ್ಣ ನೀರಾವರಿ ಕೆಲಸಕಾರ್ಯಗಳು ನಡೆದಿವೆ, ಕೆಲವು ಸಂದರ್ಭಗಳಲ್ಲಿ ಮಾನ್ಯ ಸದಸ್ಯರುಗಳು ಕೇಳದೆಯೇ ಇರುವ ಎಷ್ಟು ಕಾರ್ಯಗಳನ್ನು ಈ ಪಂಚವಾರ್ಷಿಕ ಯೋಜನೆಗಳಲ್ಲಿ ಸಾಧಿಸಿದ್ದಾರೆ ಎಷ್ಟು ಸ್ಕೂಲುಗಳನ್ನು ಹೊಸದಾಗಿ ತೆರೆದಿದ್ದಾರೆ, ಎಷ್ಟು ಪಂಪುಸೆಟ್ಟುಗಳನ್ನು ಒದಗಿಸಿದ್ದಾರೆ, ವಿದ್ಯುಚ್ಛಕ್ತಿ ಸೌಕರ್ಯಗಳನ್ನು ಎಷ್ಟು ಗ್ರಾಮಾಂತರ ಪ್ರದೇಶಗಳಲ್ಲಿ ಕಲ್ಪಿಸಿಕೊಟ್ಟಿದ್ದಾರೆ—ಇವೆಲ್ಲ ವನ್ನೂ ಅವರು ವಿಚಾರಮಾಡಿ ನೋಡಿದ್ದರೆ ಅವರು ಏತಕ್ಕೆ ಅವನ್ನೆಲ್ಲಾ ಗಮನದಲ್ಲಿಟ್ಟುಕೊಳ್ಳದೆ ಇಲ್ಲ ಮಾತನಾಡಿದರೋ ನನಗೆ ಅರ್ಥವಾಗಲಿಲ್ಲ. ಸರ್ಕಾರದವರು ಮಾಡಿರತಕ್ಕಂಥ ಈ ಕಾರ್ಯಗಳಲ್ಲಿ ನಮ್ಮ ಆಲೋಚನೆ ಇದ್ದುದು ಈ ವರ್ಷ ಬಹಳವಾಗಿ ಬಂಪರ್ ಕ್ರಾಪ್ ಹಾಗೂ ವಿಶೇಷವಾದಂಥ ರೀತಿಯಲ್ಲಿ ಆಹಾರಧಾನ್ಯಗಳನ್ನು ಬೆಳೆದು ನ್ಯಾಯವಾಗಿ ಜನರಿಗೆ ಹಂಚಬೇಕು, ಆಹಾರಧಾನ್ಯಗಳ ಬೆಲೆ ವಿಪರೀತ ಇಳಿದು ರೈತರ ರಕ್ಷಣೆಗೋಸ್ಕರ ಅವರು ಬೆಳೆದಂತಹ ಆಹಾರಪದಾರ್ಥಗಳಿಗೆ ಒಳ್ಳೆಯ ಮತ್ತು ನ್ಯಾಯವಾದ ಬೆಲೆ ದೊರಕಬೇಕು, ಜನಗಳು ನ್ಯಾಯವಾದ ಬೆಲೆಗೆ ಆ ಧಾನ್ಯಾನುಗಳನ್ನು ಕೊಂಡು ರೈತರಿಗೆ ನ್ಯಾಯವನ್ನು ದೊರಕಿಸಿಕೊಟ್ಟು ಸರ್ಕಾರದವರು ಅವರ ರಕ್ಷಣೆಗೆ ಬರಬೇಕೆಂಬ ರೀತಿಯಲ್ಲಿಯೂ ನಾವು ಆಲೋಚನೆ ಮಾಡುತ್ತಿದ್ದೆವು. ಆದರೆ ದೈವವಶಾತ್ ಪ್ರಕೃತಿಯ ವಿಕೋಪ ದಿಂದ ಮಳೆ ಬಾರದೆ ನಮ್ಮ ಸ್ನೇಹಿತರು ಹೇಳಿದ ಹಾಗೆ ನೂರಾರು ವರ್ಷಗಳಿಂದಲೂ ಕೂಡ ಇಂತಹ ಕಷ್ಟ ಈ ದೇಶದಲ್ಲಿ ಒದಗಿರಲಿಲ್ಲ, ಅಂತಹ ಪರಿಸ್ಥಿತಿ ಈಗ ದೇಶದಲ್ಲಿ ಉಂಟಾದ್ದರಿಂದ, ಅನಿರೀಕ್ಷಿತವಾಗಿ ಇಡೀ ರಾಜ್ಯದಲ್ಲಿ ಅಭಾವ ಪರಿಸ್ಥಿತಿ ಉಂಟಾದ್ದರಿಂದ ಮನುಷ್ಯನಾದವನು ಏನು ನಿರೀಕ್ಷೆ ಇಟ್ಟು ಕೊಂಡಿದ್ದನೋ, ಏನು ಆಶೋತ್ತರಗಳನ್ನು ರೈತರು ಹಾಗೂ ನಮ್ಮ ಜನತೆ ಇಟ್ಟುಕೊಂಡಿದ್ದರೋ, ಅದಕ್ಕೆಲ್ಲಾ ತದ್ವಿರುದ್ಧವಾಗಿ ದೇಶದಲ್ಲಿ ಈ ಪರಿಸ್ಥಿತಿ ನಮಗೆ ಉಂಟಾಗಿದೆ. ನಮ್ಮ ಸ್ನೇಹಿತರೆಲ್ಲರಿಗೂ ಗೊತ್ತಿದೆ ಯಾವ ರೀತಿಯಲ್ಲಿ ಸರ್ಕಾರದವರು ರೈತರಿಗೆ ಉತ್ತಮ ಬೀಜಗಳನ್ನು ಹಾಗೂ ಗೊಬ್ಬರ ವನ್ನು ಒದಗಿಸಿಕೊಡುವುದರಲ್ಲಿ ಕಾರ್ಯಕ್ರಮಗಳನ್ನು ಕೈಗೊಂಡಿದ್ದಾರೆಂಬುದು. ನಿಜವಾಗಿ ಪ್ರಕೃತಿಯ ಕೃಪಾಕಟಾಕ್ಷ ಇದ್ದಿದ್ದರೆ ಈ ವರ್ಷ ಉತ್ತಮ ರೀತಿಯಲ್ಲಿ ಬೆಳೆದು ದೇಶದ ಕಣಜವನ್ನು ತುಂಬುವುದರಲ್ಲಿ ಯಾವ ಉತ್ಪ್ರೇಕ್ಷೆ ಸಹ ಇರಲಿಲ್ಲ. ಒಂದು ವಿಷಯವನ್ನು ನಮ್ಮ ಸ್ನೇಹಿತರು ಯೋಚನೆಮಾಡಬೇಕು. ಮನುಷ್ಯ ಎಷ್ಟೇ ಪ್ರಯತ್ನಮಾಡಿದರೂ ದೈವಕೃಪೆ ಇಲ್ಲದಿದ್ದರೆ ಎಂತಹ ಕಷ್ಟಗಳು ಬರುತ್ತವೆ ಎಂಬುದನ್ನು ಪ್ರತಿಯೊಬ್ಬನೂ ಯೋಚನೆ ಮಾಡಬೇಕಾಗಿದೆ. ಆ ವಿಚಾರ ನಮ್ಮ ಸ್ನೇಹಿತರಿಗೆ ಚೆನ್ನಾಗಿ ತಿಳಿದಿದ್ದರೆ ಅವರು ಆ ರೀತಿಯಲ್ಲಿ ಮಾತನಾಡುವುದಕ್ಕೆ ಅವಕಾಶ ಇರುತ್ತಿರಲಿಲ್ಲ. ಆಹಾರದ ಉತ್ಪಾದನೆಯಲ್ಲಿ ಕೂಡ ಐದು ವರ್ಷಗಳ ಕಾಲದಲ್ಲಿ 10 ಲಕ್ಷ ಟನ್ ದವಸವನ್ನು ಬೆಳೆಸಬೇಕು ಎನ್ನುವ ಒಂದು ಗುರಿಯನ್ನು ಸರ್ಕಾರದವರು ಇಟ್ಟುಕೊಂಡಿದ್ದರು. ಆದರಲ್ಲಿ ಹಿಂದಿನ ವರ್ಷಗಳಲ್ಲಿ ಅಷ್ಟು ಗುರಿಯನ್ನ ಪೂರ್ತಿಯಾಗಿ ಮುಟ್ಟುವುದಕ್ಕೆ ಆಗದೇ ಇದ್ದರೂ ಕೂಡ ಆ ಗುರಿಯ ಹತ್ತಿರ ಹತ್ತಿರ ಬಂದಿತ್ತು. ಈ ವರ್ಷ ನಾನು ಈಗಾಗಲೇ ಹೇಳಿದ ಹಾಗೆ ದವಸವನ್ನು ಬೆಳೆಯುವುದರಲ್ಲಿ ಯಾವ ಒಂದು ಗುರಿಯನ್ನು ಇಟ್ಟುಕೊಂಡಿದ್ದರೋ ಅದರ ಹತ್ತಿರ ಹತ್ತಿರ ಮುಟ್ಟುವ ಪರಿಸ್ಥಿತಿ ಇತ್ತು. ಆದರೆ ಮಳೆಯ ಅಭಾವದಿಂದ ಅದು ತಲೆಕೆಳಕು ಆಯಿತು. ಮುಂದಿನ ಸಾರಿ ಇಂಥಾ ಒಂದು ಪರಿಸ್ಥಿತಿ ಉಂಟಾಗದೆ ಇರಲಿ ಎಂದು ನಾನು ದೇವರನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

4-00 P.M.

ಇನ್ನು ಸಣ್ಣ ನೀರಾವರಿ ಕೆಲಸಗಳಿಗೋಸ್ಕರ ಸರ್ಕಾರದವರು ಹೆಚ್ಚಿನ ಹಣವನ್ನು ಒದಗಿಸ ಬೇಕಾಗಿದೆ. ಸಣ್ಣ ನೀರಾವರಿ ವಿಚಾರದಲ್ಲಿ ನಮ್ಮ ಸ್ನೇಹಿತರು ಈಗಾಗಲೇ ಹೇಳಿದ ಹಾಗೆ ಅದಕ್ಕೆ ಸಾಕಷ್ಟು ಹಣ ಖರ್ಚಾಗಿದೆ. ಆಡಳಿತ ಪಕ್ಷದಲ್ಲಿರತಕ್ಕ ಕೆಲವರ ಒತ್ತಾಯದಿಂದ ಹಾಗೂ ವಿರೋಧಪಕ್ಷದಲ್ಲಿರತಕ್ಕ ಕೆಲವರ ಒತ್ತಾಯದಿಂದ ಕೆರೆಗಳನ್ನು ಇಂಥಾಕಡೆ ಕಟ್ಟಿಸಿ, ಲಿಫ್ಟ್ ಇರಿಗೇಷನ್ ಇಂಥಾ ಕಡೆ ಮಾಡಿ, ಎಂದು ಸರ್ಕಾರದವರಿಗೆ ಹೇಳಿದ್ದರಿಂದ ಅವರು ಕೆಲವು ಯೋಜನೆಗಳನ್ನು ಬಿಟ್ಟು ಪೂರ್ಣವಾಗಿ ಮತ್ತು ಜಾಗ್ರತೆಯಾಗಿ ಫಲವನ್ನು ಕೊಡತಕ್ಕಂಥ ಯೋಜನೆ ಗಳನ್ನ ಹಿಂದಕ್ಕೆ ಒತ್ತಿ ಒತ್ತಾಯದ ಕೆಲವು ಯೋಜನೆಗಳನ್ನ ತೆಗೆದುಕೊಂಡು ಮಾಡಿದ್ದರಿಂದ

ಅವುಗಳಲ್ಲಿ ಎಷ್ಟು ವೇಗದಲ್ಲಿ, ಎಷ್ಟು ಪ್ರಮಾಣದಲ್ಲಿ ಪ್ರತಿಫಲ ದೊರೆಯಬೇಕಾಗಿತ್ತೋ ಅದು ದೊರೆಯದೆ ಇರುವುದು ಅಲ್ಪಸ್ವಲ್ಪ ನಿಜವಿರಬಹುದು.

ಸರ್ಕಾರಕ್ಕೆ ನಾನೊಂದು ಸಲಹೆಯನ್ನು ಮಾಡುತ್ತೇನೆ. ಅದೇನೆಂದರೆ, ಸಣ್ಣ ನೀರಾವರಿ ವಿಚಾರದಲ್ಲಿ ಲಿಫ್ಟ್ ಇರಿಗೇಷನ್ ಸ್ಕೀಮುಗಳಿಗೆ ಒಂದು ಜರೂರಾದ ಕ್ರಮವನ್ನು ಕೈಗೊಂಡು ಅದನ್ನು ಕಾರ್ಯಗತ ಮಾಡಬೇಕೆಂದು ನಾನು ಸರ್ಕಾರದವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಕಾರಣ, ಈಗ ನಮ್ಮ ಹಾಸನ ಜಿಲ್ಲೆಯನ್ನು ತೆಗೆದುಕೊಂಡರೆ, ಅಲ್ಲಿ ಯಗಚಿ, ಹೇಮಾವತಿ ಮುಂತಾದ ನದಿಗಳು ಹರಿಯುತ್ತವೆ. ಆ ನದಿಗಳಲ್ಲಿ ವರ್ಷವೆಲ್ಲಾ ನೀರು ಹರಿಯುತ್ತಾ ಇರುತ್ತದೆ. ಆ ನದಿಗಳಿಂದ ಲಿಫ್ಟ್ ಇರಿಗೇಷನ್ ಹಾಕಿ ಮಾಡಿದರೆ ಸ್ವಲ್ಪ ಕಡಿಮೆ ಖರ್ಚಿನಲ್ಲಿ ವ್ಯವಸಾಯಕ್ಕೆ ನೀರನ್ನು ಒದಗಿಸುವುದಕ್ಕೆ ಅವಕಾಶವಿದೆ. ಸಾಮಾನ್ಯವಾಗಿ ಸರಾಸರಿ ಒಂದು ಲಿಫ್ಟ್ ಇರಿಗೇಷನ್ ಯೋಜನೆಗೆ ಒಂದು ಲಕ್ಷ ರೂಪಾಯಿಗಳು ಖರ್ಚಾಗುತ್ತದೆ. ಅದರಿಂದ 350 ಎಕರೆ ಪ್ರದೇಶ ನೀರಾವರಿ ಆಗುತ್ತದೆ. ಆ ರೀತಿ ವರ್ಷವೆಲ್ಲಾ ಲಿಫ್ಟ್ ಇರಿಗೇಷನ್ ಮುಖಾಂತರ ನೀರನ್ನು ಒದಗಿಸುವುದರಿಂದ ಒಂದು ವರ್ಷಕ್ಕೆ ಎರಡು ಬೆಳೆಗಳನ್ನು ತೆಗೆಯಬಹುದು. ಸ್ವಲ್ಪ ಬುದ್ಧಿವಂತಿಕೆಯಿಂದ ಮಾಡಿದರೆ ಮೂರು ಬೆಳೆಗಳನ್ನು ಕೂಡ ತೆಗೆದುಕೊಳ್ಳಬಹುದು. ಈ ರೀತಿಯಾಗಿ ಹಾಸನ ಜಿಲ್ಲೆಯಲ್ಲಿ ಒಂದು ಲಿಫ್ಟ್ ಇರಿಗೇಷನ್ ಯೋಜನೆಗೆ ಒಂದು ಲಕ್ಷ ರೂಪಾಯಿಗಳನ್ನು ಖರ್ಚುಮಾಡಿದರೆ ಅದರಿಂದ ಒಂದು ವರ್ಷಕ್ಕೆ 350 ಎಕರೆಗಳಲ್ಲಿ ಮೂರು ಬೆಳೆಗಳನ್ನು ತೆಗೆಯುವುದಕ್ಕೆ ಅನುಕೂಲವಾಗುತ್ತದೆ. ಅವು ಉತ್ತಮವಾದ ಜಾಗಗಳು ಮತ್ತು ಒಳ್ಳೆಯ ಯೋಜನೆಗಳೆಂದು ಮರಾಮತ್ತು ಇಲಾಖೆಯವರು ಒಪ್ಪತಕ್ಕ 100 ಜಾಗಗಳು ನಮ್ಮ ಹಾಸನ ಜಿಲ್ಲೆ ಒಂದರಲ್ಲೇ ಇವೆ. ಒಂದು ಯೋಜನೆಗೆ ಒಂದು ಲಕ್ಷ ರೂಪಾಯಿಗಳಂತೆ 100 ಯೋಜನೆಗಳಿಗೆ ಒಂದು ಕೋಟಿ ರೂಪಾಯಿಗಳನ್ನ ಖರ್ಚುಮಾಡಿದರೆ 35,000 ಎಕರೆಗಳಲ್ಲಿ ಒಂದು ವರ್ಷಕ್ಕೆ ಮೂರು ಬೆಳೆಗಳನ್ನ ಬೆಳೆಯಬಹುದು. ಒಂದು ಎಕರೆಗೆ ಮೂರು ಪಲ್ಲ ಬತ್ತದಂತೆ ಮೂರು ಬೆಳೆಗಳಿಗೂ ಲೆಕ್ಕವನ್ನು ಹಾಕಿಕೊಂಡರೆ ಒಂದು ವರ್ಷಕ್ಕೆ ಸುಮಾರು 10 ಲಕ್ಷ ಪಲ್ಲ ಬತ್ತವನ್ನು ಬೆಳೆಯಬಹುದು. ಇವೊತ್ತು ದೇಶದಲ್ಲಿ ಆಹಾರ ಅಭಾವ ಇರುವಾಗ ಅವಷ್ಟು ಬೇಗ ಆಹಾರವನ್ನ ಬೆಳೆಯಬೇಕು ಎನ್ನುವ ಉದ್ದೇಶ ಎಲ್ಲರಿಗೂ ಇರುವಾಗ ಲಿಫ್ಟ್ ಇರಿಗೇಷನ್ ಯೋಜನೆಗಳನ್ನು ಕಾರ್ಯಗತಮಾಡಲು ಜರೂರು ಕ್ರಮವನ್ನು ಕೈಗೊಂಡರೆ ಕಡಿಮೆ ದುಡ್ಡಿನಲ್ಲಿ ಅತಿಜಾಗ್ರತೆಯಾಗಿ ಜಮೀನಿಗೆ ನೀರಾವರಿ ಸೌಕರ್ಯವನ್ನು ಒದಗಿಸುವುದಕ್ಕೆ ಅವಕಾಶವಿದೆ. ಈಗಾಗಲೇ ಅನೇಕರು ಆರೀತಿ ಮಾಡಿದ್ದಾರೆ. ಮಾನ್ಯ ಮಂತ್ರಿಗಳು ನಮ್ಮ ಹಾಸನ ಜಿಲ್ಲೆಗೆ ಪ್ರವಾಸ ಬಂದಿದ್ದಾಗ ಅದನ್ನೆಲ್ಲಾ ಅವರ ಮುಂದೆ ನಾವು ಇಟ್ಟಿದ್ದೆವು. ಅವಷ್ಟು ಬೇಗ ಆ ಯೋಜನೆಗಳನ್ನು ತಯಾರು ಮಾಡುತ್ತೇವೆ, ಇನ್‌ವೆಸ್ಟಿಗೇಷನ್ ಮಾಡುತ್ತೇವೆ, ಅದಕ್ಕೆ ಎಷ್ಟು ದುಡ್ಡು ಬೇಕೋ ಅಷ್ಟು ದುಡ್ಡನ್ನು ಕೊಡುತ್ತೇವೆ ಎಂದು ಮಾನ್ಯ ಮಂತ್ರಿಗಳು ಹೇಳಿದ್ದರು. ಆದರೆ ಇಲ್ಲಿಯವರೆಗೂ ಆ ನೂರು ಜಾಗಗಳ ಪೈಕಿ 4—5 ಜಾಗಗಳೂ ಕೂಡ ಇನ್‌ವೆಸ್ಟಿಗೇಷನ್ ಆಗಿಲ್ಲ. ಆ ಯೋಜನೆಗಳು ಮಂಜೂರಾಗಿಲ್ಲ. ಅದಕ್ಕೆ ದುಡ್ಡನ್ನು ಕೊಟ್ಟಿಲ್ಲ. ಆದ್ದರಿಂದ ಆಹಾರವನ್ನು ಹೆಚ್ಚು ಬೆಳೆಯಬೇಕು ಎನ್ನುವ ಆದ್ಯತೆ ಸರ್ಕಾರದವರಿಗೆ ಇದ್ದರೆ ಆ ಲಿಫ್ಟ್ ಇರಿಗೇಷನ್ ಯೋಜನೆಗಳನ್ನು ಜರೂರಾಗಿ ತೆಗೆದುಕೊಳ್ಳಬೇಕೆಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಸ್. ಗೋಪಾಲ ಗೌಡ (ತೀರ್ಥಹಳ್ಳಿ).—ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಭಾಷಣವನ್ನು ತಯಾರು ಮಾಡಿರತಕ್ಕಂಥ ಸರ್ಕಾರದವರು, ಸರ್ಕಾರ ಧೋರಣೆಯಲ್ಲಿ ಮಾಡಿರಬಹುದಾದಂತಹ ಅಥವಾ ಮಾಡಬೇಕಾದಂತಹ ಯಾವ ಬದಲಾವಣೆಗಳನ್ನೂ ಸೂಚಿಸಿಲ್ಲ. ಬಹುಶಃ ಆಯವ್ಯಯ ಅಧಿವೇಶನಕ್ಕೆ ಸೆಕ್ರಟರಿಗಳು ತಯಾರು ಮಾಡತಕ್ಕ ಭಾಷಣದ ಕೆಲವೊಂದು ಅಂಶಗಳನ್ನು ಇದರಲ್ಲಿ ಸೇರಿಸಿ ಒಂದು ಭಾಷಣವನ್ನು ರಾಜ್ಯಪಾಲರ ಮೂಲಕ ಈ ಮಾನ್ಯ ಸಭೆಯ ಮುಂದೆ ಇಟ್ಟಿರತಕ್ಕದ್ದು ಸರ್ಕಾರದ ಒಂದ ಅಧ್ಯಕ್ಷತೆ ಮತ್ತು ಹೊಣೆಗೇಡಿತನವನ್ನು ಸೂಚಿಸುತ್ತದೆ. ಸರ್ಕಾರದವರು ತಮ್ಮ ಕೆಲಸದ ಕಡೆ ಗಮನ ಕೊಡುವುದಕ್ಕೆ ಆಗದೆ ಬರೀ ರಾಜಕೀಯವೇ ಅವರನ್ನು ಕಾಡುತ್ತಿದೆ. ಅದಕ್ಕೆ ಈ ಒಂದು ರಾಜ್ಯಪಾಲರ ಭಾಷಣವೇ ಸಾಕ್ಷಿಯಾಗಿದೆ. ಈಗ ಉದಾಹರಣೆಗೆ ಹೇಳುವುದಾದರೆ ರಾಜ್ಯಪಾಲರ ಭಾಷಣದಲ್ಲಿ ಬೆಂಗಳೂರಿನ ಸರ್ಕಾರಿ ಸಾಬೂನು ಕಾರ್ಖಾನೆಗೆ ತನ್ನ ವಾರ್ಷಿಕ ಉತ್ಪಾದನಾ ಸಾಮರ್ಥ್ಯವನ್ನು 1,500 ಟನ್ನುಗಳಿಂದ 6,000 ಟನ್ನುಗಳಿಗೆ ಹೆಚ್ಚಿಸಲು ಉದ್ಯಮ ಲೈಸೆನ್ಸು ಕೊಟ್ಟಿದೆ ಎಂದು ಹೇಳಿದ್ದಾರೆ. ಇದು ಯಾವ ಒಂದು ದೊಡ್ಡ ಸರ್ಕಾರದ ಪಾಲಿಸಿಯನ್ನು ಹೇಳತಕ್ಕಂಥ ಮಾತೆಂದು ನನಗೆ ಕಂಡುಬರಲಿಲ್ಲ.

ಇನ್ನೊಂದು ವಿಷಯವನ್ನು ಹೇಳುತ್ತೇನೆ. ಅದೇನೆಂದರೆ, ತಮಗೆ ಇದ್ದಂತಹ ಹುದ್ದೆಯನ್ನು ಕಳೆದುಕೊಂಡು ಬರೀ ಆಹಾರ ಖಾತೆಯನ್ನೇ ಹಿಡಿದುಕೊಂಡು ಕುಳಿತುಕೊಂಡಿರತಕ್ಕಂಥ ಶ್ರೀಮಾನ್

(ಶ್ರೀ ಎಸ್. ಗೋಪಾಲಗೌಡ)

ಜತ್ತಿಯವರು ಸೆಪ್ಟೆಂಬರ ತಿಂಗಳಿನಿಂದ ಮಾನಾಪಲಿ ಪ್ರೊಕ್ಯೂರ್‌ಮೆಂಟ್ ಮಾಡುತ್ತೇವೆಂದು ಹೇಳಿದ್ದಾರೆ. ಆ ವಿಷಯ ರಾಜ್ಯಪಾಲರ ಭಾಷಣದಲ್ಲಿ ಇಲ್ಲ. ಆದರೆ ಅಕ್ಕಿಯ ಲೆಕ್ಕವನ್ನು ಕೊಟ್ಟಿದ್ದಾರೆ. ಇದು ರಾಜ್ಯಪಾಲರ ಭಾಷಣ. ನಾನು ವಿಷಾದದಿಂದ ಹೇಳುತ್ತೇನೆ, ಈ ಮಂತ್ರಿಮಂಡಲವನ್ನು ದೇವರೇ ಕಾಪಾಡಬೇಕು. ಶ್ರೀಮಾನ್ ಶಿವಪ್ಪನವರು ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ ಮಾನ್ಯ ಅಧ್ಯಕ್ಷರು ಅವರನ್ನು ನೀವು ಪಾರ್ಲಿಮೆಂಟಿಗೆ ಹೋಗಿ ಎಂದು ತಿಳಿಸಿದರು.

ಅಧ್ಯಕ್ಷರು.—ಯಾವ ಸಂದರ್ಭದಲ್ಲಿ ?

ಶ್ರೀ ಎಸ್. ಗೋಪಾಲಗೌಡ.—ತಷ್ಕೆಂಟ್ ವಿಷಯವನ್ನು ಪ್ರಸ್ತಾಪ ಮಾಡುವಾಗ.

ನೆಹರೂರವರ ನಿಧನದ ಅನಂತರ ನಮ್ಮ ದೇಶದ ಪ್ರಧಾನಿಗಳಾಗಿ ಶ್ರೀ ಶಾಸ್ತ್ರಿಗಳವರು ಬಂದರು. ಅವರೂ ಇದೇ ಕಷ್ಟಕಾಲದಲ್ಲಿ ಈ ದೇಶದ ಪ್ರಧಾನಿಗಳಾದರು. ತಮ್ಮ ಜವಾಬುದಾರಿಗಳನ್ನು ನಿರ್ವಹಿಸುತ್ತಿದ್ದಾಗ ಅವರು ನಿಧನರಾದರು. ಇವೊತ್ತು ಭಾರತ ಮತ್ತು ಪಾಕೀಸ್ಥಾನಗಳ ಮಧ್ಯೆ ಇದ್ದಂತಹ ಘರ್ಷಣೆಯನ್ನು ಕಡಿಮೆ ಮಾಡುವುದಕ್ಕಾಗಿ, ಶಾಂತಿಯನ್ನು ಈ ದೇಶದಲ್ಲಿ ಕುದುರಿಸುವುದಕ್ಕಾಗಿ ದಿವಂಗತರಾದ ಲಾಲ್‌ಬಹದ್ದೂರ್ ಶಾಸ್ತ್ರಿಗಳವರು ರಷ್ಯಾದ ಮುಖಂಡರುಗಳ ನೇತೃತ್ವದಲ್ಲಿ ಪಾಕೀಸ್ತಾನದ ಅಧ್ಯಕ್ಷರಾದ ಶ್ರೀ ಅಯೂಬ್‌ಖಾನ್‌ರವರನ್ನೂ ಉಪಯೋಗಿಸಿಕೊಂಡು ಒಂದು ಒಪ್ಪಂದವನ್ನು ಮಾಡಿಕೊಂಡರು. ಅದನ್ನು ಈಗ ಕೇಂದ್ರ ಸರಕಾರದವರು ಕಾರ್ಯಗತ ಮಾಡುವುದರಲ್ಲಿದ್ದಾರೆ. ಇದರ ಬಗ್ಗೆ ನಾವು ಹೆಚ್ಚಾಗಿ ಇಲ್ಲಿ ಹೇಳಬೇಕಾದ್ದೇನೂ ಇಲ್ಲ. ಆದರೆ ಇವೊತ್ತು ಕಾರ್‌ಗಿಲ್ ಹಾಗೂ ಹಾಜೀ ಪೀರ್ ಕಣಿವೆಯಿಂದ ನಮ್ಮ ಸೈನ್ಯಗಳನ್ನು ನಾವು ವಾಪಸ್ಸು ಪಡೆಯಬೇಕೇ ಅದು ಹೇಗೆ ಮಾಡಬೇಕು ಎನ್ನುವುದನ್ನು ಯೋಚನೆ ಮಾಡುವಾಗ ನಾವು ನಮ್ಮ ಭೂಮಿಯನ್ನು ಬಿಟ್ಟು ಕೊಟ್ಟಂತಾಗಲಿಲ್ಲವೇ ಎನ್ನುವ ಪ್ರಶ್ನೆ ನಮ್ಮ ಮುಂದಿದೆ. ಈ ಸಂದರ್ಭದಲ್ಲಿ ಇವೊತ್ತು ಪ್ರಧಾನಿ ಶಾಸ್ತ್ರಿಗಳವರು ಪಾಕೀಸ್ತಾನವನ್ನು ಆಕ್ರಮಣ ಮಾಡಿದಾಗ ಧೈರ್ಯದಿಂದ, ಸಾಹಸದಿಂದ ಸೈನ್ಯದ ಕಾರ್ಯಾಚರಣೆಯನ್ನು ಮಾಡಿ ಆಕ್ರಮಣಕಾರರನ್ನು ಹಿಂದಕ್ಕೆ ಅಟ್ಟಿದರು. ಅನಂತರದಲ್ಲಿ ಶಾಂತಿಗೆ ಕರೆ ಬಂದಾಗ ಬೇರೆ ಪ್ರಾಂತಕ್ಕೆ ಹೋಗಿದ್ದಂತಹ ಒಂದು ಪರಿಸ್ಥಿತಿಯಲ್ಲಿ ಅವರು ಹುತಾತ್ಮರಾಗಿದ್ದಾರೆ. ಈ ಒಂದು ಪ್ಯಾರಾ ಇದರಲ್ಲಿ ಬಹಳ ಅಪ್ರಕೃತವಾಗಿತ್ತು. ಮತ್ತು ಇದರಲ್ಲಿ ಚುನಾವಣಾ ಕಾಲದಲ್ಲಿ ಪ್ರಚಾರ ಮಾಡುವ ಪ್ರಣಾಲಿಕೆ ಎಂದರೆ ಮ್ಯಾನಿಫೆಸ್ಟೋ ಎಂದು ಏನು ಹೇಳುತ್ತಾರೆ ಅದರಲ್ಲಿಯೂ ಬರೆಯದೆ ಇರತಕ್ಕಂತಹ ಒಂದು ಮಾತನ್ನು ಇದರಲ್ಲಿ ಪ್ರಸ್ತಾಪ ಮಾಡಿದ್ದಾರೆ. ಅದು ಹೊಸ ಪ್ರಧಾನಿಗಳ ಬಗ್ಗೆ ಮಾಡಿರತಕ್ಕಂತಹುದು. ಈ ಸಂದರ್ಭದಲ್ಲಿ ಹೊಸ ಪ್ರಧಾನಿಗಳನ್ನು ಆಯ್ಕೆ ಮಾಡುವ ಚುನಾವಣೆ ಬಗ್ಗೆ ಪ್ರಸ್ತಾಪ ಮಾಡುವುದು ಒಂದು ಅನುಚಿತವಾದ ವಿಷಯ. ಅಂತಹ ಒಂದು ವಿಚಾರವನ್ನು ನಮ್ಮ ಮಾನ್ಯ ವಿ. ವಿ. ಗಿರಿಯವರು ಹೇಗೆ ಓದಿದರೋ ಮತ್ತು ಅದನ್ನು ಅಧಿಕಾರಿ ವರ್ಗದವರು ಇದರಲ್ಲೇಕೆ ಉಲ್ಲೇಖಿಸಿದರೋ ನನಗೆ ತಿಳಿಯದು. ಇದರ ಬಗ್ಗೆ ಪ್ರಸ್ತಾಪ ಮಾಡುತ್ತ ಈಗಾಗಲೇ ಶ್ರೀ ಸಂತಾನಂರವರು ಬರೆದಿದ್ದಾರೆ. ಹೈ ಕಮ್ಯಾಂಡಿನಲ್ಲಿರುವ ಸಿಂಡಿಕೇಟ್‌ನ ಒಬ್ಬ ಅಧ್ಯಕ್ಷರು ಒಂದು ರಾಜ್ಯದ ಮುಖ್ಯಮಂತ್ರಿಗಳು ಒಪ್ಪಿದಂತಹ ಒಬ್ಬರನ್ನು ಪಾರ್ಲಿಮೆಂಟರಿ ಬೋರ್ಡಿನವರು ಆರಿಸಬೇಕಾಯಿತು, ಇದು ಅನುಚಿತವಾದ ಮಾರ್ಗ ಎಂದು. ಇದರ ಬಗ್ಗೆ ಎಷ್ಟೋ ಜನಗಳು ಈಗಾಗಲೇ ಹೇಳಿದ್ದಾರೆ. ರಾಜ್ಯದ ಮುಖ್ಯ ಮಂತ್ರಿಗಳ ಕೈಗೊಂಬೆಯಾಗಿರುವಂತಹವರು ಇಂದು ಭಾರತದ ಪ್ರಧಾನಿಗಳು. ಅವರಲ್ಲೂ ಭಾರತ ಕಾಂಗ್ರೆಸ್ಸಿನ ಹೈ ಕಮಾಂಡು ಸಿಂಡಿಕೇಟ್ ಎಂದು ಏನಿದೆ ಅದರ ಒಂದು ಕೈಗೊಂಬೆಯಾಗಿರುವಂತಹವರು ಇಂದಿನ ಪ್ರಧಾನಿಯಾಗಿರಬೇಕು ಎಂದು ಹೇಳುವುದು ಇಲ್ಲಿ ಅಪ್ರಾಸಂಗಿಕವಾದ ವಿಚಾರ. ಈ ದೇಶದ ಪ್ರಧಾನಿಗಳಾಗಿ ಯಾರನ್ನು ಆರಿಸಬೇಕು ಎಂದು ಇಲ್ಲಿ ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದಾರೆ. ಇವೆಲ್ಲ ಇಲ್ಲಿ ಬೇಕಾಗಿರಲಿಲ್ಲ.

ಸ್ವಾಮೀ, ಈ ಭಾಷಣದ ಬಗ್ಗೆ ನಾನು ಹೆಚ್ಚಾಗಿ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಆದರೆ ಇದರಲ್ಲಿ ಸರಕಾರದ ಯಾವ ನೀತಿಗಳನ್ನೂ ಕೊಟ್ಟಿಲ್ಲ. ಈ ವರ್ಷ ಮುಂಗಾರು ಮಳೆ ಹೋದುದರಿಂದ ಬೆಳೆಗಳಿಗೆ ನಷ್ಟವಾಗಿದೆ. ಈ ಪರಿಸ್ಥಿತಿ ಇಡೀ ದೇಶದಲ್ಲಿ ಇವೊತ್ತು ಇದೆ. ನಾವು ಸ್ವಾತಂತ್ರ್ಯಾನಂತರದಲ್ಲಿ ಮೂರು ಪಂಚವಾರ್ಷಿಕ ಯೋಜನೆಗಳನ್ನು ಮಾಡಿ ಮುಗಿಸುತ್ತಿದ್ದೇವೆ. ಆ ಯೋಜನೆಯ ಫಲವಾಗಿ ಆಹಾರದಲ್ಲಿ ಇನ್ನೂ ಸ್ವಯಂಪೂರ್ಣತೆ ಸಾಧಿಸುವುದಕ್ಕೆ ಆಗಲಿಲ್ಲ. ಇದಕ್ಕೆ ಅನೇಕ ಕಾರಣಗಳಿವೆ. ಈಗತಾನೇ ಶ್ರೀ ತಿಮ್ಮಪ್ಪ ಗೌಡರು ಹೇಳಿದ ಹಾಗೆ, ದೇಶದಲ್ಲಿ ಮಳೆ ಬಂದು ಕಾಲ ಕಾಲಕ್ಕೆ ಬೆಳೆ ಸಮೃದ್ಧಿಯಾಗಿ ಎಲ್ಲಿಯೂ ಆಹಾರದ ಹಾಹಾಕಾರ ಇಲ್ಲದೇ ಇರುವಾಗ ಇವೆಲ್ಲ ನಾವು ಮಾಡಿದಂತಹ ಪಂಚವಾರ್ಷಿಕ ಯೋಜನೆಗಳ ಫಲ ಎಂದು ಇಲ್ಲಿ ಹೇಳು

ತ್ತಾರೆ. ಯಾವುದಾದರೂ ಒಂದು ವರ್ಷದಲ್ಲಿ ಮಳೆ ಕಡಿಮೆಯಾಗಿ ದೇಶದಲ್ಲಿ ಆಹಾರದ ಅಭಾವ ಬಂದರೆ, ಆಗ ನಾವೇನು ಮಾಡುವುದು, ನಾವು ಯೋಜನೆಗಳನ್ನೆಲ್ಲಾ ಚೆನ್ನಾಗಿ ಮಾಡಿದ್ದೇವು, ದುರ್ದೈವವಶಾತ್ ಈಗ ಜನಕ್ಕೆ ತೊಂದರೆಯಾಗಿವೆ ಎಂದು ಹೇಳುತ್ತಾರೆ. ಆಹಾರದ ಅಭಾವದಲ್ಲಿ ಸುಮಾರು 1.20 ಲಕ್ಷ ಟನ್ನುಗಳಷ್ಟು ಆಹಾರಧಾನ್ಯದ ಕೊರತೆ ನಮ್ಮ ದೇಶದಲ್ಲಿದೆ ಎಂದು ಅಂದಾಜು ಮಾಡಿದ್ದಾರೆ. ನಮ್ಮ ರಾಜ್ಯದವರು ಇಲ್ಲಿ ಸುಮಾರು 8-9 ಲಕ್ಷ ಟನ್ನುಗಳಷ್ಟು ಕೊರತೆ ಇದೆ ಎಂದು ಹೇಳುತ್ತಾರೆ. ಅವರು ಯೋಚನೆ ಮಾಡಿರುವುದನ್ನು ನೋಡಿದರೆ ಸುಮಾರು 50 ಲಕ್ಷ ಜನ ಪಟ್ಟಣಗಳಲ್ಲಿ ವಾಸ ಮಾಡುವ ಅರ್ಬನ್ ಪಾಪ್ಯುಲೇಷನ್‌ನನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ಅವರು ಪ್ರತಿವರ್ಷವೂ ಸುಮಾರು ನಾಲ್ಕೈದು ಲಕ್ಷ ಟನ್ನುಗಳಷ್ಟು ದವಸವನ್ನು ಹೊರಗಡೆಯಿಂದ ತರಿಸಬೇಕೆಂದು ಅಂದಾಜು ಇಟ್ಟುಕೊಂಡಿದ್ದಾರೆ. ನಮ್ಮ ರಾಜ್ಯದಲ್ಲಿ ಸಾಮಾನ್ಯವಾಗಿ ಉತ್ಪಾದನೆ ಸುಮಾರು 45 ಲಕ್ಷ ಟನ್ನುಗಳು ಎಂದು ಅಂದಾಜು ಮಾಡಿದ್ದಾರೆಂದು ಈ ಭಾಷಣದಲ್ಲಿದೆ. ನನ್ನ ಅನುಭವದಲ್ಲಿ ಹೇಳುವುದಾದರೆ ಸುಮಾರು 35 ಲಕ್ಷ ಟನ್ನುಗಳಷ್ಟು ಬರುತ್ತೋ ಇಲ್ಲವೋ ಎಂದು ಇದೆ. ನಾನು ಅಂದಾಜು ಮಾಡಿರುವಂತೆ ಖರಿಫ್ ಬೆಳೆಯಲ್ಲಿ ಶೇಕಡಾ 50 ರಷ್ಟು ಬೆಳೆ ಬಂದಿದೆ. ರಾಗಿ ಶೇಕಡಾ 75 ರಷ್ಟು ಬೆಳೆ ನಷ್ಟವಾಗಿದೆ. ಭತ್ತದಲ್ಲಿ ಶೇಕಡಾ 60 ರಷ್ಟು ನಷ್ಟವಾಗಿದೆ. ಈ ನಷ್ಟವನ್ನೆಲ್ಲಾ ನಾವು ಗಣನೆಗೆ ತೆಗೆದುಕೊಂಡರೆ ನಮ್ಮ ರಾಜ್ಯದಲ್ಲಿ ಕನಿಷ್ಟ ಪಕ್ಷ 15-20 ಲಕ್ಷ ಟನ್ನುಗಳಷ್ಟು ಆಹಾರ ಧಾನ್ಯದ ಕೊರತೆ ಇದೆ ಎಂದು ನಾನು ಭಾವಿಸುತ್ತೇನೆ. ಇದರ ಬಗ್ಗೆ ನಮ್ಮ ಆಹಾರ ಮಂತ್ರಿಗಳು ತಮ್ಮ ಉತ್ತರದಲ್ಲಿ ಹೇಳಬಹುದು. ಅವರು ಯಾವ ಅಂಕೆ ಸಂಖ್ಯೆಗಳ ಆಧಾರದ ಮೇಲೆ 9 ಲಕ್ಷ ಟನ್ನುಗಳಷ್ಟು ನಷ್ಟ ಎಂದು ಹೇಳಿದ್ದಾರೆ ಎನ್ನುವುದನ್ನು ತಿಳಿಸಬೇಕೆಂದು ಕೇಳುತ್ತೇನೆ. ಸ್ವಾಮೀ, ನಮ್ಮ ಮಾನ್ಯ ಆಹಾರ ಸಚಿವರು ಮುಂದಿನ ಸೆಪ್ಟೆಂಬರು ತಿಂಗಳಿನಿಂದ ಮನಾಪಲಿ ಪ್ರೊಕ್ಯೂರ್‌ಮೆಂಟು ಮಾಡುತ್ತೇವೆಂದು ಮೇಲ್ಮನೆಯಲ್ಲಿ ತಿಳಿಸಿದ್ದಾರೆ. ಆದರೆ ಸೆಪ್ಟೆಂಬರು ತಿಂಗಳಲ್ಲಿ ಯಾವ ಬೆಳೆ ಬರುತ್ತದೋ ನನಗೆ ಗೊತ್ತಿಲ್ಲ. ಬಹುಶಃ ಮುಂದಿನ ಸುಗ್ಗಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ಅದಕ್ಕಾಗಿ ತಕ್ಕ ಕ್ರಮಗಳನ್ನು ತೆಗೆದುಕೊಳ್ಳಬೇಕೆನ್ನುವ ಅರ್ಥದಲ್ಲಿ ಹೇಳಿರಬಹುದು. ನನ್ನ ತಿದ್ದುಪಡಿಯಲ್ಲಿ ತಂದಿರುವ ನಿರ್ಣಯದಲ್ಲಿ ಹೀಗಿದೆ. ನಾನು ಯಾವಾಗಲೂ ಕನ್ನಡದಲ್ಲೇ ಶಾಸನ ಸಭೆಯ ಕಚೇರಿಗೆ ಬರೆದುಕೊಡುವುದು. ಆದರೆ ಲೆಜಿಸ್ಲೇಚರು ಸೆಕ್ರಟೇರಿಯಟ್ಟಿನಲ್ಲಿ ಕನ್ನಡ ಟೈಪ್‌ರೈಟರು ಇಲ್ಲವೋ ಏನೋ ಕನ್ನಡದಿಂದ ಇಂಗ್ಲಿಷಿಗೆ ತರ್ಜುಮೆ ಮಾಡುವವರು ಸರಿಯಾಗಿ ಮಾಡಿಲ್ಲವೋ ಅದು ನನಗೆ ಗೊತ್ತಾಗುತ್ತಿಲ್ಲ. ನಾನು 'ರಾಷ್ಟ್ರ' ಎಂದು ಬರೆದುಕೊಟ್ಟಿದ್ದೆ.

Mr. SPEAKER.—If the member had stated it before, the chief would have looked into it earlier.

ಶ್ರೀ ಎಸ್. ಗೋಪಾಲ ಗೌಡ.—ರಾಷ್ಟ್ರ ಎಂದು ನಾನು ಬರೆದುಕೊಟ್ಟಂತೆ ನೆನಪಿದೆ. ಆದರೆ ಇದರಲ್ಲಿ ಸ್ಟೇಟ್ ಎಂದಿದೆ. ರಾಷ್ಟ್ರವನ್ನು ಒಂದು ಘಟಕವಾಗಿ ಮಾಡಿಕೊಂಡು ಸರಕಾರ ಇಡೀ ದೇಶದಲ್ಲಿ ಆಹಾರದ ಸಗಟು ವ್ಯಾಪಾರವನ್ನು ಹಾಗೂ ಹಂಚುವ ವ್ಯವಸ್ಥೆಯನ್ನು ಕೈಗೊಳ್ಳಬೇಕೆಂದು ನಾನು ಹೇಳಿರುವುದು. ರಾಜ್ಯ ಸರಕಾರದವರು ಕೇಂದ್ರ ಸರಕಾರದವರು ಹೇಗೆ ಸಲಹೆ ಕೊಡುತ್ತಾರೋ ಅದನ್ನು ನೋಡಿಕೊಂಡು ಸ್ಟಾಚುಟರಿ ರೇಷನಿಂಗ್ ಜಾರಿಯಲ್ಲಿ ತರುತ್ತೇವೆಂದು ಹೇಳಿ ಅದನ್ನು ಜನವರಿ ಒಂದನೇ ತಾರೀಖಿನಿಂದ ತರುತ್ತೇವೆಂದು ಹೇಳುತ್ತಿದ್ದರು. ಅದು ಈಗ ಹೋಗಿ ಬೆಂಗಳೂರು ಹಾಗೂ ಕೆ. ಜಿ. ಎಫ್. ನಲ್ಲಿ ತರುತ್ತೇವೆಂದು ಇತ್ತು, ಅದೂ ಹೋಯಿತು. ಕೆಲವು ನಗರಗಳಲ್ಲಿ informal ರೇಶನಿಂಗ್ ಇದ್ದದ್ದೂ ಕೈಬಿಡುತ್ತೇವೆಂದು ಹೇಳುತ್ತಾರೆ. ಮಾನ್ಯ ಆಹಾರ ಮಂತ್ರಿಗಳು ಒಂದು ಹೇಳಿಕೆಯನ್ನು ಕೊಡುತ್ತಾ, ಧಾನ್ಯಗಳ ಬೆಲೆಯು ಏರುತ್ತಾ ಇವೆ ಎಂದು ಹೇಳಿದರು. ಅದಕ್ಕೆ ಕಾರಣ ಕೂಡಾ ಕೊಡುವುದಕ್ಕೆ ಪ್ರಯತ್ನ ಮಾಡಿದ್ದಾರೆ ಮತ್ತು ಧಾನ್ಯಗಳ ಬೆಲೆ ಎಷ್ಟು ಮಟ್ಟಿಗೆ ಇದೆ ಎಂಬುದನ್ನು ಸರ್ಕಾರದ ಅಂಕಿ ಅಂಶಗಳನ್ನು ತೆಗೆದುಕೊಂಡು ನೋಡಿದರೆ ಗೊತ್ತಾಗುತ್ತದೆ. ಇಲ್ಲಿಯವರೆಗೆ ಎಷ್ಟರಮಟ್ಟಿಗೆ ಇತ್ತು ಮತ್ತು ಯಾವ ಕಾರಣದಿಂದ ಆ ತರಹ ಇದೆ ಎಂಬುದು ನಮಗೆ ಗೊತ್ತಾಗುತ್ತದೆ. ಇಂದು ಹಂಚಿಕೆಯನ್ನು ಸರ್ಕಾರ ತೆಗೆದುಕೊಳ್ಳಬೇಕೆಂದು ನಾನು ಹೇಳುತ್ತೇನೆ. ಆದರೆ ಸರ್ಕಾರಕ್ಕೂ ಈ ಖಾಸಗೀ ವ್ಯಾಪಾರಿಗಳಿಗೂ ಇರತಕ್ಕಂತಹ ಒಂದು ಪವಿತ್ರವಾದ ಮೈತ್ರಿ ಮತ್ತು ಸಂಬಂಧವಿದೆ ಅದು ಸರ್ಕಾರವನ್ನು ಇಂದು ಒಂದು ಹೆಜ್ಜೆ ಹಾಕುವುದಕ್ಕೆ ಬಿಡುತ್ತಾ ಇಲ್ಲ ಎಂದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಹಿಂದೆ ಸರ್ಕಾರದವರು ಹೇಳಿದರು, ನಾವೇ ನಡೆಸತಕ್ಕ ಮಿಲ್ಲುಗಳನ್ನು ಸಂಸ್ಥಾಪನೆ ಮಾಡುತ್ತೇವೆ, ಬ್ರೆಡ್ ಮಾಡತಕ್ಕ ಅಂಗಡಿಗಳನ್ನು ಸ್ಥಾಪನೆ ಮಾಡುತ್ತೇವೆ ಎಂದು. ಇಂತಹ ಅನೇಕ ಎಷ್ಟೋ ಸಾಧ್ಯವಿಲ್ಲದ ಭರವಸೆಗಳನ್ನು ಕೊಟ್ಟುಕೊಂಡು ಬಂದಿದ್ದಾರೆ. ಈ ಸಂದರ್ಭದಲ್ಲಿ ಆಹಾರದ ಕಾರ್ಪೊರೇಶನನ್ನು

(ಶ್ರೀ ಎಸ್. ಗೋಪಾಲಗೌಡ)

ಏನೋ ಒಂದನ್ನು ಸ್ಥಾಪನೆ ಮಾಡಿದ್ದಾರೆ. ಅದರ ಅಧ್ಯಕ್ಷರಾಗಿದ್ದಂಥವರು ಈಚೆಗೆ ರಾಜೀನಾಮೆ ಕೊಟ್ಟ ಮೇಲೆ ಕೆಲವು ಸಲಹೆಗಳನ್ನು ಮಾಡಿದ್ದಾರೆ. ಆ ಸಲಹೆಗಳನ್ನು ಸರ್ಕಾರದವರು ಗಮನಿಸಿದ್ದಾರೆಯೋ ಎಂದರೆ, ಆ ಸಲಹೆಗಳನ್ನು ಕೂಡಾ ಇವತ್ತು ಗಮನಿಸಿಲ್ಲ ಎಂದು ನನ್ನ ಅನುಭವದಿಂದ ಹೇಳಬೇಕಾಗುತ್ತದೆ.

ಸ್ವಾಮಿ, ಈ ಲೆವಿ ಆರ್ಡರ್ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ಸುಮಾರು ಆಗಸ್ಟ್ ತಿಂಗಳಿನಲ್ಲಿ ಮಳೆ ಬೆಳೆ ಚೆನ್ನಾಗಿ ಆಗುತ್ತದೆ ಎನ್ನುವ ಕಾಲದಲ್ಲಿ ನೀರಾವರಿ ಸೌಲಭ್ಯ ಇರುವ ಕಡೆ ಪ್ರತಿಯೊಬ್ಬನೂ ಎಷ್ಟು ಕೊಡಬೇಕು, ಮಳೆ ನೀರಿನ ಸೌಲಭ್ಯ ಇರುವ ಕಡೆ ಎಷ್ಟು ಕೊಡಬೇಕೆಂಬುದು ತೀರ್ಮಾನವಾಗಿತ್ತು. ಸೆಪ್ಟೆಂಬರ್, ಅಕ್ಟೋಬರ್ ತಿಂಗಳಲ್ಲಿ ಮಳೆ ಇಲ್ಲದೆ ಬೆಳೆ ಎಲ್ಲವೂ ಹಾಳಾಯಿತು. ನಮ್ಮ ಜಿಲ್ಲೆಯ ಮಾತು ಹೇಳುವುದಾದರೆ, ಶಿವಮೊಗ್ಗ ಜಿಲ್ಲಾಧಿಕಾರಿಗಳು ಒಂದು ವರದಿಯನ್ನು ಶ್ರೀಮಾನ್ ನಾರಾಯಣ ಗೌಡರು ಅಲ್ಲಿಗೆ ಹೋದಾಗ ಒಪ್ಪಿಸಿದರು. ವರದಿಯಲ್ಲಿ ಸುಮಾರು ಒಂದು ಸಾವಿರ ಎಕರೆ ಜಮೀನು ಮಳೆ ಇಲ್ಲದೆ ಜಮೀನಿನಲ್ಲಿ ಬೆಳೆ ನಾಲ್ಕು ಆಣೆಗೆ ಕಡಮೆಯಾಗಿವೆ. ಬಾಕಿ ಕಡೆ ಬೆಳೆ 8-10 ಆಣೆಯಷ್ಟು ಆಗಬಹುದು ಎಂದು ವರದಿ ಕೊಟ್ಟರು. ಇದರ ಡಿ. ಐ. ಆರ್. ರೂಲ್ಸ್ ಪ್ರಕಾರ, ಲೆವಿ ಮಾಡಿದರೂ ಇವತ್ತು ಶಿವಮೊಗ್ಗ ಜಿಲ್ಲೆಯು 4 ಲಕ್ಷ ಕ್ವಿಂಟಾಲ್ ಭತ್ತವನ್ನು ಕೊಡಬೇಕು. ತೀರ್ಥಹಳ್ಳಿ 40 ಸಾವಿರ ಕೊಡಬೇಕು, ಹೊಸನಗರ 40 ಸಾವಿರ ಕೊಡಬೇಕು ಎಂದು ಇರುವುದರಿಂದ ಆಫೀಸರುಗಳು ಪ್ರತಿಯೊಬ್ಬ ರೈತನ ಮನೆಗೂ ನುಗ್ಗಿ ವಸೂಲು ಮಾಡುವುದಕ್ಕೆ ಹೊರಟಿದ್ದಾರೆ. ಪುನಃ ನಾರಾಯಣ ಗೌಡರು ಹೋದಾಗ ನಾಲ್ಕು ಸಾವಿರದ ಗುರಿಯನ್ನು ಮುಟ್ಟಬೇಕೆಂದು ಹೇಳುತ್ತಾ, ಮಾತೆತ್ತಿದರೆ ಡಿ. ಐ. ಆರ್. ಎಂದು ಹೇಳುತ್ತಾರೆ. ಯಾವ ಗಾಡಿಯನ್ನು ರೈತ ಎಲ್ಲಿ ಸಾಗಿಸಿದರೂ ಹಿಡಿಯುತ್ತಾರೆ. ಇಂತಹ ಕಿರುಕುಳಗಳನ್ನು ಕೊಡುತ್ತಿದ್ದಾರೆ. ಎತ್ತುವಳಿಯನ್ನು ಅವರು ಪರಿಶೀಲನೆ ಮಾಡಿಲ್ಲ. ಬೆಳೆ ಹೋದ ಕಾಲಕ್ಕೆ ಇಂತಿಷ್ಟೇ ಕೊಡಬೇಕೆಂದು ಕಡ್ಡಾಯ ಮಾಡಿದ್ದಾರೆ, ಆದರೆ ಅದನ್ನು ಪುನರ್ವಿಮರ್ಶೆ ಮಾಡಲಿಲ್ಲ. ಪೂರ್ತಿಯಾಗಿ ಬೆಳೆ ಹೋದವರಿಗೆ, ಮೆಕ್ಕೆ ಗದ್ದೆಯಲ್ಲಿ ಬೆಳೆ ಎತ್ತಿದವನಿಗೆ ನಷ್ಟವಾದಾಗ, ಯಾರು ಯಾರು ಎಷ್ಟೆಷ್ಟು ಬತ್ತ ಸರ್ಕಾರಕ್ಕೆ ಕೊಡಬೇಕೆಂದು ಪುನರ್ ವಿಮರ್ಶೆ ಮಾಡಿಲ್ಲ. ಸರ್ಕಾರ ಅದನ್ನು ಗಮನಕ್ಕೆ ತೆಗೆದುಕೊಂಡಿಲ್ಲ.

ಇನ್ನೊಂದು ಮಾತು ಹೇಳುತ್ತೇನೆ. ಹಿಂದೆ 1964ನೇ ಇಸವಿಯಲ್ಲಿ ದರದ ವಿಷಯದಲ್ಲಿ ವಾಲಂಟರಿಯಾಗಿ ಯಾರಾದರೂ ಕೊಟ್ಟರೆ, ನಾವು ಇಂತಿಷ್ಟು ಕೊಡುತ್ತೇವೆ, ಒಂದು ಸಪೋರ್ಟ್ ಪ್ರೈಸ್ ಎಂದು ಮಾಡಿದ್ದರು. ಅದು ಎರಡೂ ದರ ಹೆಚ್ಚು ಕಡಿಮೆ ಇದೆ. ಇವತ್ತು ಮಾರ್ಕೆಟ್ಟಿನಲ್ಲಿ 70-75-80 ರೂಪಾಯಿ ಕ್ವಿಂಟಾಲಿಗೆ ಮಾರಾಟವಾಗುತ್ತಿರುವಾಗ ಸರ್ಕಾರದವರು ಮನಾಪಲಿ ಪ್ರೊಕ್ಯೂರ್‌ಮೆಂಟ್ ಹಾಕಿದಾಗ ರೈತನು ತಾನು ಬೆಳೆದಂತಹ ಭತ್ತವನ್ನು 45 ರೂಪಾಯಿಗೆ ಯಾತಕ್ಕೆ ಕೊಡಬೇಕು ? ಈ ಬತ್ತವನ್ನು ಡಿ. ಐ. ಆರ್. ಮೂಲಕ ವಸೂಲು ಮಾಡುವುದಕ್ಕೆ ಯಾವ ನೈತಿಕ ಹಕ್ಕು ಇದೆ ಎಂದು ನಾನು ಇಲ್ಲಿ ಪ್ರಶ್ನೆ ಮಾಡುತ್ತೇನೆ. ಒಂದು ಕ್ವಿಂಟಾಲ್ ಆದರೂ ಸರ್ಕಾರಕ್ಕೆ ಏತಕ್ಕೆ ಕೊಡಬೇಕು ! ಇನ್ನು ಕೊಂಡು ತಿನ್ನತಕ್ಕಂತಹವರಿಗೆ ಇವರು ಗೊತ್ತು ಮಾಡಿರತಕ್ಕ ದರಕ್ಕೆ ಅಕ್ಕಿಯನ್ನು ಒದಗಿಸುತ್ತಿಲ್ಲ.

ಇನ್ನೊಂದು ವಿಷಯ ಹೇಳಿದರು. ಗ್ರಾಮಾಂತರ ಪ್ರದೇಶಗಳಲ್ಲಿ ಈ ವ್ಯವಸ್ಥೆ ಮಾಡುವ ಅಭಿಪ್ರಾಯವಿಲ್ಲ ಎಂದು ಕಾಣುತ್ತದೆ. ನಮ್ಮಲ್ಲಿ ದೊಡ್ಡವರು ಹೇಳುತ್ತಾರೆ, ನಿಮ್ಮ ಆಹಾರದ ಪದ್ಧತಿಯನ್ನು ಬದಲಾವಣೆ ಮಾಡಿಕೊಳ್ಳಿ ಎಂದು ಇವತ್ತು ರೈತನು ಬತ್ತ, ರಾಗಿ, ಜೋಳ ಇವನ್ನೆಲ್ಲಾ ಬೀಜ ಹಾಕಿ, ಅವನಿಗೆ ಅದು ಕೈಗೆ ಬರದಿದ್ದಾಗ, ಅವನು ಅವನ ಜಾನುವಾರುಗಳನ್ನು ಹಿಡಿದುಕೊಂಡು ನೀರು ಎಲ್ಲಿ ಇದೆ, ತಿನ್ನುವುದಕ್ಕೆ ಗಂಜಿ ಎಲ್ಲಿ ಇದೆ, ಎಂದು ಹುಡುಕುತ್ತಾ ಅಲೆದಾಡುತ್ತಿರುವಾಗ, ಯಥೇಷ್ಟವಾಗಿ ಗೋಧಿ ತಿನ್ನಿ ಎಂದು ಹೇಳಿದರೆ ಹೇಗೆ ? ಇಂತಹ ಒಂದು ಅವಾಸ್ತವಿಕವಾಗಿ ಜನರ ಜೀವನ ಇದೆ. ಈ ಸಮಯದಲ್ಲಿ ಒಂದು ಮಾತು ನೆನಪಿಗೆ ಬರುತ್ತದೆ. ಫ್ರಾನ್ಸಿನ ರಾಣಿ, ಜನ 'ಬ್ರೆಡ್ ಬ್ರೆಡ್' ಎಂದು ಕೂಗುತ್ತಿರುವಾಗ ನೀವು ಕೇಕ್ ತಿನ್ನಿ ಎಂದು ಹೇಳಿದಳಂತೆ. ನಮ್ಮ ರೈತರ ಬೆಳೆ ಎಲ್ಲವೂ ಹೋದಾಗ ಅವರು ಬೇರೆ ಕಡೆಗೆ ಹೋಗಿ ಕೊಂಡು ತಿನ್ನುವ ಬಗೆ ಹೇಗೆ ? ಸರ್ಕಾರದವರು ಇಂತಹ ಮಾತುಗಳನ್ನು ಆಡುವಾಗ ಅದು ನನಗೆ ಬಹಳ ದುಃಖವನ್ನುಂಟು ಮಾಡುತ್ತದೆ.

ಇನ್ನೊಂದು ಮಾತು 'ಗದ್ದಕ್ಕೆ ಬೆಂಕಿ ಹತ್ತಿದಾಗ ಬಾವಿ ತೆಗೆದ' ಗಾದೆಯಂತೆ. ಪ್ರತಿಯೊಂದು ವಿಷಯದಲ್ಲೂ ನಮ್ಮ ಸರ್ಕಾರ ಇದೇ ರೀತಿಯಲ್ಲಿ ಕೆಲಸಮಾಡುತ್ತದೆ. ಬರೀ ಮಳೆ ಬಂದು ಪ್ರವಾಹ

ಶುರುವಾದಾಗ ಸಾಲುವಾರು ರಿಲೀಫ್ ವರ್ಕ್ಸ್ ಆಗಲಿಲ್ಲ. ಪ್ರಾರಂಭಮಾಡುತ್ತಾರೆ. ಅದರ ಸಂಬಂಧವಾಗಿ ಕೊಟ್ಟ ಜಿಂಕ್ ಷೀಟ್ಸ್ ಎಲ್ಲಿ ಹೋಯ್ತು ಎಂಬುದು ಗೊತ್ತಿಲ್ಲ. ಅನಾವೃಷ್ಟಿ ಇದ್ದು ದೊಡ್ಡ ದೊಡ್ಡ ಬಾವಿ ಬೇಕೆಂದು ಗಲಾಟೆ ಮಾಡಿ ಶಿವಮೊಗ್ಗದಲ್ಲಿ 10 ವಿದ್ಯುಚ್ಛಕ್ತಿಯ ಪಂಪ್ ಸೆಟ್ ಮತ್ತು ವಿದ್ಯುಚ್ಛಕ್ತಿ ಕೊಡುವುದಕ್ಕಾಗಿ ವಿದ್ಯುತ್ ಡಿಪಾರ್ಟ್‌ಮೆಂಟನ್ನು ಕೇಳಿದರೆ ನಮ್ಮಲ್ಲಿ ತಂತಿ ಇಲ್ಲ, ಬಂದಮೇಲೆ ಕೊಡುತ್ತೇವೆಂದು ಹೇಳುತ್ತಾರೆ. ವಿದ್ಯುಚ್ಛಕ್ತಿ ಇಲಾಖೆ, ವ್ಯವಸಾಯ ಇಲಾಖೆ, ಆಹಾರದ ಇಲಾಖೆ, ಯಾವುದರಲ್ಲೂ ಒಂದು ಹೊಂದಾಣಿಕೆ ಇಲ್ಲ. ಇಷ್ಟು ವರ್ಷಗಳ ಸರ್ಕಾರದವರ ಯೋಜನೆಗಳ ಫಲವಾಗಿ ಹೈಬ್ರಿಡ್, ಮೆಸ್, ಜೋವರ್ ಯಾವುದನ್ನೂ ಸರ್ಕಾರದವರು ಒದಗಿಸುವ ಸ್ಥಿತಿಯಲ್ಲಿಲ್ಲ. ಕೊಯಂಬತ್ತೂರಿಗೆ ಹೋಗಿ ತೆಗೆದುಕೊಂಡು ಬಂದು ಬಿತ್ತಿರಿ ಎಂದು ಹೇಳುತ್ತಾರೆ. ಹಾಗೆ ತೆಗೆದುಕೊಂಡು ಬಂದು ಬಿತ್ತಿದರೆ, ಅದು ಎಲ್ಲಿಯಾದರೂ ಹಾಳಾಗಿ ಹೋದರೆ, ಅದಕ್ಕೆ ಏನಾದರೂ ಪರಿಹಾರ ಇದೆಯೋ ಎಂದು ಕೇಳಿದರೆ, ಅದು ಪ್ರಯೋಗಕರವಾಗಿ ಮಾಡಿದಂತಾಗುತ್ತದೆ ಎಂದು ಹೇಳುತ್ತಾರೆ. ಇಂತಹ ಒಂದು ಬೇಜವಾಬ್ದಾರಿಯುತ ಯೋಜನೆಯಿಂದ ದೇಶದಲ್ಲಿ ಒಂದು ಚಳುವಳಿಯೇ ನಡೆಯಿತು. ಇದರಿಂದ ಅದು ರೈತನನ್ನು ಕೆರಳಿಸಿತು. ಸ್ವಾಮಿ, ನಮ್ಮ ದೇಶದಲ್ಲಿ ಆಹಾರದ ಕೊರತೆ ಬಹಳ ವರ್ಷಗಳಿಂದಲೂ ಇದೆ. ನಮ್ಮ ರೈತ ಬಡವ, ಅವನಿಗೆ ಜಮೀನು ಇದ್ದರೆ ಜಮೀನಿಗೆ ಬೇಕಾಗತಕ್ಕಂತಹ ನೀರು ಇಲ್ಲ. ಜಮೀನು ನೀರು ಎರಡೂ ಇದ್ದರೆ ಬೀಜ ಇರುವುದಿಲ್ಲ. ಮತ್ತು ಬೇಕಾದಷ್ಟು ಗೊಬ್ಬರ ಇರುವುದಿಲ್ಲ. ಅವನು ಬಹಳ ಬಡವನಾಗಿದ್ದಾನೆ. ಇವತ್ತು ದೇಶದಲ್ಲಿ ಉತ್ಪಾದನೆ ಹೆಚ್ಚಿಸಬೇಕಾದರೆ ಕನಿಷ್ಠ ಪಕ್ಷ ಅವನ ಕೈಗೆ ಒಂದು ಸಾವಿರ ರೂಪಾಯಿಯಾದರೂ ಬರಬೇಕು. ಅದರಿಂದ ಅವನು ಬೆಳೆ ಹೆಚ್ಚಿಸುವುದಕ್ಕೆ ಸಾಧ್ಯವಾಗುತ್ತದೆ. ಇಂಥ ಸಂದರ್ಭದಲ್ಲಿ ಭೂಸುಧಾರಣಾ ಬಗ್ಗೆ ರಾಜ್ಯಪಾಲರು ಭಾಷಣದಲ್ಲಿ ಒಂದು ಮಾತೂ ಇಲ್ಲ. ಅದನ್ನು ನೋಡಿ ನನಗೆ ಬಹಳ ವ್ಯಥೆಯಾಯ್ತು. ಶ್ರೀಮಾನ್ ಕೃಷ್ಣಪ್ಪನವರು ಏನೋ ದೊಡ್ಡ ಉಪಕಾರ ಮಾಡುತ್ತೇವೆಂದು ಹೇಳಿ ಕೊನೆಯ ಕಾಲದಲ್ಲಿ ಮುಜುರೈ ಮತ್ತು ದೇವಸ್ಥಾನಗಳ ಜಮೀನುಗಳನ್ನೆಲ್ಲಾ ಕಾನೂನಿಂದ ಹೊರತುಪಡಿಸಿದರು. ಇವತ್ತು ಆ ವಿಷಯದಲ್ಲಿ ಅವರು ಏನೂ ಹೇಳುತ್ತಾ ಇಲ್ಲ. ಮುಂಬೈ ಪ್ರಾಂತ್ಯದಿಂದ ಯಾವ ಮೊರಾರ್ಜಿ ದೇಸಾಯಿಯವರು ಬಲ ಪಕ್ಷದಲ್ಲಿ ಬಂಡವಾಳಶಾಹಿ ಸ್ನೇಹಿತರು ಎಂದು ದೇಶದಲ್ಲಿ ಪ್ರಚಾರ ನಡೆದಿತ್ತೋ, ಅವರೇ, ಈ ಭೂಸುಧಾರಣೆ ಕಾನೂನನ್ನು ಜಾರಿಗೆ ತಂದಿದ್ದರೂ, ಅಲ್ಲಿ ಭೂಸುಧಾರಣಾ ಕಾನೂನನ್ನು ರೂಢಿಸಿದರೂ, ಈ ಭೂಸುಧಾರಣಾ ಕಾನೂನು ಮುಂಬೈ ಪ್ರಾಂತ್ಯದಲ್ಲಿಯೇ ಜಾರಿಗೆ ತರದೆ ಕಾಂಗ್ರೆಸ್ ಸರ್ಕಾರವಲ್ಲಿ ಉಳಿದಿದೆ. ನಮ್ಮ ರಾಜ್ಯದ ತೀರ್ಥಹಳ್ಳಿ, ಹೊಸನಗರ ಮೊದಲಾದ ಕಡೆಗಳಲ್ಲಿ ನೋಡಿದರೆ, ನೂರಾರು ಜನ ಪ್ರತಿ ದಿವಸವೂ ತಹಸೀಲ್ದಾರರವರ ಕಛೇರಿಯ ಮುಂದೆ ಬಂದು ತಮ್ಮ ಹಳೆಯ ಡಿಸ್ಪ್ಯೂಟ್‌ಗಳಿಗೋಸ್ಕರ ನಿಂತಿರುವುದು ನೋಡಿದರೆ ಗೊತ್ತಾಗುತ್ತದೆ. ಇವತ್ತು ಹೊಸ ಕಾಯಿದೆ ಪ್ರಕಾರ ಎಷ್ಟು ಟ್ರಿಬ್ಯೂನಲ್‌ಗಳನ್ನು ನೇಮಕ ಮಾಡಿದ್ದಾರೆ, ಹೊಸ ಕಾಯಿದೆಯನ್ನು ಜಾರಿಗೆ ತರುವುದಕ್ಕೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದ್ದಾರೆ ಎನ್ನುವುದು ಗೊತ್ತಿಲ್ಲ. ಇದನ್ನು ಜಾರಿಗೆ ತರುವುದರಿಂದ 30 ಕೋಟಿ ರೂಪಾಯಿ ಪರಿಹಾರ ಕೊಡಬೇಕು, ಕೇಂದ್ರದವರು ನಾಲ್ಕು ಕೋಟಿ ರೂಪಾಯಿಗಳನ್ನು ಕೊಟ್ಟರೆ ಈ ವರ್ಷದಿಂದ ಜಾರಿಗೆ ತರುತ್ತೇವೆ ಎನ್ನುವ ಮಾತನ್ನು ಸರ್ಕಾರದವರು ಆಡುತ್ತಾರೆ. ಭೂಸುಧಾರಣೆಯನ್ನು ಜಾರಿಗೆ ತರುವ ವಿಷಯದಲ್ಲಿ ನಂಬಿಕೆ ಇಲ್ಲ ಎನ್ನುವ ಮಾತು ಪತ್ತಿ ಸಮಿತಿ ವರದಿ ಬಂದ ಲಾಗಾಯಿತು ಭೂಸುಧಾರಣೆ ಮಾಡುವ ಕಾರ್ಯ ಎಷ್ಟು ತೀವ್ರಗತಿಯಿಂದ ನಡೆಯುತ್ತಿದೆ ಎನ್ನುವುದರಿಂದಲೇ ಗೊತ್ತಾಗುತ್ತದೆ. ಭೂಮಿಯಲ್ಲಿ ಹೆಚ್ಚು ಉತ್ಪಾದನೆಯಾಗಬೇಕಾದರೆ ಭೂಸುಧಾರಣೆ ತ್ವರಿತವಾಗಿ ಜಾರಿಗೆ ಬರಬೇಕು.

Mr. SPEAKER.—The Hon'ble Member wanted his amendment on the Motion of Thanks and I am just passing it on to him. The member may please read it and tell me what he wants.

4-30 P.M.

ಶ್ರೀ ಎಸ್. ಗೋಪಾಲ ಗೌಡ.—1965ರ ನಂತರ ಹಿಂದಿ, ರಾಷ್ಟ್ರದ ಭಾಷೆಯಾಗಬೇಕು, ರಾಜ್ಯಗಳಲ್ಲಿ ಪ್ರಾಂತೀಯ ಭಾಷೆಯನ್ನು ಉಪಯೋಗಿಸಬೇಕು, ಇಂಗ್ಲಿಷಿನ ಬಳಕೆಯನ್ನು ವ್ಯವಹಾರದಲ್ಲಿ ಕಡಮೆಮಾಡಬೇಕು ಎಂದು ಈ ಸಭೆಯಲ್ಲಿ ಕೂಡ ಒಪ್ಪಿಕೊಂಡಿದ್ದೇವೆ. ಆದರೆ ಈ ಸಭೆಯಲ್ಲಿ ತಮ್ಮ ನೇತೃತ್ವದಲ್ಲಿ ಅದನ್ನು ನಾವು ಜಾರಿಗೆ ತರುವುದಕ್ಕೆ ಆಗಿಲ್ಲ. ಶ್ರೀಮಾನ್ ವೈ. ಮಂಜಯ್ಯ ಶೆಟ್ಟರು ಇಂಗ್ಲೀಷಿನಲ್ಲಿಯೇ ಭಾಷಣವನ್ನು ಬರೆದುಕೊಂಡು ಓದಿದ್ದು ಬಹಳ ಸಂತೋಷದ ವಿಷಯ ಎಂದು ಭಾವಿಸುತ್ತೇನೆ.

Mr. SPEAKER.—Absolutely irrelevant remarks.

ಶ್ರೀ ಎಸ್. ಗೋಪಾಲ ಗೌಡ.—ಇವತ್ತು ಕನ್ನಡವನ್ನು ಜಾರಿಗೆ ತರುವುದರ ಬಗ್ಗೆ ಮೈಸೂರು ಸರ್ಕಾರದವರು ಎಷ್ಟು ಕಳಕಳಿಯಿಂದ ಕೆಲಸ ಮಾಡಿದ್ದಾರೆ ಎನ್ನುವುದನ್ನು ನಾವು ವಿಚಾರ ಮಾಡಿದಾಗ್ಗೆ ಅವರು ಆ ದಿಕ್ಕಿನಲ್ಲಿ ಏನೂ ಕೆಲಸ ಮಾಡುತ್ತಿಲ್ಲ ಎಂದು ಬಹಳ ವಿಷಾದದಿಂದ ಹೇಳಬೇಕಾಗಿದೆ. ಕನ್ನಡ ಟೈಪ್‌ರೈಟರಿನ ಬಗ್ಗೆ ಅದರ ನಿರ್ಮಾಪಕರು ಒಂದು ಕತೆಯನ್ನೇ ನಮಗೆಲ್ಲ ಕಳಿಸಿದ್ದಾರೆ. ಶ್ರೀ ಅನಂತ ಸುಬ್ಬರಾಯರು 30 ವರ್ಷ ಕಾಲ ಕೆಲಸ ಮಾಡಿ ಕನ್ನಡದಲ್ಲಿ ಒಂದು ಟೈಪ್‌ರೈಟರನ್ನು ತಯಾರಿಸಿದಂತೆಯೂ, ಅದನ್ನು ಸರ್ಕಾರದವರು ಆರು ಸಾವಿರ ರೂಪಾಯಿ ಕೊಟ್ಟು ತೆಗೆದುಕೊಂಡಂತೆಯೂ ಅವರು ಬರೆದಿರತಕ್ಕ ಕರುಣಾಜನಕ ಕಥೆಯನ್ನು ತಮ್ಮ ಗಮನಕ್ಕೆ ತರುತ್ತೇನೆ. ಟೈಪ್‌ರೈಟರ್ ವಿಷಯದಲ್ಲಿ ಕೂಡ ಸರ್ಕಾರದವರು ದೊಡ್ಡ ಅನ್ಯಾಯವನ್ನು ಶ್ರೀ ಅನಂತ ಸುಬ್ಬರಾಯರಿಗೆ ಮಾಡಿದ್ದಲ್ಲದೆ ಕನ್ನಡಕ್ಕೂ ದೊಡ್ಡ ಅಪಚಾರವನ್ನು ಎಸಗಿದ್ದಾರೆ. ಇನ್ನು ಶಾಲಾ ಕಾಲೇಜುಗಳಲ್ಲಿ ನೋಡಿದರೆ ನಮಗೆ ದಿಗ್ಭ್ರಾಂತಿಯಾಗುತ್ತಿದೆ. ಬೆಂಗಳೂರಿನಂಥ ನಗರದಲ್ಲಿ ಆಕ್ಸ್‌ಫರ್ಡ್ ಪ್ರಾಥಮಿಕ ಶಾಲೆಗಳು ಎನ್ನುವ ಬೋರ್ಡುಗಳು ಬರುತ್ತಿವೆ. ಪ್ರಾಥಮಿಕ ವಿದ್ಯಾಭ್ಯಾಸ ಕಡ್ಡಾಯವಾಗಿ, ಉಚಿತವಾಗಿ ಬೇಕು, ತನ್ನ ಮಕ್ಕಳ ಮಾತೃ ಭಾಷೆಯಲ್ಲಿಯೇ ಅದು ನಡೆಯಬೇಕು ಎಂದು ಎಲ್ಲ ವಿದ್ಯಾ ಪಂಡಿತರೂ, ಎಲ್ಲ ಪಂಡಿತರೂ ಒಪ್ಪಿರುವಾಗ ನಮ್ಮ ದೇಶದಲ್ಲಿ ಇಂಗ್ಲಿಷ್ ಕಲಿಸತಕ್ಕ ಶಾಲೆಗಳಿಗೆ ನಮ್ಮ ಹುಡುಗರನ್ನು ಕಳಿಸುತ್ತಿದ್ದೇವೆ. ಇದರಿಂದ ನಾವು ಯಾವ ದಿಕ್ಕಿನಲ್ಲಿ ಹೋಗುತ್ತಿದ್ದೇವೆ ಎನ್ನುವುದು ಅರ್ಥವಾಗುತ್ತಿಲ್ಲ. ಪ್ರಾಥಮಿಕ ಶಾಲೆಗಳು ಖಾಸಗಿಯಾಗಿ ನಡೆಯುತ್ತಿವೆ. ಅಲ್ಲಿ ಸಹಸ್ರಾರು ರೂಪಾಯಿ ಕೊಟ್ಟು ಮಕ್ಕಳನ್ನು ಓದಿಸುತ್ತಿದ್ದಾರೆ. ಈ ಒಂದು ಬೇರೆ ವರ್ಗ ಸೃಷ್ಟಿಯಾಗುತ್ತಿದೆ. ಇವತ್ತು ವಿದ್ಯಾಭ್ಯಾಸದ ಶಾಲೆಗಳನ್ನು ನಡೆಸುವ ಅನೇಕ ಕಡೆಗಳಲ್ಲಿ ವ್ಯಾಪಾರ ನಡೆಯುತ್ತಿದೆ. ನೂರು ರೂಪಾಯಿಗಳ ಸಂಬಳ ಕೊಡುತ್ತೇವೆಂದು ರುಜು ಹಾಕಿಸಿಕೊಂಡು 40 ರೂಪಾಯಿ ಮಾತ್ರ ಕೊಡತಕ್ಕ ಸಹಸ್ರಾರು ಖಾಸಗಿ ಸಂಸ್ಥೆಗಳನ್ನು ನಾವು ನೋಡುತ್ತಿದ್ದೇವೆ. ಆದ್ದರಿಂದ ಸರ್ಕಾರದವರು ತಮ್ಮ ಧೋರಣೆಯಲ್ಲಿ ಬದಲಾವಣೆ ಮಾಡಬೇಕು. ಮಾನ್ಯ ಎಸ್. ಆರ್. ಕಂಠಿಯವರು ಯಾವುದಾದರೂ ಹೊಸ ವಿಷಯವನ್ನು ನಮ್ಮ ಮುಂದೆ ತರುತ್ತಾರೆ. ಆದರೆ ಅದನ್ನು ದಕ್ಷತೆ ಮತ್ತು ಪ್ರಾಮಾಣಿಕತೆಯಿಂದ ಕಾರ್ಯಗತ ಮಾಡುವುದಿಲ್ಲ.

ನಮ್ಮ ರಾಜ್ಯದಲ್ಲಿ ಕನ್ನಡ ಮಾಧ್ಯಮವನ್ನು ಕಾಲೇಜುಗಳಲ್ಲಿ ಮತ್ತು ಇತರ ಕಡೆಗಳಲ್ಲಿ ಜಾರಿಗೆ ತರಬೇಕು ಎಂದು ಶ್ರೀ ಕೆ. ವಿ. ಪುಟ್ಟಪ್ಪನವರು ವೈಸ್-ಛಾನ್ಸಲರ್ ಆಗಿದ್ದಾಗ ಪ್ರಯತ್ನ ಮಾಡಿದರು. ಈಗ ಮೈಸೂರು ವಿಶ್ವವಿದ್ಯಾನಿಲಯದ ವೈಸ್-ಛಾನ್ಸಲರ್ ಆಗಿರುವ ಶ್ರೀ ಶ್ರೀಮಾಲಿ ಅವರೂ ಮತ್ತು ಇತ್ತೀಚೆಗೆ ತೀರಿಹೋದ ಲೋಹಿಯಾ ಅವರು ಕೂಡ ಶಿಕ್ಷಣಮಾಧ್ಯಮ ಮಾತೃಭಾಷೆಯೇ ಆಗಬೇಕು ಎನ್ನುವುದನ್ನು ತಾತ್ವಿಕವಾಗಿ ಒಪ್ಪಿದ್ದಾರೆ. ಯಾವ ಕಾರಣದಿಂದಲೋ ಏನೋ ಆ ದಿಸೆಯಲ್ಲಿ ಏನೂ ಪ್ರಗತಿಯಾಗದೆ ಇರತಕ್ಕ ಸನ್ನಿವೇಶವನ್ನು ನಾವು ಸೃಷ್ಟಿ ಮಾಡಿಕೊಳ್ಳುತ್ತಿದ್ದೇವೆ. ಇದನ್ನು ಬಗೆಹರಿಸಬೇಕು. ಕನ್ನಡವನ್ನು ಸಾಧ್ಯವಾದ ಮಟ್ಟಿಗೂ ಎಲ್ಲಕಡೆಗೂ ನಿತ್ಯ ವ್ಯವಹಾರದಲ್ಲಿ ಬಳಸಬೇಕು ಎಂದು ತಮ್ಮಲ್ಲಿ ಕಳಕಳಿಯಿಂದ ಒತ್ತಾಯಪೂರ್ವಕವಾಗಿ ಹೇಳಬಯಸುತ್ತೇನೆ.

ರಾಜ್ಯಪಾಲರ ಭಾಷಣದಲ್ಲಿ ಮುಖ್ಯವಾಗಿ ನಿರೂಪಣೆಯಾಗಬೇಕಾಗಿರತಕ್ಕ ಧೋರಣೆಗಳ ಬಗ್ಗೆ ಯಾವ ಮಾತೂ ಇಲ್ಲದೆ ಇರುವುದು ಬಹಳ ವಿಷಾದಕರ. ಇವತ್ತು ಈ ಭಾಷಣಕ್ಕೆ ನಾನು ಅತ್ಯಂತ ವಿಷಾದದಿಂದ ನನ್ನ ವಿರೋಧವನ್ನು ವ್ಯಕ್ತಪಡಿಸುತ್ತಾ, ಸರ್ಕಾರದವರು ಇವತ್ತು ಏನು ಜವಾಬ್ದಾರಿಯನ್ನು ಹೊತ್ತಿದ್ದಾರೆ ಅದನ್ನು ನಿರ್ವಹಿಸುವುದಕ್ಕೆ ತಮ್ಮ ನೀತಿಗಳನ್ನು ತಿದ್ದಿಕೊಳ್ಳಬೇಕು. ಇಲ್ಲದೆ ಹೋದರೆ ದೇಶದಲ್ಲಿ 1966ನೆ ಇಸವಿಯಲ್ಲಿ ಉಂಟಾಗತಕ್ಕ ಕ್ಷೋಭೆಯನ್ನು ಇವರು ಎದುರಿಸುವುದಕ್ಕೆ ಸಮರ್ಥರಾಗುವುದಿಲ್ಲ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ ಸ್ವಾಮಿ.

† ಶ್ರೀ ಜೆ. ದೇವಯ್ಯ (ಮಂಡ್ಯ).—ಸಭಾಪತಿಗಳೇ, ಸಭಾಪತಿಯವರು ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟದ್ದಕ್ಕೆ ಮೊದಲು ವಂದನೆಗಳನ್ನರ್ಪಿಸುತ್ತೇನೆ. ಸ್ವಾಮಿ, ರಾಜ್ಯಪಾಲರು ಸುಮಾರು 1957ನೆ ಇಸವಿಯಿಂದಲೂ ಕೂಡ ಪ್ರತಿ ವರ್ಷವೂ ನಮ್ಮ ಮುಂದೆ ಭಾಷಣ ಮಾಡುತ್ತಾರೆ. ಅವರ ಭಾಷಣವನ್ನು ವರ್ಷ ವರ್ಷವೂ ಕೇಳುತ್ತಿದ್ದೇವೆ, ಅದರಲ್ಲಿ ಮನ್ನಣೆ ಕೂಡ ಇದೆ. ಆದರೆ ಅವರು ಹೇಳುವುದರಲ್ಲಿ ದೇಶದಲ್ಲಿ ಏನೇನು ಕೆಲಸಗಳಾಗಿವೆ, 19 ಜಿಲ್ಲೆಗಳಲ್ಲಿಯೂ ಒಂದೇ ಸಮನಾಗಿ ಕೆಲಸಗಳು ಆಗುತ್ತಿವೆಯೋ ಎನ್ನುವುದನ್ನು ತಿಳಿದುಕೊಂಡು ಎಷ್ಟು ಮುಂದೆ ಇಂಥ ಕೆಲಸಗಳಾಗಿವೆ, ಮುಂದೆ ಇಂತಿಂಥ ಕೆಲಸಗಳನ್ನು ಮಾಡುವುದಕ್ಕೆ

ಅವಕಾಶವಿದೆ ಎಂದು ತಿಳಿಸಿದ್ದರೆ ನಮ್ಮ ಸಭೆಗೆ ಬಹಳ ಸಂತೋಷವಾಗುತ್ತಿತ್ತು, ನಮ್ಮ ಜನರೂ ಕೂಡ ಬಹಳ ಸಂತೋಷಪಡುತ್ತಿದ್ದರು.

ಸ್ವಾಮಿ, ನಾವು ಪ್ರತಿವರ್ಷವೂ ಕೇಂದ್ರದಿಂದ ಇಷ್ಟಿಷ್ಟು ರೂಪಾಯಿಗಳು ಬರಬೇಕು ಎಂದು ಕಾಯುತ್ತ ಇರುತ್ತೇವೆ. ನಮ್ಮ ಸರ್ಕಾರದವರು ಕೇಂದ್ರದಿಂದ ನಮಗೆ ಇಷ್ಟಿಷ್ಟು ಸಹಾಯ ವಾಗಬೇಕು ಎಂದು ಕೇಳುತ್ತಿದ್ದಾರೆ. ಆದರೆ ಬಹಳ ವರ್ಷಗಳಿಂದಲೂ ನೋಡಿದರೂ ನಮ್ಮ ರಾಜ್ಯಕ್ಕೆ ಕೇಂದ್ರದಲ್ಲಿ ಸರಿಯಾದ ಪ್ರಾತಿನಿಧ್ಯವಿಲ್ಲ. ಪಾರ್ಲಿಮೆಂಟ್ ಮೆಂಬರುಗಳು, ದಕ್ಷತೆ ಇರುವವರು ಅನೇಕ ಜನರಿದ್ದಾರೆ. ಮುಖ್ಯ ಮಂತ್ರಿಗಳಾಗಿ ಕೆಲಸ ಮಾಡಿದವರು, ಮಂತ್ರಿಗಳಾಗಿ ಕೆಲಸ ಮಾಡಿದವರು, ದಕ್ಷರಾದವರು ಪಾರ್ಲಿಮೆಂಟ್ ಸದಸ್ಯರಾಗಿ ಕೇಂದ್ರದಲ್ಲಿದ್ದಾರೆ. ಇಂಥವರಿಗೆ ಕೇಂದ್ರದ ಮಂತ್ರಿ ಮಂಡಲದಲ್ಲಿ ಒಂದು ಸ್ಥಾನ ದೊರೆಯುವುದರಿಂದ ನಮ್ಮ ರಾಜ್ಯಕ್ಕೆ ಯಾವ ಯಾವ ಜಿಲ್ಲೆಗೆ ಏನೇನು ಕೈಗಾರಿಕೆ ಬೇಕು, ಎಲ್ಲಿ ನೀರಾವರಿ ಸೌಕರ್ಯ ಬೇಕು, ಆ ಕೆಲಸಗಳಿಗೆ ಕೇಂದ್ರದಿಂದ ಏನು ಸಹಾಯ ಬೇಕು ಎನ್ನುವುದನ್ನೆಲ್ಲ ನೋಡಿ ಅದು ದೊರೆಯುವಂತೆ ಮಾಡಲು ಅನುಕೂಲವಾಗುತ್ತದೆ. ಮುಖ್ಯ ಮಂತ್ರಿಗಳಾಗಿದ್ದು ಕೇಂದ್ರದ ಪಾರ್ಲಿಮೆಂಟಿನಲ್ಲಿರುವವರನ್ನು ಮೈಸೂರು ರಾಜ್ಯದ ಪ್ರತಿನಿಧಿಯಾಗಿ ಕೇಂದ್ರದ ಮಂಡಲದಲ್ಲಿ ತೆಗೆದುಕೊಳ್ಳುವಂತೆ ನಮ್ಮ ಸರ್ಕಾರದವರು ಕೇಂದ್ರಕ್ಕೆ ಶಿಫಾರಸು ಮಾಡಿ ನಮ್ಮ ಕೆಲಸಕಾರ್ಯಗಳಿಗೆ ಬೇಕಾದ ಸಹಾಯ ದೊರೆಯುವಂತೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಸ್ವಾಮಿ, ವ್ಯವಸಾಯದ ವಿಷಯದಲ್ಲಿ ಒಂದೆರಡು ಮಾತನ್ನು ಹೇಳುತ್ತೇನೆ. ನಮ್ಮ ಮಂಡ್ಯ ಜಿಲ್ಲೆಯಲ್ಲಿ ವ್ಯವಸಾಯದ ಇಲಾಖೆ ಚೆನ್ನಾಗಿ ಕೆಲಸ ಮಾಡಿದೆ ಎಂದು ಹೇಳಬಹುದು. ನಾವು ಮಾಡಿರುವ ಕೆಲಸವನ್ನೂ ಮಾಡದಿರುವುದನ್ನೂ ಹೇಳಬೇಕು. ಅಲ್ಲಿ ಪ್ಯಾಕೇಜ್ ಸ್ಕೀಮಿನಿಂದ ರೈತರಿಗೆ ಸ್ವಲ್ಪ ಸಹಾಯವಾಗಿದೆ. ಜಪಾನಿನವರು ಬಂದು ವಿ.ಸಿ. ಫಾರಂನಲ್ಲಿ ಅನೇಕವಾಗಿ ಕೆಲಸ ಕಾರ್ಯ ಹೇಗೆ ಮಾಡಬೇಕೆಂಬುದನ್ನು ತೋರಿಸಿದ್ದಾರೆ; ಉಪಯೋಗಿಸಬೇಕಾದ ಕಬ್ಬಿಣದ ಸಾಮಾನು ಮುಂತಾದುವನ್ನು ತಿಳಿಸಿದ್ದಾರೆ, ಅವರು ತಮ್ಮ ಸ್ವಂತ ಖರ್ಚಿನಲ್ಲಿ ಒಂದು ಇದರಲ್ಲಿ ಸಹಾಯ ಮಾಡುತ್ತಿದ್ದಾರೆ. ಕರಲು ಜಮೀನಿನಲ್ಲಿ ಬತ್ತವನ್ನು ಬಹಳ ಚೆನ್ನಾಗಿ ಬೆಳೆದು, 30-35 ಪಲ್ಲ ಬೆಳೆದು ನಮಗೆ ಮಾರ್ಗದರ್ಶನ ಮಾಡಿದ್ದಾರೆ. ಸರಕಾರದವರೂ ಕೂಡ ವಿ.ಸಿ. ಫಾರಂನಲ್ಲಿ ಮಾತ್ರವಲ್ಲದೆ ಇತರ ಅನೇಕ ಕಡೆಗಳಲ್ಲಿ ಜಮೀನಿನಲ್ಲಿ ವ್ಯವಸಾಯಕ್ಕೆ ಖರ್ಚುಮಾಡುವುದನ್ನು ಲೆಕ್ಕ ಹಾಕಿ ವ್ಯವಸಾಯಕ್ಕೆ ಬೇಕಾಗುವ ಸಾಮಾನುಗಳನ್ನು ರೈತರಿಗೆ ಒದಗಿಸಿದರೆ ವ್ಯವಸಾಯ ಚೆನ್ನಾಗಿ ಅಭಿವೃದ್ಧಿಯಾಗಬಹುದು ಎಂದು ಸಲಹೆ ಮಾಡುತ್ತೇನೆ.

ಈ ವರ್ಷ ಅನೇಕ ಕಡೆ ಮಳೆಯಾಗಿಲ್ಲ. ಶ್ರೀಮಾನ್ ದೇವರಾಜ ಅರಸಿನವರು ಮಂಡ್ಯ ಜಿಲ್ಲೆಯಲ್ಲಿ ಪ್ರವಾಸ ಮಾಡಿ 15 ದಿವಸಗಳಲ್ಲಿ ಕೆರೆಕಟ್ಟೆ ಕಾಂಗಾರಿಗಳನ್ನು ತೆಗೆದ ಕೊಳ್ಳುವುದಾಗಿ ಸುಮಾರು ಎರಡು-ಮೂರು ತಿಂಗಳ ಕೆಳಗೆ ಹೇಳಿದ್ದರು. ಅದನ್ನು ಇನ್ನೂ ತೆಗೆದುಕೊಂಡಿಲ್ಲ. ಶ್ರೀಯುತರುಗಳಾದ ವೀರೇಂದ್ರ ಪಾಟೀಲರು ಮತ್ತು ರಾಮಕೃಷ್ಣ ಹೆಗಡೆಯವರು ಕೂಡ ಮಂಡ್ಯಕ್ಕೆ ಬಂದು ಕೆಲವು ಕೆಲಸಕಾರ್ಯಗಳನ್ನು ಕೈಗೊಳ್ಳುವುದಾಗಿ ತಿಳಿಸಿದರು. ಜನರು ಹೊಟ್ಟೆಗಿಲ್ಲದೆ ಇರುವಾಗ ಕೆಲಸ ತೆಗೆದುಕೊಳ್ಳಲಿಲ್ಲ, ಮುಂಗಾರು ಮಳೆ ಬೀಳುವ ಸಮಯ ಬಂತು. ಮುಂಗಾರು ಮಳೆ ಬಂದರೆ ಜನರಿಗೆ ಅನುಕೂಲವಾಗುತ್ತದೆಂಬ ಭಾವನೆಯಿಂದಲೋ ಏನೋ ಕೆರೆ ಕೆಲಸ ತೆಗೆದು ಕೊಂಡಿರುವುದಿಲ್ಲ. ರಿಲೀಫ್ ಫಂಡು ಎಂದು ಕೊಡುತ್ತಾರೆ, ನೀರು ನಿಲ್ಲದಿರುವ ಕಡೆ ಎರಡು-ಮೂರು ಸಾವಿರ ಖರ್ಚುಮಾಡುತ್ತಾರೆ. ಅವಶ್ಯಕವಿರುವಾಗ ಬೇಕಾದ ಕೆಲಸ ಕೈಕೊಂಡು ಜನರಿಗೆ ಜೀವನಕ್ಕೆ ಮಾರ್ಗ ಕಲ್ಪಿಸಿ ಕೊಡಬೇಕಾದ್ದು ಅಗತ್ಯ ಇದನ್ನು ಯೋಚನೆ ಮಾಡಬೇಕು.

ವಿರೋಧ ಪಕ್ಷದ ನಾಯಕರು ಹುಲ್ಲನ್ನು ಸರಬರಾಯಿ ಮಾಡಬೇಕೆಂದು ಹೇಳಿದರು. ಕೆಲವು ಕಡೆ ಗಂಜಿ ಕೇಂದ್ರ ಆರಂಭಿಸಬೇಕೆಂದು ಸಲಹೆಮಾಡಿದರು. ಹುಲ್ಲು ಸರಬರಾಯಿ ಮಾಡಬೇಕೆಂದು ಯಾರಾದರೂ ಯೋಚಿಸಿ ಹಳ್ಳಿಗಳಿಗೆ ಅದನ್ನು ಒದಗಿಸಿರುವರೇ ಎಂಬುದನ್ನು ಗಮನಿಸಬೇಕು. ಅಧ್ಯಕ್ಷರು ಕೂಡ ಪ್ರವಾಸಮಾಡಿ ನಾವು ಹೇಳುವುದು ನಿಜವೆ, ಅಲ್ಲವೇ ಎಂಬುದನ್ನು ಮನಗಾಣಬೇಕು. ಹಾಗೆ ಮಾಡಿದರೆ ನಾವು ಹೇಳುವುದಕ್ಕೆ ಅವರ ಬೆಂಬಲ ದೊರೆತು ಜನತೆಗೆ ಅನುಕೂಲವಾಗುತ್ತದೆ, ಅವರು ಬದುಕಿಕೊಳ್ಳುತ್ತಾರೆ.

ಆಹಾರ ಮಂತ್ರಿಗಳಿಗೆ ಸಂಬಂಧಪಟ್ಟ ಕೆಲವು ವಿಚಾರ ಹೇಳುತ್ತೇನೆ. ಅವರು ಬಹಳ ಚಟು ವಟಿಕೆಯುಳ್ಳವರು, ಏನಾದರೂ ಹೇಳಿದರೆ ತಕ್ಷಣ ಜವಾಬು ಕೊಟ್ಟುಬಿಡುತ್ತಾರೆ. ಅದಕ್ಕೆ ನಾವೇನೂ ಹೇಳುವುದಕ್ಕಾಗುವುದಿಲ್ಲ. ಸೊಸೈಟಿಗಳ ಮುಖಾಂತರ ಹಳ್ಳಿಗಾಡುಗಳಿಗೆ ಅಕ್ಕಿ ಸರಬರಾಯಿ ಮಾಡುವುದಾಗಿ ಹೇಳುತ್ತಾರೆ. ಆದರೆ ಸೊಸೈಟಿಗೆ ಎರಡು ಮೂಟೆ ಕೊಟ್ಟರೆ ಅದರಿಂದ ಜನರಿಗೆ

(ಶ್ರೀ ಜಿ. ದೇವಯ್ಯ)

ಸಹಾಯವಾಗುತ್ತದೆ ಎಂಬುದನ್ನು ಯೋಚನೆಮಾಡಬೇಕು. ಹಳ್ಳಿಗಳಲ್ಲಿ ಬಹಳ ಜನರು ಹೊಟ್ಟೆಗಿಲ್ಲದೆ ಸಾಯುತ್ತಿದ್ದಾರೆ. ಅವರು ಭದ್ರಾವತಿ ಮುಂತಾದ ಕಡೆಗಳಿಗೆ ಹೋಗುತ್ತಿದ್ದಾರೆ. ಮಂಡ್ಯ ಜಿಲ್ಲಾ ನಾಗಮಂಗಲ ಮತ್ತು ಬಸರಾಳು ಹೋಬಳಿಯವರು ಎಷ್ಟೋ ಜನರು ಭದ್ರಾವತಿಗೆ ಹೋಗಿದ್ದಾರೆ. ಒಂದೊಂದು ಊರಿನಲ್ಲಿ ಗಂಡಸರೇ ಇಲ್ಲ, ಹೆಂಗಸರು ಮಾತ್ರ ಇದ್ದಾರೆ, ಕೆಲವು ಮನೆಗಳಿಗೆ ಬೀಗ ಹಾಕಿದೆ, ಕೂಲಿಗಾಗಿ ಕೆಲಸಕ್ಕಾಗಿ ಬೇರೆ ಬೇರೆ ಊರುಗಳಿಗೆ ಜನರು ಹೋಗುತ್ತಿದ್ದಾರೆ. ಇನ್ನೊಂದು ವಿಚಾರವೇನೆಂದರೆ, ಕೆಲವು ದಿನಗಳಿಂದ ಕೆಲವು ರೈಸ್‌ಮಿಲ್ಲುಗಳನ್ನು ಮುಚ್ಚಿದ್ದಾರೆ, ಇದರಿಂದ ಅವನ್ನು ನೆಚ್ಚಿಕೊಂಡು ಜೀವನ ಮಾಡುತ್ತಿದ್ದವರಿಗೆ ತೊಂದರೆಯಾಗಿದೆ. ಸೊಸೈಟಿಗಳವರು ಕೆಲವು ಮಿಲ್ಲುಗಳಿಗೆ ಮಾತ್ರ ಧಾನ್ಯ ಒದಗಿಸಿ ಉಳಿದವುಗಳಿಗೆ ಒದಗಿಸದಿರುವುದರಿಂದ ಅವುಗಳಿಗೆ ಕೆಲಸವಿಲ್ಲದಂತಾಗಿವೆ. ಈಗ ಲೆವಿ ಪದ್ಧತಿ ಜಾರಿಗೆ ತಂದಿದ್ದೀರಿ, ಸೊಸೈಟಿಗಳಿಗೆ ಬೆಳೆದ ಧಾನ್ಯ ಕೊಡಬೇಕೆಂದು ಗೊತ್ತುಮಾಡಿದ್ದೀರಿ, ರೈತರು ಹೊತ್ತುಕೊಂಡುಹೋಗಿ ಕೊಡುತ್ತಾರೆ. ಅವರು ಒಂದು ಕ್ವಿಂಟಾಲಿಗೆ ಅರ್ಧ ಕೆ. ಜಿ. ವಜಾಮಾಡುತ್ತಾರೆ. ಬಾಡಿಗೆ ಸರಕಾರ ವಹಿಸಬೇಕೆಂದು ಅಜ್ಞೆ ಮಾಡಿದ್ದೀರಿ. ಚಾವಡಿಗೆ ಬತ್ತ ತಂದು ಹಾಕಬೇಕು, ಅಲ್ಲಿಂದ ಸೊಸೈಟಿಗೆ ತೆಗೆದುಕೊಂಡು ಹೋಗಬೇಕು ಎಂದು ಜಿಲ್ಲಾಧಿಕಾರಿಗಳು ಗೊತ್ತುಮಾಡಿದ್ದಾರೆ. ಆದರೆ ವಾಸ್ತವವಾಗಿ ಹಾಗೆ ನಡೆಯುತ್ತಿಲ್ಲ, ಸೊಸೈಟಿಗಳಿಗೆ ರೈತರು ತೆಗೆದುಕೊಂಡುಹೋಗಿ ಕೊಡುತ್ತಿದ್ದಾರೆ. ತೆಗೆದುಕೊಂಡು ಹೋಗಿ ಕೊಡಲು ಬಾಡಿಗೆ ಕೊಡುವವರು ಯಾರು ? ರೈತರು ತೆಗೆದುಕೊಂಡುಹೋದರೆ ಅವರಿಗೆ ಬಾಡಿಗೆ ವಾಪಸು ಬರುತ್ತದೆಯೇ ? ಇದನ್ನು ಮಾನ್ಯ ಆಹಾರ ಮಂತ್ರಿಗಳು ಗುರುತುಹಾಕಿಕೊಂಡು ರೈತರಿಗೆ ಈ ಬಾಡಿಗೆ ಸಲ್ಲುವಂತೆ ಏರ್ಪಾಡು ಮಾಡಬೇಕು.

ಶ್ರೀ ಬಿ. ಡಿ. ಜತ್ತಿ.—ಸೊಸೈಟಿಯವರು ಒಪ್ಪಂದ ಮಾಡಿಕೊಂಡಿರುವ ಪ್ರಕಾರ ರೈತರು ತೆಗೆದುಕೊಂಡುಹೋಗಿ ಕೊಡುತ್ತಾರೆ, ಸೊಸೈಟಿ ಎಲ್ಲಾ ಖರ್ಚನ್ನೂ ವಹಿಸಿಕೊಳ್ಳಬೇಕು.

ಶ್ರೀ ಜಿ. ದೇವಯ್ಯ.—ಆದರೆ ವಹಿಸಿಕೊಳ್ಳುತ್ತಿಲ್ಲ. ರೈತರು ಸೊಸೈಟಿಗೆ ತೆಗೆದುಕೊಂಡು ಹೋಗಿ ಕೊಡುವುದಕ್ಕೆ ಅವರಿಗೆ ಬಾಡಿಗೆ ಕೊಡಿಸಬೇಕೆಂದು ರೈತರ ಪರವಾಗಿ ಹೇಳುತ್ತೇನೆ, ಅಸೂಯೆಯಿಂದ ಹೇಳುತ್ತಿಲ್ಲ. ಸರಕಾರಿ ಆಜ್ಞೆ ಪ್ರಕಾರ ಸೊಸೈಟಿಗೆ ಕೊಟ್ಟವರ ರೈತರಿಗೆ ಬಾಡಿಗೆ ಕೊಡುವಂತೆ ಜಿಲ್ಲಾಧಿಕಾರಿಗಳು ವ್ಯವಸ್ಥೆಮಾಡಬೇಕು. ಅಲ್ಲದೆ ಅರ್ಧ ಕೆ. ಜಿ. ಸೋಡಿ ಹಿಡಿಯದಂತೆ ತಿಳಿಸಬೇಕು.

ಬರಗಾಲವಿರುವುದರಿಂದ ಕಾರು ರಾಗಿ ಬೆಳೆಯಬೇಕೆಂದು ಕೆರೆಗಳಲ್ಲಿ ಅವಕಾಶಮಾಡಿದರು. ಮಂಡ್ಯ ಟೌನಿನ ಕೆರೆಯಲ್ಲಿ 400 ಗುಡಿಸಲುಗಳಿದ್ದುವು, ಅವನ್ನು ತೆಗೆದುಹಾಕಬೇಕೆಂದು ಹೇಳಿದರು. ಆದರೆ ಆ ಷೆಡ್ಡುಗಳನ್ನು ಕಿತ್ತುಹಾಕಲು ಹಿಂತೆಗೆಯುವುದಿಲ್ಲ, ಸಿದ್ಧವಾಗಿದ್ದಾರೆ ಒಂದು ವಾರ ಕಾಲಾವಕಾಶ ಕೊಡಿ ಎಂದು ಜಿಲ್ಲಾಧಿಕಾರಿಗಳಿಗೂ ಮತ್ತು ರೆವಿನ್ಯೂಮಂತ್ರಿಗಳಿಗೂ ಹೇಳಿದೆ. ಅದಕ್ಕೆ ಗಮನ ಕೊಡದೆ ನೀರನ್ನು ಬಿಟ್ಟು ಷೆಡ್ಡುಗಳಿಗೆಲ್ಲಾ ನೀರು ತುಂಬುವಂತೆ ಮಾಡಿದರು. ಸ್ವಲ್ಪ ಅವಕಾಶ ಕೊಟ್ಟಿದ್ದರೆ ಷೆಡ್ಡಿನಲ್ಲಿದ್ದ ಜನ ಬದುಕಿಕೊಳ್ಳುತ್ತಿದ್ದರು. ಎಗ್ಜಿಕ್ಯುಟಿವ್ ಇಂಜಿನಿಯರಿಗೂ ಹೇಳಿದ್ದಾಯಿತು, ಕೇಳಲಿಲ್ಲ. ಕಂಟ್ರಾಕ್ಟರು, ಇಂಜಿನಿಯರು, ಸೆಕ್ಷನ್ ಆಫೀಸರು ಒಬ್ಬರಿಗೊಬ್ಬರಿಗೂ ಸಂಬಂಧವಿದೆ ; ಎಲ್ಲಾ ಸೇರಿ ಆ ಗುಡಿಸಲುಗಳಲ್ಲಿದ್ದವರಿಗೆ ತೊಂದರೆ ಮಾಡಿದರು. ಬೇರೆ ಸರ್ವೆ ನಂಬರಿನಲ್ಲಿ ಜಾಗ ಕೊಡಿ ಎಂದು ಜಿಲ್ಲಾಧಿಕಾರಿಗಳಿಗೆ ಹೇಳಿದ್ದಾಯಿತು. ಯಾರೂ ಗಮನ ಕೊಡದೆ ತೊಂದರೆಯಾಯಿತು, ನೋಡಿದರೆ ಬಹಳ ದುಃಖವಾಗುತ್ತದೆ, ಗುಡಿಸಿಲಿನಲ್ಲಿದ್ದವರು ಬಹಳ ಕಷ್ಟ ಅನುಭವಿಸಬೇಕಾಯಿತು, ಅಲ್ಲಿದ್ದವರು ಬಹಳ ಬಡವರು. ಆ ಕೆರೆಗೆ ನೀರು ತುಂಬಿಸಿದರು. ಇನ್ನೂ ಆ ಕೆರೆಯಲ್ಲಿ ಷೆಡ್ಸ್ ಹಾಗೆಯೇ ಇವೆ. ತಾವು ರಾಜ್ಯಪಾಲರು ಆಗುತ್ತೀರಿ ಎಂದು ವರ್ತಮಾನವಿದೆ. ತಮಗೆ ದೇವರು ಒಳ್ಳೆಯ ಸ್ಥಾನ ಕೊಡಲಿ. ತಾವು ನಮ್ಮಲ್ಲಿಗೆ ಬಂದು ಷೆಡ್ಡುಗಳನ್ನು ನೋಡಿದರೆ ನಾನು ಧನ್ಯನಾಗುತ್ತೇನೆ ಎಂದು, ಈ ಸಮಯದಲ್ಲಿ ಪ್ರಾರ್ಥನೆ ಮಾಡಿಕೊಂಡು ತಾವು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸುತ್ತೇನೆ.

†ಶ್ರೀ ಜಿ. ಮರುಳಪ್ಪ (ಕಡೂರು).—ಮಾನ್ಯ ಅಧ್ಯಕ್ಷರೇ, ನಾನು ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಬಾರದು ಎಂದು ಇದ್ದೆ, ಆದರೆ ಅನಿರೀಕ್ಷಿತವಾಗಿ ಮಾತನಾಡಬೇಕು ಎಂದು ಮನಸ್ಸು ಬಂಧು ಹಾಗೆ ಪರಿವರ್ತನೆ ಮಾಡಿಕೊಂಡೆ. ತಾವು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮ್ಮನ್ನು ವಂದಿಸುತ್ತೇನೆ. ಡಿಫೆನ್ಸ್ ಆಫ್ ಇಂಡಿಯಾ ರೂಲ್ಸ್ ಎನ್ನತಕ್ಕ ಆಯುಧವನ್ನು ಕೈಯಲ್ಲಿ ಹಿಡಿದುಕೊಂಡು ರಾಜ್ಯಭಾರ ಮಾಡುತ್ತಿರುವ ಮಂತ್ರಿಗಳ ಬಗ್ಗೆ ಮಾತನಾಡಬೇಕು ಎಂದು ಇದ್ದೇನೆ. ನನ್ನ ಸ್ನೇಹಿತರಾದ ಗೋಪಾಲ ಗೌಡರು ಹೇಳಿದರು ಮಂತ್ರಿಮಂಡಲವನ್ನು

ದೇವರೇ ಕಾಪಾಡಬೇಕು ಎಂದು. ಅವರು ಒಂದು ವಿಷಯ ಬಿಟ್ಟರು. ಈಗ ದೇವರು ಇಲ್ಲ. ದೇವರು ರಿಟೈರ್ ಆಗುವುದರಲ್ಲಿ ಇದ್ದಾರೆ ಎಂದು ಖಚಿತವಾದ ವರ್ತಮಾನ ಬಂದಿದೆ. ಅದು ನನಗೆ ಹೇಗೆ ತಿಳಿಯಿತು ಎಂದರೆ, ನನಗೆ ಪ್ರಮುಖವಾದ ಕಾಂಗ್ರೆಸ್ಸಿನವರು ಒಬ್ಬರು ಹೇಳಿದರು. ನ್ಯಾಯ, ಧರ್ಮ, ಸತ್ಯ ಇದ್ದರೆ ದೇವರು ಜಗತ್ತಿನಲ್ಲಿ ಇರುತ್ತಾರೆ. ಅನ್ಯಾಯ, ದರೋಡೆ; ಲೂಟಿ ಎಲ್ಲಾ ಹಗಲು ಹೊತ್ತಿನಲ್ಲಿ ನೋಡುತ್ತಿದ್ದೇವೆ. ಈ ಪರಿಸ್ಥಿತಿ ಬಂದುದರಿಂದ ದೇವರು ರಿಟೈರ್ ಆಗಿ ಅವರ ಛಾರ್ಜು ಇವರೇ ತೆಗೆದುಕೊಂಡುಬಿಟ್ಟಿದ್ದಾರೆ. ಸ್ವಾಮಿ, ಒಂದು ವಿಷಯ ಈಗ ಕೆಲವು ದಿವಸದ ಹಿಂದೆ ಪತ್ರಿಕೆಯಲ್ಲಿ ಓದಿದೆವು. ನಮ್ಮ ಮುಖ್ಯ ಮಂತ್ರಿಗಳು ದೆಹಲಿಯ ಯಾತ್ರೆಯನ್ನು ಮುಗಿಸಿ ಕೊಂಡು ಇಲ್ಲಿಗೆ ಬಂದರು. ಆಗ ಕೇಂದ್ರದಲ್ಲಿ ನಮ್ಮ ದೇಶದ ಪ್ರಾತಿನಿಧ್ಯದ ವಿಚಾರ ಪತ್ರಿಕೆ ಯವರೊಬ್ಬರು ಕೇಳಿದಾಗ "Don't worry, proper steps will be taken" ಎಂದು ಹೇಳಿದರು.

Mr. SPEAKER.—Which part of the Address the Hon'ble Member is referring to ! He is now speaking about the representation of the State in the Central Cabinet.

Sri G. MARULAPPA.—As a Member of this House, as a representative of this country, it is my duty to state that proper representation is not there.

Mr. SPEAKER.—I do not want to cut out the time that is given to the Hon'ble Member. But let him be relevant to the point.

ಶ್ರೀ ಜಿ. ಮರುಳಪ್ಪ.—ಈ ಸಂದರ್ಭದಲ್ಲಿ ನಮ್ಮ ದೇಶದ ರೆಪ್ರೆಸೆಂಟೇಷನ್ ಸರಿಯಾಗಿ ಇಲ್ಲ ಎಂದು ಹೇಳುವುದು ಇರ್ರೆಲವೆಂಟ್ ಎಂದು ಅಪ್ಪಣೆ ಕೊಡಿಸುತ್ತೀರಾ? ಮುಖ್ಯ ಮಂತ್ರಿಗಳು ಬಂದ ತಕ್ಷಣ ಹೇಳಿದರು, ಎ ಕಪಲ್ ಆಫ್ ಮಿನಿಸ್ಟರ್ಸ್ ನೇಮಕ ಆಗುತ್ತಾರೆಂದು. ನಾನು ನೋಡಿದ್ದೆ, ನೋಡಿದೆ, ಏನೂ ಮಾಡಲಿಲ್ಲ ದೇಶಕ್ಕೆ ಯಾತಕ್ಕೆ ಕ್ಷಾಮ, ಕಷ್ಟ ಬಂದಿದೆ ಎಂದು ಹೇಳಿದರೆ ಹಿಂದೆ ಒಂದು ಪದ್ಧತಿ ಇತ್ತು; ರಾಜರು ಅಥವಾ ರಾಜರ ಪರವಾಗಿ ಆಗಲಿ ಬೇರೆ ಯಾರಾದರೂ ರಾಜ್ಯಭಾರ ನಡೆಸತಕ್ಕವರು ಸಣ್ಣ ಅಧಿಕಾರಿಗಳಾಗಿರಲಿ, ದೊಡ್ಡ ಅಧಿಕಾರಿಗಳಾಗಿರಲಿ, ಮಂತ್ರಿಮಂಡಲಕ್ಕೆ ಸೇರಿದವರಾಗಿರಲಿ ಯಾರೇ ಆಗಲಿ, ಅವರು ಎಲ್ಲಿ ಮಾತನಾಡಿದರೂ ಅದು ಸುಳ್ಳು ಆಗದಂತೆ ಎಚ್ಚರಿಕೆ ವಹಿಸುತ್ತಿದ್ದರು. ಅವರ ಸ್ಥಾನಮಾನ ಅಂತಹ ಗೌರವಯುತವಾದುದು ಮತ್ತು ಬಲಯುತ ವಾದುದು. ಆದುದರಿಂದ ದೊಡ್ಡ ಜವಾಬ್ದಾರಿ ಸ್ಥಾನದಲ್ಲಿರತಕ್ಕಂಥವರು ಆ ರೀತಿ ಮಾತನ್ನು ಆಡುತ್ತಿದ್ದರು. ಅದು ತಪ್ಪಿದಲ್ಲಿ ಆ ಜವಾಬ್ದಾರಿ ಸ್ಥಾನದಲ್ಲಿ ಕುಳಿತುಕೊಳ್ಳಬಾರದು. ಈಗ ನಮ್ಮ ದೇಶದಲ್ಲಿ ಏನಾಗಿ ಬಿಟ್ಟಿದೆ ಎಂದರೆ ಸತ್ಯದ ಕಾಲ ಹೋಯಿತು. ಅಸತ್ಯದ ಕಾಲದಲ್ಲಿ ಈ ಹೊತ್ತು ಇದ್ದೇವೆ. ಅಸತ್ಯದ ಕಾಲದಲ್ಲಿ ನೀರು ಹರಿದು ಹೋದಂತೆ, ಅವರು ಎಷ್ಟೋ ಸ್ಟೇಟ್‌ಮೆಂಟ್ ಎಷ್ಟೋ ಪ್ರಚಾರ ಎಷ್ಟೋ ಭಾಷಣಗಳನ್ನು ಮಾಡಿದ್ದಾರೆ. ಅವರು ಹೇಳಿದ್ದರಲ್ಲಿ ಎಷ್ಟು ನಿರ್ವಹಿಸಿದ್ದಾರೆ, ಎಷ್ಟು ಆಚರಣೆಗೆ ತಂದಿದ್ದಾರೆ ಎಷ್ಟು ಕಾರ್ಯಗತ ಮಾಡಿದ್ದಾರೆ ಎಂಬುದನ್ನು ಅವರೇ ಯೋಚಿಸಿ ನೋಡಿಕೊಳ್ಳಬೇಕು. ಸುಮ್ಮನೆ ಜನಗಳ ಎದುರಿಗೆ ಮಾಡಲು ಭಾಷಣ ಮಾಡಿದಂತೆ ಜವಾಬ್ದಾರಿ ಸ್ಥಾನದಲ್ಲಿರುವಾಗಲೂ ಹೇಗೆ ಮಾತನಾಡಬೇಕು ಎಂದು ಯೋಚಿಸದೆ ಮನಸ್ಸಿಗೆ ಬಂದಂತೆ ಮಾತ ನಾಡಿದರೆ ಯಾವುದೂ ಕಾರ್ಯಗತವಾಗುವುದಿಲ್ಲ. ಮಂತ್ರಿಗಳು ಮಾತನಾಡುತ್ತಾ ಇದ್ದರೆ, ಜನ ಹೇಳುತ್ತಾರೆ, ಇವರು ಸುಳ್ಳು ಹೇಳಿ ಹೋಗುತ್ತಾರೆ, ಅಸತ್ಯ ಹೇಳಿ ಹೋಗು ತ್ತಾರೆ, ಎಷ್ಟೋ ಸಲ ಬಂದು ಹೇಳಿ ಹೋದರು, ಅದನ್ನು ಕೇಳಿ ಏನು ಪ್ರಯೋಜನ ಎಂದು. ನೀವು ದೊಡ್ಡ ಭಾಷಣವನ್ನು ಮಾಡಿ, ನೂರಾರು ಪ್ರಾಮಿಸಸ್ ಮಾಡಿ ಒಂದೂ ಕಾರ್ಯಗತ ಮಾಡದೇ ಇರತಕ್ಕ ಅಶಕ್ತರಾಗುವ ಬದಲು ಒಂದು ಎರಡೇ ವಿಷಯ ಮಾತನಾಡಿ ಹೇಳಿದುದನ್ನು ಕಾರ್ಯಾಚರಣೆಗೆ ತರತಕ್ಕ ಬುದ್ಧಿ ಮತ್ತು ಶಕ್ತಿಯನ್ನು ಸಂಪಾದಿಸಿ ಕೊಳ್ಳಿ ಎಂದು ಹೇಳುತ್ತೇನೆ. ಅದನ್ನು ಅಭ್ಯಾಸ ಮಾಡಿದರೆ ನಮ್ಮ ದೇಶಕ್ಕೆ ಬಂದಂಥ ದಾರಿದ್ರ್ಯ ಅರ್ಧ ಹೋಗುತ್ತದೆ. ಕ್ಷಾಮವಾದಂಥ ಕಾಲದಲ್ಲಿ ಒಬ್ಬೊಬ್ಬ ಮಂತ್ರಿಗಳು ಒಂದೊಂದು ಜಿಲ್ಲೆಗೆ ಹೋಗಿ

(ಶ್ರೀ ಜಿ. ಮರುಳಪ್ಪ)

ಜನರ ಕಷ್ಟಸುಖ ಕೇಳಿಬಿಟ್ಟು ಅಲ್ಲಲ್ಲಿ ಆರ್ಡರ್ ಮಾಡಲು ಏರ್ಪಾಡು ಮಾಡುತ್ತೇವೆ ಎಂದು ಮೊದಲು ತಿಳಿಸಿದರು. ಜನ, ಅವರು ಬರುತ್ತಾರೆ, ಬರುತ್ತಾರೆ ಎಂದು ಕಾದರು. ಮಂತ್ರಿಗಳು ಬಂದರು. 19—20 ಜಿಲ್ಲೆಗಳಿಗೆ ಒಬ್ಬೊಬ್ಬರೂ ಮಂತ್ರಿಗಳು ಹೋದರು. ನಮ್ಮ ಜಿಲ್ಲೆಗೆ ಶ್ರೀ ನಾರಾಯಣ ಗೌಡರು ಬಂದರು. ಅವರು ಹೇಳಿದರು, ನೀವು ಯೋಚನೆ ಮಾಡಬೇಕಾಗಿಲ್ಲ, ಎಲ್ಲಾ ಮಾಡಿಸಿ ಕೊಡುತ್ತೇವೆ ಎಂದು. ಏನೇನು ಪ್ರೋತ್ಸಾಹ ಬೇಕು, ಏನೇನು ರಿಯಾಯಿತಿ ಬೇಕು ಅವೆಲ್ಲವನ್ನೂ ಜನರು ಹೇಳಿದರು. ಮಂತ್ರಿಗಳು ಅವನ್ನು ಬರೆದುಕೊಂಡರು. ತ್ವರಿತವಾಗಿ ಈ ಕೂಡಲೇ, ಈ ದಿನದಿಂದಲೇ ಕೆಲಸ ಶುರು ಮಾಡಿಸುತ್ತೇವೆ ಎಂದು ಹೇಳಿದರು. 15 ದಿವಸ ಆಯಿತು ಒಂದು ತಿಂಗಳು ಆಯಿತು ಆದರೂ ಕೆಲಸ ಶುರುವಾಗಿಲ್ಲ. ಒಬ್ಬರು ಹೋದದ್ದು ಸರಿಯಲ್ಲ ಎಂದು ಇನ್ನಿಬ್ಬರು ಮಂತ್ರಿಗಳು ಬಂದರು. ಅವರು ಬಂದು ಹೇಳಿದರೂ ಈ ಕೂಡಲೇ ಮಾಡುತ್ತೇವೆ ಎಂದು. ಜನರಿಗೆ ಹೊಟ್ಟೆಗಿಲ್ಲ, ಕುಡಿಯಲಿಕ್ಕೆ ನೀರೇ ಇಲ್ಲ, ದನಕ್ಕೆ ಮೇವಿಲ್ಲ. ಜನರು ಆ ರೀತಿ ದುಃಖಪಡುತ್ತಿದ್ದಾರೆ, ಕಷ್ಟಪಡುತ್ತಿದ್ದಾರೆ, ಹೊಟ್ಟೆಗೆ ಏನು ತಿನ್ನಬೇಕು, ಇಂತಹ ಕಷ್ಟಕಾಲದಲ್ಲಿ ಯೋಜನೆ ಹಾಕಿದ್ದೇವೆ, ಆಲೋಚನೆ ಮಾಡುತ್ತಿದ್ದೇವೆ, ಸಿದ್ಧತೆ ಮಾಡಿಕೊಳ್ಳುತ್ತಿದ್ದೇವೆ, ಅದಷ್ಟು ಪ್ರಯತ್ನ ಮಾಡುತ್ತಿದ್ದೇವೆ ಎಂದು ಹೇಳತಕ್ಕ ಸರ್ಕಾರದ ಅಲಕ್ಷ್ಯತ್ವಕ್ಕೆ ಏನು ಹೇಳೋಣ ? ಇದೇ ಸಭೆಯಲ್ಲಿ 1962ನೇ ಇಸವಿಯಿಂದಲೂ ಕೂಡ ನಮ್ಮ ದೇಶದಲ್ಲಿ ಕ್ಷಾಮ ಬರುತ್ತಿದೆ, ಈ ರೀತಿ ಸೂಚನೆಗಳು ಇವೆ. ಮುಂದೆ ಏನು ಕಷ್ಟ ಬರುತ್ತದೋ ಎಂದು ಸದಸ್ಯರು ಎಷ್ಟೋ ಸಾರಿ ಎಷ್ಟು ವಿಧವಾಗಿ ಸರ್ಕಾರದವರನ್ನು ಎಚ್ಚರಿಕೆಯಿಂದ ಮುಂಜಾಗರೂಕತೆ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಪ್ರಾರ್ಥಿಸಿಕೊಂಡಾಗ ಅವರು ಹೇಳಿದರು, ಇದನ್ನು ಯೋಚನೆ ಮಾಡಬೇಕಾಗಿಲ್ಲ ಏನು ಇದ್ದರೂ, ಯಾರಿಗೆ ಏನು ಬೇಕಾದರೂ ತಂದು ಹಾಕುತ್ತೇವೆ, ಎಲ್ಲಾ ನಾವು ನೋಡಿಕೊಳ್ಳುತ್ತೇವೆ ಎಂದು. ಅದೆಲ್ಲಾ ರಿಕಾರ್ಡ್‌ನಲ್ಲಿ ಇದೆ. ಅವರು ಹೇಳಿದಂತೆ ಮಾಡಿದ್ದರೆ ಇವೊತ್ತಿನ ದಿವಸ ಮೈಸೂರು ಸಂಸ್ಥಾನದಲ್ಲಿ ಇಂತಹ ಕಷ್ಟಪರಿಸ್ಥಿತಿ ಮತ್ತು ಹಾಹಾಕಾರ ಪರಿಸ್ಥಿತಿ ಬರುತ್ತಿರಲಿಲ್ಲ. ದೇಶದಲ್ಲಿ ಏನು ಕಷ್ಟ ಇದೆ ಎಂದು ಎಷ್ಟು ವಿಧವಾಗಿ ಹೇಳಿದರೂ ಅದನ್ನು ನಿರ್ಲಕ್ಷಿಸಿದ್ದಾರೆ. ಅವರು ಹೇಳುವುದನ್ನು ನೋಡಿದರೆ, ನನಗೆ ಅನ್ನಿಸುತ್ತದೆ ಸೂರ್ಯಚಂದ್ರರೇ ಇವರ ಕೈಯ್ಯಲ್ಲಿ ಇದ್ದಾರೆ, ಅವರು ಒಂದು ಆರ್ಡರ್ ಮಾಡಿದರೆ, ಮೇಲಕ್ಕೆ ಬರುತ್ತಾರೆ, ಇಲ್ಲವೇ ನಿಂತುಹೋಗುತ್ತಾರೆ ಎಂದು. ಅವರಿಗೆ ಏನೇನೂ ಜವಾಬ್ದಾರಿ ಇಲ್ಲ. ಅವರಿಗೆ ಜವಾಬ್ದಾರಿ ಇರತಕ್ಕದ್ದು, ಟ್ರೆಜರಿಯಲ್ಲಿ ಹಣ ಪೂರ್ತಿಯಾದರೂ, ಓವರ್ ಡ್ರಾಫ್ಟ್ ಮಾಡಲು ಆರ್ಡರ್ ಮಾಡುವುದು, ತಾವು ಲೋಲುಪ್ತರಾಗಿರುವುದು ಮತ್ತು ತಮ್ಮ ಸುಖಗಳಿಗೆ ಯಾವ ವಿಧವಾದ ಧಕ್ಕೆ ಬರಬಾರದು ಎಂದು ಹೇಳುವುದು. ಎರಡು ಕೋಟಿ ಜನಕ್ಕೆ ಕಷ್ಟ ಬಂದರೂ ಸಹ ನಾವು 27 ಜನ ಸುಖವಾಗಿರಬೇಕು ಎಂಬುದೇ ಅವರಿಗೆ ಮೊದಲನೆಯ ಯೋಚನೆ. ನಾವು ಹೇಳಿದ್ದನ್ನು ಲಘುವಾಗಿ ತಿಳಿದುಕೊಳ್ಳಬಾರದು. ನಿಜವಾಗಿಯೂ ದೇಶದ ಪರಿಸ್ಥಿತಿ ಬಹಳವಾಗಿ ಕೆಟ್ಟುಹೋಗಿದೆ. ಎಲ್ಲಿಹೋದರೂ ಹೊಟ್ಟೆಗೆ ಕೂಳು ಇಲ್ಲ, ಮೈಗೆ ಬಟ್ಟೆ ಇಲ್ಲ, ಕುಡಿಯಲು ನೀರು ಇಲ್ಲ ಎಂದು ಹೇಳುತ್ತಾ ಇರಬೇಕಾದರೆ ಸರ್ಚಾರ್ಜ್ ಮೂಲಕ ಕಂದಾಯವನ್ನು ಒಂದಕ್ಕೆ ಒಂದೂವರೆಯಷ್ಟು ಮಾಡುತ್ತೇವೆ ಎಂದು ತಾವು ಹೇಳುತ್ತಾ ಇರುವುದನ್ನು ಕೇಳಿದ ಜನತೆ ಯಾವ ಧೈರ್ಯದಿಂದ ಬದುಕಬೇಕು ? ಹೊಟ್ಟೆಗೆ ಕೂಳು ಇಲ್ಲದೇ ಇರುವ ಇವತ್ತಿನ ಪರಿಸ್ಥಿತಿಯಲ್ಲಿ ಕಂದಾಯ ಜಾಸ್ತಿ ಮಾಡುತ್ತೇವೆ ಎಂದು ಹೇಳುವ ತಮ್ಮ ಹೇಳಿಕೆ ಪತ್ರಿಕೆಯಲ್ಲಿ ಬಂದಿರುವುದನ್ನು ನೋಡಿ ಅವರ ಜೀವ ಉಳಿಯುತ್ತದೆಯೇ ? ಈಗಿನ ಒಂದು ಪರಿಸ್ಥಿತಿಯಲ್ಲಿ ತಮಗೆ ದುಡ್ಡಿನ ಅವಶ್ಯಕತೆ ಇರಬಹುದು. ಯಾವ ಸಂದರ್ಭದಲ್ಲಿ ಯಾವ ವ್ಯವಹಾರವನ್ನು ಮಾಡಬೇಕು ಎನ್ನತಕ್ಕ ನೀತಿ, ಚಾಣಾಕ್ಷತೆ ಇಲ್ಲದೇ ಇರತಕ್ಕ ಈ ಮಂತ್ರಿಮಂಡಲ ನಮ್ಮ ದೇಶದಲ್ಲಿ ಇರಬಾರದು. ನಾವು ಇರಬಾರದು ಎಂದು ಹೇಳಿದರೂ ಕೂಡ ಅವರು ಹೋಗುವುದಿಲ್ಲ, ಇದ್ದೇ ಇರುತ್ತಾರೆ ಅದು ನಮಗೆ ಗೊತ್ತು.

5-00 P.M.

ಪಾನನಿರೋಧದ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ಪಾನನಿರೋಧದ ಕಾನೂನನ್ನು ಸ್ವಲ್ಪ ಸಡಿಲ ಪಡಿಸಿದ್ದಾರೆ, ಇದಕ್ಕೆ ನಾನು ಅವರನ್ನು ಎಂದರೆ ಮಂತ್ರಿಗಳೊಬ್ಬರು ತೆಗೆದುಕೊಂಡ ನಿಲುವನ್ನು ಸ್ವಾಗತಿಸುತ್ತೇನೆ. ಇಷ್ಟೇ ಅವರು ಹೇಳಿದರು, ಪಾನನಿರೋಧವನ್ನು ಸಡಿಲಿಸುವುದರಿಂದ ಹಿಂದುಳಿದ ಜನಾಂಗಕ್ಕೆ ಬಹಳ ಧಕ್ಕೆ ಬರುತ್ತದೆ, ಈ ರೀತಿ ಮಾಡುವ ಪದ್ಧತಿ ಏನಿದೆ ಇದು ತಪ್ಪು, ಆದ್ದರಿಂದ ಮಂತ್ರಿಮಂಡಲದಲ್ಲಿ ಇರುವುದಕ್ಕೆ ನನ್ನಿಂದ ಸಾಧ್ಯವಿಲ್ಲ ಎಂದು ಹೇಳಿ ಶ್ರೀಮತಿ ಯಶೋಧರಾ ದಾಸಪ್ಪನವರು ಆ ಸ್ಥಾನದಿಂದ ಇಳಿದು ಅಲ್ಲಿ ಬೇರೆ ಕುಳಿತಿದ್ದಾರೆ.

ಶ್ರೀಮಾನ್ ರಾಚಯ್ಯನವರು ಏನು ಹೇಳುತ್ತಾರೆ ಎಂದರೆ, ಪ್ರೊಹಿಬಿಷನ್ ಸ್ಕ್ರಾಪ್ ಮಾಡಿದ್ದೇವೆ ಎಂದು ಹೇಳಿದರೆ ಮಾತ್ರ ಮಂತ್ರಿಮಂಡಲವನ್ನು ಬಿಟ್ಟು ಹೊರಟು ಹೋಗುವುದಕ್ಕೆ ಸಾಧ್ಯವೇ ಹೊರತು ಇಲ್ಲದೇ ಇದ್ದರೆ ಸಾಧ್ಯವಿಲ್ಲ, ಸಡಿಲ ಮಾಡಿದ್ದರಿಂದ ಬಾಧಕ ಏನೂ ಆಗುವುದಿಲ್ಲ The word 'scrap' should not be there. Except using that word let them do whatever they want ಎಂದು ಹೇಳುತ್ತಾರೆ. ಅದು ಏನೇ ಇರಲಿ, ಗಾಂಧಿ ಭಕ್ತರು, ಗಾಂಧಿ ವಾದಿಗಳು ಈ ಒಂದು ತತ್ವಕ್ಕೆ ಕಟ್ಟುಬಿದ್ದಿದ್ದಾರೆ. ಹಾಗಿರುವಾಗ ಇದನ್ನು ಜಾರಿಗೆ ತರುವಾಗ ಸಡಿಲಪಡಿಸಿದ್ದೇ ಆದರೆ ನಾನು ಅಲ್ಲಿರುವುದಕ್ಕೆ ಲಾಯಕ್ ಅಲ್ಲ, ನಾನು ಅನ್‌ಫಿಟ್, ಮಂತ್ರಿಮಂಡಲ ದಲ್ಲಿ ಇರಬಾರದು ಎಂದು ಹೇಳಿ ದಕ್ಷತೆಯಿಂದ ಒಂದು ನೀತಿಗೆ ಕಟ್ಟುಬಿದ್ದು ರಾಜೀನಾಮೆ ಕೊಟ್ಟಂಥ ಶ್ರೀಮತಿ ಯಶೋಧರಾ ದಾಸಪ್ಪನವರನ್ನು ನಾನು ಬಹಳವಾಗಿ ಅಭಿನಂದಿಸುತ್ತೇನೆ.

ಸ್ವಾಮಿ, ಆಹಾರದ ಪರಿಸ್ಥಿತಿ ಮತ್ತು ರಿಲೀಫ್ ಕಾಮಗಾರಿಗಳ ಬಗ್ಗೆ ಸ್ವಲ್ಪ ಮಾತನಾಡಬೇ ಕಾಗಿದೆ. ಜತ್ತಿಯವರಿಗೆ ಸಾಕಾಗಿರುವುದು ನಿಜವೇ. ಅದಕ್ಕೆ ಕಾರಣವಾದರೂ ಇಷ್ಟೆ, ಇದು ಒಂದು ಜಟಿಲವಾದ ಸಮಸ್ಯೆಯಾಗಿಬಿಟ್ಟಿದೆ. ಒಂದುವೇಳೆ ಅವರು ಈ ಶಾಖೆಯನ್ನು ತೆಗೆದು ಕೊಳ್ಳದೇ ಹೋಗಿದ್ದರೆ ಇಷ್ಟರಲ್ಲೇ ದೇಶದ ಪರಿಸ್ಥಿತಿ ಬಹಳ ಚೆನ್ನಾಗಿ ಸುಧಾರಿಸುತ್ತಾ ಇತ್ತು ಅಥವಾ ಯಾವುದಾದರೂ ಒಂದು ತೀರ್ಮಾನವಾಗುತ್ತಾ ಇತ್ತು, ಅವರು ಈ ಶಾಖೆಯನ್ನು ತೆಗೆದುಕೊಂಡು ಇನ್ನೂ ಸ್ವಲ್ಪದಿವಸ ಅನಿರ್ದಿಷ್ಟ ಪರಿಸ್ಥಿತಿ ಉಳಿಯುವ ಹಾಗೆ ಮಾಡಿದ್ದಾರೆ ಎಂದು ನಾನು ಹೇಳುತ್ತಾ ಇದ್ದೇನೆ. ಈ ಅಪರಾಧ ಅವರಿಗೇ ಸೇರತಕ್ಕದ್ದು. ರಿಲೀಫ್ ಕಾಮಗಾರಿ ಮಾಡಬೇಕೆಂದರೆ ಅದಕ್ಕೆ ಮಾಡಿರುವ ಆರ್ಡರ್ ಹೇಗಿದೆ ನೋಡಿ. ಏನೂ ಬೆಳೆ ಇಲ್ಲ, ಮಳೆ ಇಲ್ಲ ನಮ್ಮ ತಾಲ್ಲೂಕಿನಲ್ಲಿ ಒಂದೂವರೆ ಲಕ್ಷ ಜನರು ಇದ್ದಾರೆ ಎಂದು ಹೇಳಿದರೆ, ರಿಲೀಫ್ ಕಾಮಗಾರಿಗೆ ಆರು ಸಾವಿರ ರೂಪಾಯಿ ರಿಲೀಸ್ ಮಾಡಿ ಎಂದು ಹೇಳುತ್ತಾರೆ. ಒಂದು ಆಳಿಗೆ ಒಂದು ರೂಪಾಯಿ ಹನ್ನೆರಡಾಣೆ ಕೂಲಿ ಕೊಡುತ್ತೇವೆ ಎಂದು ಹೇಳುತ್ತಾರೆ. ಆರು ಸಾವಿರ ರೂಪಾಯಿ ಎಷ್ಟು ದಿವಸಕ್ಕೆ ಆಗಬಹುದು, ಎಷ್ಟು ದಿವಸ ರಿಲೀಫ್ ಕಾಮಗಾರಿ ಕೆಲಸ ನಡೆಯಬಹುದು? ಅವರಿಗೆ ತಲೆ ಒಳಗೆ ಮೆದುಳೇ ಇಲ್ಲವೇ? ನಮಗೆ ಒಂಬತ್ತು ತಿಂಗಳು ಕಷ್ಟ ಪರಿಸ್ಥಿತಿ ಇದೆ ಒಂಬತ್ತು ತಿಂಗಳಿಗೆ ಸಾವಿರ ಜನಕ್ಕೆ ಕೂಲಿ ಕೊಡತಕ್ಕ ವ್ಯವಸ್ಥೆಮಾಡಿ ಎಂದರೆ ಅದನ್ನು ಯೋಚನೆ ಮಾಡುವುದಿಲ್ಲ.

†Sri V. S. PATIL (Belgaum-I) : Sir, this is one of the most important occasions on which we have to express our views regarding the policies to be followed by the Government. We expected and every member of the legislature expect that the speech delivered by the Governor must be only a policy statement and not an administrative report. If we read the speeches for the last seven or eight years, the main business or main trend which must be there is sidetracked and the policy statements are practically absent day by day. In this speech it is difficult to find any policy statement. It is practically an administrative report for the last year as to what the Government have done and what the country expect this year. That is the only thing mentioned. On page 2 of the Address, His Excellency has stated that while welcoming Smt. Indira Gandhi as the Prime Minister of India, let us pray to the Almighty to shower His blessings on her and to endow her with wisdom and strength to tackle effectively the innumerable problems that confront our country today. Here, instead of relying or praying God the Governor ought to have said that the people must do something or a certain thing in order to support the policy or the actions of the new Prime Minister. Instead of asking the people the Governor is now looking to the sky for help. This is not befitting a democratic country like ours. If we should look to this, it appears that our Governor is still under the impression that every blessing must come from the Almighty. It we take it as one of the principles of our society or thinking of our society, then Sir, the last year's failure of rains, can we not say that on account of the sins commit-

(SRI V. S. PATIL)

ted by the Rulers of this country the sin has been increased to such an extent that nature is not willing to help this Government, because whenever there is failure of rain, according to our social structure, our religous people and cultivators go to some God and pray to him for the rains. That belief is still there and if the utter failure of rains just like last year's is there, then the blame goes to the Administrator, the Government. Can we not say from this state of affairs that the sins have increased abnormally in the working of the present Government? In fact, the sins have increased; there is no doubt about it the corruption that is rampant, the nepotism which has ruined the administration. All these sins are there, and recently Pandit Nehru had tried to effect some improvements by appointing the new Home Minister at the Centre, Sri Nanda and Sri Shastri as the Head of the Administration.

Mr. SPEAKER.—Are we really concerned with the appointments of the Central Cabinet here? It is not a question of certain sentiments praying to God being developed.

Sri V. S. PATIL.—If our Governor is pleased to pray God, then we have to say God has not been pleased to send the rain.

Mr. SPEAKER.—Does he seriously suggest that the prayer to God is a policy in a secular State?

Sri V. S. PATIL.—Our Government must improve their conduct and behaviour and avoid committing sins. For that reason I am referring to this particular para to which a reference has been made in the speech. Sir, in the whole of this speech there is absolutely nothing to show that Government is going to improve the administration or improve the conduct of their officers, and other people who are at the helm of affairs. There is no effective working to check or to improve the administration. A simple example may be taken. When an application is made to any officer, the previous administration, *i.e.*, the Bombay Administration used to send an acknowledgment in writing quoting a particular number and asking the applicant to refer to that particular number whenever he further wants to press for the subject. But now, since 1956, since we are integrated into this big State, for hundreds of applications or representations not a singlea cknowledgment is received. Even after six months if we put in a reminder the officer will say that they have not got the original and asks us to send a copy of the original representation. This is the way in which the administration is being run and this is one of the reasons why corruption is rampant in the State. I have referred to this question several times on the Floor of this House during the speeches on the Governor's Address, but there is absolutely no improvement at all. It appears that while discharging their duties, they think that this is one of the best reasons to say that they have not got the file or representation. My submission is, that if the Government seriously think of

improving the administration, they must follow the principle that whenever a representation from a private person is received there must be an acknowledgment quoting a number and asking the applicant to refer that particular number in future.

Sir, on page 8, His Excellency the Governor, has referred that the incidence of crime showed a slight downward trend during the year 1965 under all heads except murder. Specially the biggest number of crimes used to be under Prohibition. Since last year, the Police have taken up the cause of this Prohibition and at least in my place we see daily this illicit liquor being sold by the Police. Uptill now they were taking their money weekly or monthly. Now these boot-leggers have built up houses, have purchased property and that is why the Police themselves are now selling illicit liquor. When this thing is being done by the protectors how is it possible to detect the crime? That is one of the main reasons why there is a slight downward trend in the incidence of crime from last year.

I should like to refer to the food ministry and the collection of levy. The Government have decided to collect or to levy the foodgrains on acreage. We have represented to the Government that this is a wrong policy. They have decided that the first acre will be free, from 2 to 5 acres a particular amount, from 5 to 10 acres a higher amount and for more than 10 acres triple the amount. This is the way in which they are collecting the levy. Our suggestion or our request was that they must take into consideration the number of members of the cultivator's family, what are their requirements, how much foodgrains are required by the cultivator for the next season until he completes the next season and if there is any deficit then the Government must pay him in order to enable him to raise the crop for the next season. But the present Government is not even willing to see whether the cultivator can cultivate the land and whether he can maintain his family with the foodgrains that are in his possession. They simply say, whether the man owns 100 acres or 10 guntas, the assessment, just like land revenue, must be paid. On those lines these levies have been collected and this is a very wrong policy and there is discontent all over the State. Sir, the Governor admits in his speech that there were nt rains and the yield was precariously low in almost all jirayao lands and there were no crops at all in malnad areas. Still, they are forcing the people to pay the levy. In some instances which I know that Government officers have asked the cultivators to purchase paddy from somewhere else and give to Government. That means, that person has to purchase paddy at the rate of Rs. 80 or 85 per quintal and give it to Government at the rate of Rs. 40 or 45. This is the way in which the cultivators are being harassed by government officers. Government officers were really lenient and considerate in the beginning. But, an order has been issued from this place-it appears by the Minister concerned that the officers who do not collect as per the acreagerecorded in the records of rights, will be dismissed from service. Therefore, in order to save his own bread, the

(SRI V. S. PATIL)

offiecr is pressing the cultivator! This will create trouble during the next election I am sure. Are they going to fill up the gap of deficit by this means ? It is impossible. According to the figures, hardly ten lakhs tonnes are necessary for this purpose. It is unfair that the cultivator is troubled in this way. I know more thana dozen Talaties have been kept under suspension for not collecting the quantities according to the records. The records are not correct in several cases. Simply because the record shows that the land is sown, it is great injustice to insist on collection. I request the Government to see reason and try to do justice and help these poor cultivators in future.

Sir, we know that the existing land under cultivation is not sufficient to grow enough foodgrains. In order to increase food production, Government is thinking of getting some forest land under cultivation. For that purpose, some forest area is tried to be cleared. But, unfortunately, actual cultivation has not yet been started and the aversion of the Forest Department in this regard is strange. They want to increase forest area and the Agriculture Department wants to release forest area for cultivation. According to these two theorists, the agriculture department is suffering and ultimately the population is starving. This is a wrong view and we will not be able to increase food production to meet the demands. So, the forest area which can be brought under cultivation, especially paddy cultivation, must be turned into fields quickly by Government and then handed over to the cultivator. Then alone it would be possible to meet to some extent at least, the demand and the needs of the people.

Secondly, so far as our area is concerned, the most important matter is minor irrigation. We are trying to get the tanks in our area repaired and they are all 100 or 200 years old ; they have all been silted. It is not possible to make use of those tanks as they are now. I have represented this matter to the concerned Minister several times. Each time they put up some excuse or the other and they always put off the repairs of the tanks. They undertake new tanks but for repairs, they are reluctant. This is a very wrong policy. In major and medium irrigation we have invested huge amounts and paying interest for this from other sources. We are not getting due return which was expected from these bigger schemes. That is not the case in respect of minor irrigation ; they pay immediately the work is completed. I therefore suggest that instead of only two crores now provided, more provision should be made and these minor irrigation schemes should be increased and even a single drop that falls from the sky should not be allowed to waste or dry up. That should be done immediately ; otherwise, there is no hope of improvement in food production in the State.

Then, Sir, about the increase in taxation. I will speak when the Bills are brought here. But, I must say here that increase in taxation

will not be of any benefit to Government. It will increase the trouble. I hope Government will think twice befor introducing these Bills.

Lastly, I would like to refer to this Co-operative movement. Sir, this must be improved as otherwise, it would be very difficult to cope with the work. We all know that this co-operative business is not as good or as expected and there are so many dirty things involved in this movement. Unless they are cured, I do not think our policy of supplying foodgrains and other materials would be of any effect.

On page 28 of the Address the last sentence is :

> "Let me conclude by welcoming you all once again and extending to you my best wishes for a successful Session and a New Year of continued achievement "

Of course, the session would be successful, there is no doubt about it. "..........and a New Year of continued achievement"—this is the important thing. New Year and achievement for whom is the point. Is it achievement for Government or achievement to the individual ? I want that the New Year and achievement should be of the people and not a private individual who is ruling the country.

5-30 P.M.

†ಶ್ರೀ ಜಿ. ವಿ. ಗೌಡ (ಪಾಳ್ಯ).—ಅಧ್ಯಕ್ಷರೇ, ಈ ವರ್ಷದ ರಾಜ್ಯಪಾಲರ ಭಾಷಣ ಯಾವ ರೀತಿಯಿಂದಲೂ ಕೂಡ ಉತ್ತೇಜನಕಾರಿಯಾಗಿಲ್ಲ, ಜನತೆಯಲ್ಲಿ ಯಾವ ರೀತಿಯ ವಿಶ್ವಾಸವನ್ನಾಗಲೀ, ಅಭಿಮಾನವನ್ನಾಗಲೀ ಮೂಡಿಸುವಂಥ ಸಮರ್ಥನೆಯನ್ನು ಪಡೆದಿಲ್ಲವೆಂದು ಹೇಳಿದರೆ ಏನೂ ತಪ್ಪಾಗಲಾರದು. ಅದರಲ್ಲಿ ಮುಖ್ಯವಾಗಿ ಮೂರನೇ ಪಂಚವಾರ್ಷಿಕ ಯೋಜನೆ ಮುಗಿಯುತ್ತಿದೆ, ನಾಲ್ಕನೇ ಪಂಚವಾರ್ಷಿಕ ಯೋಜನೆ ಪ್ರಾರಂಭವಾಗಬೇಕಾಗಿದೆ. ಇಂಥ ಒಂದು ಸಂದರ್ಭದಲ್ಲಿ ರಾಷ್ಟ್ರದ ಅಥವಾ ರಾಜ್ಯದ ಸಮಗ್ರ ನೀತಿಯನ್ನು ಪರಿಹಾರ ಮಾಡತಕ್ಕಂಥ ಒಂದು ದೊಡ್ಡ ನಿಲುವನ್ನು ದೇಶದ ಮುಂದೆ ಇಡಬೇಕಾದುದು ಬಹಳ ಅಗತ್ಯವಾಗಿತ್ತು. ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ 243 ಕೋಟಿ ರೂಪಾಯಿ ಖರ್ಚುಮಾಡಿದ್ದಾರೆ. ಇದು ಬಹಳ ಯಶಸ್ವಿಯಾಗಿದೆಯೇ ಎಂದು ರಾಜ್ಯದ ಸಾಮಾನ್ಯ ಜನತೆಯ ದೃಷ್ಟಿಯಿಂದ ಪರಿಶೀಲನೆ ಮಾಡುವುದಾದರೆ, ಇದರಿಂದ ಯಾವ ಸಾಧನೆಯನ್ನೂ ಮಾಡಿಲ್ಲವೆಂದು ಧಾರಾಳವಾಗಿ ಹೇಳುತ್ತೇನೆ. ವೆಚ್ಚಮಾಡಿರತಕ್ಕ ಹಣಕ್ಕನುಗುಣವಾಗಿ ಒಂದು ಪರಿಣಾಮಕಾರಿಯಾದ ಪ್ರಗತಿಯನ್ನು ಜನತೆಯು ನೇರವಾಗಿಯಾಗಲೀ, ಅಪ್ರತ್ಯಕ್ಷವಾಗಿಯಾಗಲೀ ಫಲವನ್ನು ಹೊಂದಿಲ್ಲವೆನ್ನತಕ್ಕಂಥದ್ದನ್ನು ಧಾರಾಳವಾಗಿ ಹೇಳಬಹುದು. ಮಾನ್ಯ ಆಹಾರ ಸಚಿವರಿಗೆ ಗೊತ್ತಿದೆ, ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ನಮಗೆ ಕೇಂದ್ರ ಸರ್ಕಾರದಿಂದ ಎಷ್ಟರಮಟ್ಟಿಗೆ ಪ್ರಯೋಜನ ಸಿಗಬೇಕಾಗಿತ್ತೋ ಅಷ್ಟರಮಟ್ಟಿಗೆ ಸಿಗಲಿಲ್ಲ ಎನ್ನುವುದು. ನಾಲ್ಕನೇ ಯೋಜನೆ ವಿಚಾರದಲ್ಲೂ ಕೂಡ ಸರ್ಕಾರದವರು ಸುಮಾರು 537 ಕೋಟಿ ರೂಪಾಯಿಗಳ ಗಾತ್ರವನ್ನು ಯೋಜನೆಗೆ ಹಾಕಿಕೊಂಡಿದ್ದೇವೆಂದು ಪ್ರಸ್ತಾಪ ಮಾಡಿದ್ದಾರೆ. ಸಾಂಪ್ರದಾಯಿಕವಾಗಿ ಒಂದು ಯೋಜನೆಯನ್ನು ಅಖೈರಾಗಿ ತೀರ್ಮಾನ ಮಾಡುವುದಕ್ಕೆ ಮೊದಲು ಈ ಮಾನ್ಯ ಸಭೆಗೆ ಹಿಂದೆಯೇ ಬರಬೇಕಾಗಿತ್ತು. ನಾಲ್ಕನೇ ಪಂಚವಾರ್ಷಿಕ ಯೋಜನೆಯ ರೂಪರೇಖೆಗಳೇನು, ಮತ್ತು ಸರ್ಕಾರದವರು ಇದರ ಬಗ್ಗೆ ಕೆಲಸ ಮಾಡಲಿಕ್ಕೆ ಏನು ಒಂದು ನೀತಿಯನ್ನು ಹಾಕಿಕೊಂಡಿದ್ದಾರೆ ಎನ್ನುವ ವಿಚಾರವು ಗೊತ್ತಿಲ್ಲ. ಅಲ್ಲದೆ ಅದು ಅಖೈರಾದ ತೀರ್ಮಾನವೇ ಅಲ್ಲವೇ ಎಂಬುದು ಗೊತ್ತಿಲ್ಲ. ಕೇಂದ್ರ ಸರ್ಕಾರದಿಂದ ಏನೇನು ಸಹಾಯಗಳು ನಮ್ಮ ದೇಶಕ್ಕೆ ನಾಲ್ಕನೇ ಯೋಜನೆಯಲ್ಲಿ ಸಿಗುತ್ತದೆ ಎನ್ನುವ ವಿಚಾರವೂ ಕೂಡ ಗೊತ್ತಿಲ್ಲ.

ನಾಲ್ಕನೇ ಯೋಜನೆಯಲ್ಲಿ ಮೊದಲನೆ ವರ್ಷ 50.72 ಕೋಟಿ ರೂಪಾಯಿಗಳನ್ನು ವೆಚ್ಚಮಾಡಬೇಕೆಂದು ಒಂದು ಅಖೈರಾಗಿ ತೀರ್ಮಾನ ಮಾಡಿದ್ದಾರೆ. ಅದರಲ್ಲಿ 34 ಕೋಟಿ ರೂಪಾಯಿಯಷ್ಟು ಕೇಂದ್ರ ಸರ್ಕಾರದಿಂದ ಸಹಾಯ ಸಿಗುತ್ತದೆ ಎಂಬ ಒಂದು ಅಂಶ ಇಲ್ಲಿ ಉಲ್ಲೇಖಿತವಾಗಿದೆ.

(ಶ್ರೀ ಡಿ. ಎ. ಗೌಡ)

ಇದನ್ನು ಪರಿಶೀಲನೆ ಮಾಡಿದರೆ ನಾಲ್ಕನೇ ಯೋಜನೆಯಲ್ಲಿ ಶೇಕಡ 60ರಷ್ಟು ಸಹಾಯ ಸಿಗಬಹುದೋ ಏನೋ ಎಂಬ ಸಂದೇಹ ಬರುತ್ತದೆ. ಆದರೆ ಇವತ್ತು ಇದು ಅಖೈರಾಗಿ ತೀರ್ಮಾನವಾಗಿದೆಯೇ? ಮುಂದಿನ ವರ್ಷ ಅಥವಾ 1967—68ರಲ್ಲಿ ಮೈಸೂರು ಸರ್ಕಾರ ತನ್ನ ಬಾಬತ್ತು ಎಷ್ಟು ಮೀಸಲಾಗಿಡಬಹುದು, ಕೇಂದ್ರ ಸರ್ಕಾರದಿಂದ ಎಷ್ಟು ಸಿಗುತ್ತದೆ ಅನ್ನತಕ್ಕಂಥ ಒಂದು ಸ್ಥಿತಿ ಗೊತ್ತಾಗಿದೆಯೇ? ಆದರೆ ಬಹುಶಃ ನಮ್ಮ ಅಭಿವೃದ್ಧಿ ಕಾರ್ಯಗಳು ಖಂಡಿತ ಆಗುತ್ತವೆ ಎಂಬುದನ್ನು ಸರ್ಕಾರ ನೋಡಬೇಕು. 537 ಕೋಟಿ ರೂಪಾಯಿಗಳನ್ನು ನಮ್ಮ ಯೋಜನೆಗೆ ಖರ್ಚು ಮಾಡುತ್ತೇವೆಂದು ಹೇಳುವಾಗ ನಮ್ಮ ರಾಜ್ಯದ ಪರಿಸ್ಥಿತಿಯನ್ನು ನೋಡುವುದಾದರೆ ನಮ್ಮ ರಾಜ್ಯ ಎಷ್ಟರ ಮಟ್ಟಿಗೆ ನೀರಾವರಿ ಸೌಕರ್ಯಗಳನ್ನು ಹೊಂದಿದೆ ಮತ್ತು ಇತರ ಅಭಿವೃದ್ಧಿ ಕಾರ್ಯಗಳು ಎಷ್ಟರ ಮಟ್ಟಿಗೆ ಪ್ರಗತಿ ಹೊಂದಿವೆ ಎಂಬುದನ್ನು ಪರಿಶೀಲನೆ ಮಾಡುವುದಾದರೆ 700 ಕೋಟಿ ರೂಪಾಯಿಗೆ ಒಂದು ಯೋಜನೆ ಏಕಾಗಬಾರದಾಗಿತ್ತೆಂದು ನಾನು ಪ್ರಶ್ನೆ ಮಾಡಬೇಕಾಗಿದೆ. ತಮಗೆ ಗೊತ್ತಿರುವ ಹಾಗೆ, ಎರಡನೇ ಮತ್ತು ಮೂರನೇ ಯೋಜನೆಗಳಲ್ಲಿ ಮೈಸೂರು ಸರ್ಕಾರಕ್ಕೆ ಕೇಂದ್ರ ಕೊಟ್ಟ ಸಹಾಯ ಧನ ಬಹಳ ಕಡಿಮೆ. ನಮಗಿಂತ ಉತ್ತಮವಾಗಿರುವ ಮದ್ರಾಸ್ ಮತ್ತು ಆಂಧ್ರ ಸರ್ಕಾರಗಳು ಹೆಚ್ಚಿನ ಸಹಾಯ ಪಡೆಯುತ್ತಿವೆ. ಕಳೆದ 3ನೇ ಯೋಜನೆಗಳಲ್ಲಿ ಶೇಕಡ 60 ರಷ್ಟನ್ನು ಅವಕ್ಕೆ ಸಹಾಯಧನವನ್ನಾಗಿ ಕೊಟ್ಟಿದ್ದಾರೆ. 243 ಕೋಟಿ ರೂಪಾಯಿಗಳನ್ನು ಏನು ಖರ್ಚು ಮಾಡಿದ್ದೇವೆಂದು ಹೇಳುತ್ತೀರೋ ಅದನ್ನು ಲೆಕ್ಕ ಹಾಕಿದರೆ ಶೇಕಡ 45—46ರ ರಷ್ಟು ಮಾತ್ರ ಕೇಂದ್ರ ಸರ್ಕಾರದಿಂದ ಸಹಾಯಧನವಾಗಿ ದೊರೆತಿದೆ ಎಂದು ನಮಗೆ ಗೊತ್ತಾಗುತ್ತದೆ. ಅಂದ ಮೇಲೆ ನಾಲ್ಕನೇ ಯೋಜನೆಯಲ್ಲಿ ನಾವು ಶೇಕಡ 80 ರಷ್ಟನ್ನಾದರೂ ಸಹಾಯಧನವನ್ನಾಗಿ ಪಡೆಯಬೇಕು. ಇಲ್ಲವೆ ಹೋದರೆ ಕಾಮಗಾರಿಗಳನ್ನು ಮುಗಿಸುವುದಕ್ಕೆ ಸಾಧ್ಯವಿಲ್ಲ.

ನಾಲ್ಕನೇ ಯೋಜನೆಯ ಮೊದಲನೇ ವರ್ಷದಲ್ಲಿ 156 ಕೋಟಿ ರೂಪಾಯಿಗಳನ್ನು ಆದರೂ ನೀರಾವರಿ ಕೆಲಸಗಳನ್ನು ಮುಗಿಸುವುದಕ್ಕೆ ಖರ್ಚು ಮಾಡಬೇಕಾಗುತ್ತದೆ. ಅಂದಮೇಲೆ ನಾಲ್ಕನೇ ಯೋಜನೆಯಲ್ಲಿ ನೀರಾವರಿ ಸೌಲಭ್ಯಗಳನ್ನು ಪಡೆಯಬೇಕಾದರೆ, ಯಾವ ಒಂದು ಹೊಸ ಕೆಲಸವನ್ನು ಮಾಡುವುದಕ್ಕೆ ಸಾಕಷ್ಟು ಹಣವಿರುವುದಿಲ್ಲ ಅನ್ನುವುದನ್ನು ಮಾನ್ಯ ಮಂತ್ರಿಗಳಾದ ಶ್ರೀ ಜತ್ತಿಯವರು ಮನಗಾಣಬೇಕು. ಏಕೆಂದರೆ ಗೊತ್ತುಪಡಿಸಿರುವ 537 ಕೋಟಿ ರೂಪಾಯಿಗಳಲ್ಲಿ ಎಷ್ಟು ಅಂಶವನ್ನು ನೀರಾವರಿ ಮತ್ತು ವಿದ್ಯುಚ್ಛಕ್ತಿಗೆ ಇಡಲಿಕ್ಕೆ ಸಾಧ್ಯವೆಂಬುದನ್ನು ತಾವು ಯೋಚನೆ ಮಾಡಬೇಕಾಗಿದೆ. ಶೇಕಡ 40ರಷ್ಟು ಇಟ್ಟರೂ ಕೂಡ 280 ಕೋಟಿ ರೂಪಾಯಿ ಬೇಕಾಗುತ್ತದೆ. ಈ ದೃಷ್ಟಿಯಿಂದ ನೋಡುವುದಾದರೆ ನಮ್ಮ ನಾಲ್ಕನೇ ಯೋಜನೆಯ ಗಾತ್ರ 700 ಕೋಟಿ ರೂಪಾಯಿಗಳು ಏಕಾಗಬಾರದು! ಅಷ್ಟು ದುಡ್ಡನ್ನು ನಾಲ್ಕನೇ ಯೋಜನೆಗೆ ಇಡಬೇಕೆನ್ನುವುದು ನನ್ನ ಅಭಿಪ್ರಾಯ. ಮತ್ತು ಇದರಲ್ಲಿ ಕೇಂದ್ರ ಶೇಕಡ 80ರಷ್ಟನ್ನು ದೊರಕಿಸಿಕೊಡಬೇಕು. ಖೋತವನ್ನು ತುಂಬಲಿಕ್ಕೆ ನಿರ್ದಿಷ್ಟವಾದ ಕೆಲಸವನ್ನು ಮಾಡಿ ಕೇಂದ್ರದ ಮುಂದೆ ಇಟ್ಟು ಒಪ್ಪಿಗೆ ಪಡೆಯಬಾರದೇಕೆ? ಸಕಾಲದಲ್ಲಿ ದುಡ್ಡನ್ನು ಷೆಡ್ಯೂಲ್‌ನಂತೆ ಖರ್ಚು ಮಾಡದಿದ್ದರೆ ಏನೂ ಪ್ರಯೋಜನವಾಗುವುದಿಲ್ಲ, ಹಣ ನಷ್ಟವಾಗುತ್ತದೆ. ಒಂದು ವರ್ಷದಲ್ಲಿ ಎಷ್ಟು ಖರ್ಚುಮಾಡಬೇಕೆಂದು ಷೆಡ್ಯೂಲ್‌ನಲ್ಲಿ ಹಾಕಿಕೊಂಡಿದ್ದೀರೋ, ಅಷ್ಟರ ಮಟ್ಟಿಗೆ ಹಣ ಖರ್ಚಾಗಿ ಕೆಲಸವಾಗದಿದ್ದರೆ ಹಣ ವ್ಯರ್ಥ ಆಗುತ್ತದೆ. ಕೆಲಸ ಮುಂದೆ ಹಾಕಿ ಹಣ ಖರ್ಚುಮಾಡುತ್ತಿರುವುದರಿಂದ ಖರ್ಚು ಮಾಡುವ ಹಣಕ್ಕೆ ಪ್ರತಿಫಲ ಸಿಗುತ್ತಾ ಇಲ್ಲ. ಇಂಥ ವಿಷಮ ಪರಿಸ್ಥಿತಿಯಿದೆ ಎಂದು ಹೇಳಿ ನೈಜ ಪರಿಸ್ಥಿತಿಯನ್ನು ಕೇಂದ್ರ ಸರ್ಕಾರದ ಮುಂದೆ ತೀವ್ರತೆಯಿಂದ ಇಟ್ಟು ಅವರ ಸಹಾಯವನ್ನು ಪಡೆಯಬೇಕಾಗಿತ್ತು. ಹೀಗೆ ಮಾಡಲಿಲ್ಲವಲ್ಲಾ ಎಂದು ನಾನು ವಿಷಾದದಿಂದ ಪ್ರಸ್ತಾಪ ಮಾಡಬೇಕಾಗಿದೆ. ಆದ್ದರಿಂದ ಇವತ್ತು ಕೂಡ ನಾಲ್ಕನೇ ಯೋಜನೆಯ ಒಂದು ರೂಪರೇಖೆಯ ಬಗ್ಗೆ ತಮ್ಮ ಅಭಿಪ್ರಾಯ ಬದಲಾಗಬೇಕು. ಮೈಸೂರು, ಆಂಧ್ರ ಮತ್ತು ಮದ್ರಾಸ್ ದೇಶಗಳಿಗಿಂತಲೂ ಎಲ್ಲಾ ವಿಧದಲ್ಲಿಯೂ ನಮ್ಮ ರಾಜ್ಯ ಹಿಂದೆ ಉಳಿದಿದೆ ಎನ್ನುವುದು ತಮಗೇ ಗೊತ್ತಿದೆ. ಅಂದಮೇಲೆ ಯೋಜನಾ ಕಮೀಷನವರು ಇಡೀ ರಾಷ್ಟ್ರ, ಇಡೀ ದೇಶದ ಸಮಗ್ರತೆಯನ್ನು ತೆಗೆದುಕೊಂಡು ಯಾವ ಯಾವ ಪ್ರದೇಶಗಳಲ್ಲಿರುವ ಯಾವ ಯಾವ ರಾಜ್ಯಗಳು ಹಿಂದುಳಿದಿವೆಯೋ ಅವುಗಳನ್ನು ಮುಂದಕ್ಕೆ ತರಬೇಕು. ಅವುಗಳಲ್ಲಿ ಹೆಚ್ಚಿನ ಅಭಿವೃದ್ಧಿ ಕಾರ್ಯಗಳನ್ನು ಅದಷ್ಟುಮಟ್ಟಿಗೆ ಮಾಡಿ ಎಲ್ಲಾ ರಾಜ್ಯಗಳು ಒಂದೇ ರೀತಿಯಲ್ಲಿ ಪ್ರಗತಿ ಪರವಾಗಿರಬೇಕು. ಅಂದರೆ on par ಇರಬೇಕು. ಬೆಳವಣಿಗೆ ಸಮನ್ವಯವಾಗುವ ರೀತಿಯಲ್ಲಿ ಇರಬೇಕು ಎಂಬುದೇ ಅವರ ಉದ್ದೇಶ. ಈ ದೃಷ್ಟಿಯಿಂದ ಮೈಸೂರು ಸರ್ಕಾರಕ್ಕೆ ಹೆಚ್ಚಿನ ಸಹಾಯ, ಹೆಚ್ಚಿನ ದುಡ್ಡು ಬರಬೇಕು. ಆಂಧ್ರ ಪ್ರದೇಶಕ್ಕೆ ಶೇಕಡ 21 ರಷ್ಟು ಮದ್ರಾಸ್ ಸರ್ಕಾರಕ್ಕೆ ಶೇಕಡ 40ರಷ್ಟು ಸಹಾಯಧನವನ್ನು ಕೇಂದ್ರ ಕೊಟ್ಟಿದೆ. ಅಂದಮೇಲೆ

ನಾವು ಹಾಗೆಯೇ ಪಡೆಯುವುದಕ್ಕೆ ಯೋಗ್ಯತೆ ಪಡೆಯಬೇಕು. ಒಂದು ದೊಡ್ಡ ಗಾತ್ರದಲ್ಲಿ ದುಡ್ಡನ್ನು 4ನೇ ಯೋಜನೆಯಲ್ಲಿ ಖರ್ಚು ಮಾಡದೇ ಹೋದರೆ ನೀರಾವರಿ ಮತ್ತು ಇನ್ನಿತರ ಅಭಿವೃದ್ಧಿ ಕಾರ್ಯಗಳಲ್ಲಿ ಪಕ್ಕದ ರಾಜ್ಯಗಳ ಮಟ್ಟಿಗೆ ಮೈಸೂರು ಬರುವುದಕ್ಕೆ ಸಾಧ್ಯವಾಗುವುದಿಲ್ಲ, ಎಂಬುದನ್ನು ಸ್ಪಷ್ಟವಾಗಿ ತಿಳಿಯಬೇಕು. ಭಾರಿ ಪ್ರಮಾಣದ ಖರ್ಚನ್ನು ತೆಗೆದುಕೊಂಡು ಕೂಡ ಒಂದು ಕಾರ್ಯವೂ ಪೂರ್ಣವಾಗಿಲ್ಲ. ಬಹುಶಃ 4ನೇ ಯೋಜನೆಯೊಳಗಾದರೂ ಪೂರ್ತಿಯಾಗುತ್ತದೆ ಎನ್ನುವ ಭರವಸೆಯೂ ಇಲ್ಲ. ಭಾರಿ ಪ್ರಮಾಣದ ಯೋಜನೆಗಳಾದ ಅಪ್ಪರ್ ಕೃಷ್ಣ ಮತ್ತು ಕಾಳಿನದಿ ಯೋಜನೆಗಳಿಗೆ ಅಗಬೇಕಾದ ದುಡ್ಡನ್ನೆಲ್ಲಾ ಹೇಗೆ ಒದಗಿಸುತ್ತೀರಿ ಎಂದು ನಾನು ಇವತ್ತಿನ ದಿವಸ ಕೇಳಬೇಕಾಗಿದೆ.

4ನೇ ಯೋಜನೆಯು ಸಣ್ಣ ಮತ್ತು ಮಧ್ಯಮ ಯೋಜನೆಯ ನೀರಾವರಿಯಲ್ಲಿ ಹೆಚ್ಚಿನ ಸಾಧ್ಯತೆಯಾಗಬೇಕು. ಇಲ್ಲದಿದ್ದರೆ ರೈತರಿಗೆ ನಾವು ಏನೇನೂ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಈಗಾಗಲೇ ತೆಗೆದುಕೊಂಡಿರತಕ್ಕಂಥ ಸಣ್ಣ ಮತ್ತು ಮಧ್ಯಮ ಪ್ರಮಾಣದ ಯೋಜನೆಗಳನ್ನು ಮುಗಿಸಲಿಕ್ಕೆ ದುಡ್ಡು ಬೇಕು, ಉತ್ಪನ್ನ ಹೆಚ್ಚಲಿಕ್ಕೆ ದುಡ್ಡು ಬೇಕು, ಅವುಗಳನ್ನೆಲ್ಲಾ ಪರಿಶೀಲನೆ ಮಾಡಿ ಅಷ್ಟೊಂದು ಅಗಾಧವಾದ ಧನಸಹಾಯವನ್ನು ಪಡೆಯಲಿಕ್ಕೆ ಮೈಸೂರು ಅರ್ಹವಿದೆ ಎಂಬ ಒಂದು ನಿಲುವನ್ನು ತೆಗೆದುಕೊಂಡು ಒಂದು "strong case" ಮಾಡಿ ನೀವು ಕೇಂದ್ರ ಸರ್ಕಾರಕ್ಕೆ ಹೇಳಬೇಕು. You must say that the State is entitled for such huge amounts and the State deserves it. ಬಹುಶ, ಸರ್ಕಾರ ಮನಸ್ಸಿಗೆ ಇದನ್ನು ಹಚ್ಚಿಕೊಂಡಿಲ್ಲ ಎಂದು ನನಗಾದರೂ ಅನ್ನಿಸುತ್ತದೆ. ಶೇಕಡ 70ಕ್ಕಿಂತಲೂ ಹೆಚ್ಚು ಜನಗಳಿಗೆ ನೇರವಾಗಿ ಸಹಾಯವಾಗುವಂಥ ಕೆಲಸಕಾರ್ಯಗಳನ್ನು ತಾವು ನಿಜವಾಗಿಯೂ, ನಿಷ್ಪಕ್ಷಪಾತವಾಗಿಯೂ, ಪ್ರಾಮಾಣಿಕತೆಯಿಂದಲೂ, ದಕ್ಷತೆಯಿಂದಲೂ ಮಾಡಿದರೆ ಬಹುಶಃ 4ನೇ ಯೋಜನೆಯು ಸಂಪೂರ್ಣವಾಗುತ್ತದೆ. ಇವತ್ತು ಯೋಜನೆ ಯಶಸ್ವಿಯಾಗಿ ಆದರೆ ಅದರಿಂದ ಒಂದು ಪ್ರತಿಫಲ ಬಂದು ಅದರ ಪರಿಣಾಮ ಜನತೆಯ ಮೇಲೆ ಬೀರದಿದ್ದರೆ ಈ ಕಷ್ಟಕಾರ್ಪಣ್ಯಗಳು ಏಕೆ ಇರುತ್ತಿದ್ದವು ? ಇವತ್ತಿನದಿವಸ ಮಾನ್ಯ ಮಿತ್ರರಾದ ಶ್ರೀ ಹೆಗಡೆಯವರು ಏನೇನೋ ಪ್ರಲಾಪ ಮಾಡಿದರು. ಹಾಗೂ ಸತ್ಯಕ್ಕೆ ದೂರವಾದ ವಿಚಾರವನ್ನು ಹೇಳಿದರು. ಜವಾಬ್ದಾರಿಯುತವಾದ ಸ್ಥಾನದಲ್ಲಿರತಕ್ಕಂಥ ಸರ್ಕಾರದವರು—ಒಬ್ಬರು ಈ ರೀತಿ ವಾಸ್ತವವಲ್ಲದೇ ಇರತಕ್ಕಂಥ ಅಂಶವನ್ನು ಎತ್ತಿಹಿಡಿಯತಕ್ಕಂಥದ್ದು ನಮ್ಮ ಜನತೆಗೆ ದ್ರೋಹ ಮಾಡಿದಂತೆ ಎಂಬುದನ್ನು ನಾವು ತಿಳಿಯಬೇಕು.

2ನೇ ಮತ್ತು 3ನೇ ಯೋಜನೆಗಳಲ್ಲಿ 143 ಕೋಟಿ ರೂಪಾಯಿಗಳನ್ನು ಪ್ಲಾನ್‌ನೊಳಗೆ ಖರ್ಚು ಮಾಡಿದ್ದಾರೆ. ಇದರ ಹೊರಗಡೆ ನೂರಾರು ಕೋಟಿ ರೂಪಾಯಿಗಳನ್ನು ಖರ್ಚುಮಾಡಿದ್ದಾರೆ. ಇದರಿಂದ ಎಷ್ಟರಮಟ್ಟಿಗೆ ಜನರ ಆರ್ಥಿಕ ಮಟ್ಟವನ್ನು ಮೇಲಕ್ಕೆ ತರಲು ಪ್ರಯತ್ನ ಮಾಡದ್ದಾರೆ ಅನ್ನತಕ್ಕಂಥ ಸಮಸ್ಯೆ ನಮ್ಮ ಮುಂದೆ ಇದೆ. ಈ ಸಮಸ್ಯೆಗಳನ್ನು ನಿವಾರಣೆ ಮಾಡಬೇಕು. 4ನೇ ಯೋಜನೆಯಲ್ಲಿ ಯಾವ ಯಾವ ಭಾಗದಲ್ಲಿ ಯಾವ ಯಾವ ಕೆಲಸಗಳನ್ನು ಮಾಡುವುದಕ್ಕೆ ಸಾಧ್ಯವಿದೆ ಎಂಬುದರ ವಿಚಾರ ನಮಗೆ ಗೊತ್ತಿಲ್ಲ, 4ನೇ ಯೋಜನೆಯ ಖರ್ಚಿನ ಗಾತ್ರವನ್ನು ನಿರ್ಧರಿಸುವಾಗ ಈ ಮಾನ್ಯ ಸಭೆಯಲ್ಲಿ ಒಂದು ಚರ್ಚೆ ಮಾಡಲು ಅವಕಾಶ ಮಾಡಿಕೊಡಬೇಕಾಗಿತ್ತು. 3ನೇ ಯೋಜನೆಯನ್ನು ಶುರುಮಾಡುವುದಕ್ಕೆ ಮೊದಲು ಬಹುಶಃ ಈ ಮಾನ್ಯ ಸಭೆಗೆ ಆ ಯೋಜನೆಯ ರೂಪರೇಖೆಗಳನ್ನು ಚರ್ಚೆ ಮಾಡಲು ಒಂದು ಅವಕಾಶ ಮಾಡಿಕೊಡರಾಗಿತ್ತು. ಮತ್ತು ಈ ಮಾನ್ಯ ಸಭೆಯ ಸದಸ್ಯರ ಅಭಿಪ್ರಾಯವನ್ನು ತೆಗೆದುಕೊಳ್ಳಲಾಗಿತ್ತು. ಅದು ಮಾನ್ಯ ಸಭಾಪತಿಗಳಿಗೂ ಗೊತ್ತಿರಬೇಕು. ಕೆಲವೇ ಭಾಗಗಳಲ್ಲಿ ಅನೇಕ ಕೆಲಸಗಳನ್ನು ತೆಗೆದುಕೊಂಡಿದ್ದಾರೆ. ಇನ್ನು ಕೆಲವು ಭಾಗಗಳಲ್ಲಿ ಕೆಲಸಗಳನ್ನು ತೆಗೆದುಕೊಳ್ಳಲಿಕ್ಕೆ ಸಾಧ್ಯತೆ ಇದ್ದರೂ ಕೂಡ ತೆಗೆದುಕೊಂಡಿಲ್ಲ. ಈ ಒಂದು ಯೋಜನೆಯಲ್ಲಿ ಸರಿಯಾದ ಸಮನ್ವಯ ರೀತಿ ಇಲ್ಲದೆ ಹೋದರೆ ಬಹುಶಃ ರಾಜ್ಯದಲ್ಲಿ ಒಂದೇ ಮುಖವಾದ ಪ್ರಗತಿಯಾಗುವುದಕ್ಕೆ ಸಾಧ್ಯವಿಲ್ಲ. ಈ ಒಂದು ಕೊರತೆಯನ್ನು ನೀಗಲಿಕ್ಕೆ 4ನೇ ಪಂಚವಾರ್ಷಿಕ ಯೋಜನೆಯಲ್ಲಿ ಎಲ್ಲೆಲ್ಲಿ ಸಾಧ್ಯವಿದೆಯೋ ಅಲ್ಲಲ್ಲಿ ಪರಿಹಾರ ಕಾಮಗಾರಿಗಳನ್ನು ಕೈಗೊಂಡಿಲ್ಲ. ಅವುಗಳ ಬಗ್ಗೆ ಇವರು ಪ್ರಾಮುಖ್ಯತೆಯನ್ನು ಕೊಟ್ಟಿದ್ದಾರೆಯೇ ಅಂದರೆ ಅದೇನೂ ಇಲ್ಲ. ರಾಜ್ಯದಲ್ಲಿ ಈ ಒಂದು ವಿಚಾರದ ಬಗ್ಗೆ ಸಮನ್ವಯ ರೀತಿಯನ್ನು ತಾಳಿದ್ದಾರೆಯೇ ಎಂದು ನಾನು ಪ್ರಶ್ನೆ ಮಾಡುತ್ತೇನೆ. ಇವರು ಏನು ವೆಚ್ಚ ಮಾಡಿದ್ದಾರೆ ಅದಕ್ಕೆ ತಕ್ಕ ಪ್ರತಿಫಲ ಸಿಕ್ಕಿದೆಯೇ, ಎಂದರೆ ಅದೂ ಇಲ್ಲ. ಅನೇಕ ಮಾನ್ಯ ಸದಸ್ಯರು ಬಹಳ ಸಾರಿ ಇಲ್ಲ ಇದನ್ನು ಪ್ರಸ್ತಾಪ ಮಾಡಿದ್ದಾರೆ. ಒಂದು ವೇಳೆ ಖರ್ಚು ಮಾಡಿದ ಹಣಕ್ಕೆ ಸರಿಯಾಗಿ ಪ್ರತಿಫಲ ದೊರೆಯದೇ ಹೋದರೆ ಅದನ್ನು ಸರಿಯಾದ ರೀತಿಯಲ್ಲಿ ವಿಮರ್ಶೆ ಮಾಡುವುದಕ್ಕಾಗಿ ಒಂದು ಅಗತ್ಯವಾದ ಸಮಿತಿಯನ್ನು ನೇಮಕ ಮಾಡಬೇಕು. ಸರ್ಕಾರದ ಮೆಷಿನರೀಸ್‌ನಂತೆ ಇರತಕ್ಕ ಸಣ್ಣ ಸಣ್ಣ ಇಲಾಖೆಗಳು ದಕ್ಷತೆಯಿಂದ ಕೆಲಸ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು.

(ಶ್ರೀ ಜಿ. ವಿ. ಗೌಡ)

ಈಗ 4ನೇ ಪಂಚವಾರ್ಷಿಕ ಯೋಜನೆಯಲ್ಲಿ ಒಂದು ಎವಾಲ್ಯುಯೇಷನ್ ಕಮಿಟಿಯನ್ನು ಸ್ಥಾಪನೆ ಮಾಡಿದ್ದಾಗಿದೆಯೆಂದು ಹೇಳುತ್ತಿದ್ದಾರೆ, ಮೂರು ಪಂಚವಾರ್ಷಿಕ ಯೋಜನೆಗಳು ಮುಗಿದಮೇಲೆ ಇವರು ಮಾಡಿರತಕ್ಕ ಕೆಲಸಗಳ ಮೇಲೆ ಎಷ್ಟರಮಟ್ಟಿಗೆ ಹಣ ಖರ್ಚಾಗಿ ಪರಿಣಾಮಕಾರಿಯಾಗಿದೆ ಎಂಬುದನ್ನು ಹೇಳುವುದಕ್ಕೆ ಹೊರಟಿದ್ದಾರೆ. ಇದರಿಂದೇನೂ ಪ್ರಯೋಜನವಿಲ್ಲ. ಹಣ ಖರ್ಚಾದ ಆರು ತಿಂಗಳು ಅಥವಾ ಒಂದು ವರ್ಷದಲ್ಲಿ ಏನಾದರೂ ಪ್ರತಿಫಲವಾಗದೆ ಅದರಲ್ಲಿ ಏನಾದರೂ ದೋಷಗಳು ಕಂಡುಬಂದರೆ ಅವನ್ನು ಕೂಡಲೇ ಸರಿಮಾಡಿಕೊಳ್ಳಬೇಕು. ಅಂತಹ ತಪ್ಪುಗಳನ್ನು ಕಂಡು ಹಿಡಿದು ಹೇಳತಕ್ಕ ಎದೆಗಾರಿಕೆ ಇವರಲ್ಲಿ ಯಾರಿಗೂ ಬರುವುದಿಲ್ಲವೆಂದು ನಾನು ಈ ಸಂದರ್ಭದಲ್ಲಿ ಇಲ್ಲಿ ತಿಳಿಸಬೇಕಾಗಿದೆ. ನಮ್ಮ ದೇಶದಲ್ಲಿ ಮಾನವಶಕ್ತಿಯನ್ನು ಉಪಯೋಗಿಸುವ ವ್ಯವಸ್ಥೆ ಇನ್ನು ಹೆಚ್ಚು ಪ್ರಮಾಣದಲ್ಲಿ ಆಗಬೇಕು. ಏಕೆಂದರೆ, ದೇಶದಲ್ಲಿ ಈಗಾಗಿರತಕ್ಕ ಅಭಿವೃದ್ಧಿ ಕೆಲಸ ಕಾರ್ಯಗಳು ಬಹಳ ಕಡಿಮೆಯಾಗಿವೆ.

ಇನ್ನು ಆಹಾರ ವಿತರಣೆಯ ಬಗ್ಗೆ ನನ್ನ ಅನೇಕ ಮಿತ್ರರು ಬಹಳವಾಗಿ ಪ್ರಸ್ತಾಪ ಮಾಡಿದ್ದಾರೆ. ದೇಶದ ಜನತೆಗೆ ಆಹಾರ ವಿತರಣೆ ಸರಿಯಾಗಿ ಆಗುತ್ತಿಲ್ಲವೆಂದು ನಾನು ಹೇಳಬೇಕಾಗಿದೆ. ಇವತ್ತು ಆಹಾರ ಮಂತ್ರಿಗಳಾದ ಶ್ರೀ ಜತ್ತಿಯವರು ಈ ವರ್ಷದಲ್ಲಿ ಸೆಪ್ಟೆಂಬರ್ ಅಥವಾ ಡಿಸೆಂಬರ್ ತಿಂಗಳೊಳಗಾಗಿ ಹೆಚ್ಚಿನ ಆಹಾರ ಸಂಗ್ರಹಣೆ ಕಾರ್ಯವನ್ನು ಮಾಡಿ ಮುಗಿಸುತ್ತೇವೆಂದು ಹೇಳುತ್ತಿದ್ದಾರೆ. ಆದರೆ ಈ ಒಂದು ಕಾರ್ಯವನ್ನು ಇನ್ನೂ ಬೇಗ ಮಾಡಿದ್ದರೆ ಏನ ಆಗುತ್ತಿತ್ತೆಂದು ನಾನು ಪ್ರಶ್ನೆ ಮಾಡಬೇಕಾಗಿದೆ, ರೈತನಾದವನು ಒಂದು ಕ್ವಿಂಟಾಲ್‌ಗೆ ಶೇಕಡ 45 ಅಥವಾ 50ರಷ್ಟು ಬೆಲೆ ಜಾಸ್ತಿ ಕೊಡಬೇಕೆಂಬ ಒಂದು ತತ್ವವನ್ನು ಇವರು ಪರಿಪಾಲನೆ ಮಾಡುವುದಾದರೆ, ಅದು ಎಷ್ಟರ ಮಟ್ಟಿಗೆ ಸಮಂಜಸವಾಗಿರುತ್ತದೆಂಬುದನ್ನು ಸರ್ಕಾರದವರು ಯೋಚನೆ ಮಾಡಬೇಕು. ರೈತರಿಗೆ ಮಾತ್ರ ಅನೇಕ ರೂಪಗಳಲ್ಲಿ ಸರ್ಕಾರಕ್ಕೆ ನೆರವಾಗಿ ಎಂದು ಹೇಳುತ್ತಾರೆಯೇ ಹೊರ್ತು ಬೇರೆ ವರ್ಗಗಳವರಿಗೆ ಇವರು ಏಕೆ ಆ ರೀತಿ ಹೇಳಬಾರದು ? ವ್ಯಾಪಾರಗಾರರಿಗೂ ಸೇಕಡ ಐದು ಅಥವಾ ಹತ್ತರಷ್ಟನ್ನು ಅವರ ಲಾಭದಲ್ಲಿ ಬಿಟ್ಟು, ನ್ಯಾಯವಾದ ಬೆಲೆಯಲ್ಲಿ ಆಹಾರ ಪದಾರ್ಥಗಳನ್ನು ಮಾರಬೇಕೆಂದು ಏಕೆ ಹೇಳಬಾರದು ? ಅವರನ್ನೂ ಸಹ ಇವರು ಆ ರೀತಿ ಹತೋಟಿಯಲ್ಲಿಡಬೇಕು. ಇವರು ರೈತರಿಂದ ಆಹಾರ ಪದಾರ್ಥ ತೆಗೆದು ಕೊಳ್ಳುವಾಗ 50 ರೂಪಾಯಿ ಕೊಟ್ಟರೆ ಬೇರೆಯವರಿಗೆ 60-70 ರೂಪಾಯಿಗಳಂತೆ ಮಾರಿರುವ ಪ್ರಸಂಗಗಳು ಎಷ್ಟೋ ಇವೆ. ರೈತರೊಬ್ಬರನ್ನೇ ತ್ಯಾಗಮಾಡಿ ಎಂಬುದಾಗಿ ಇವರು ಹೇಳುವುದಕ್ಕೆ ಬದಲಾಗಿ ದೇಶಾಭಿವೃದ್ಧಿ ಕೆಲಸ ಕಾರ್ಯಗಳಿಗಾಗಿ ಎಲ್ಲ ವರ್ಗಗಳವರನ್ನೂ ಅದರಲ್ಲೂ ಬಹು ಮುಖ್ಯವಾಗಿ ವ್ಯಾಪಾರ ವರ್ಗದವರನ್ನೂ ಹಾಗೂ ಕೈಗಾರಿಕೋದ್ಯಮಿಗಳನ್ನು ಸಹ ತ್ಯಾಗ ಮಾಡಬೇಕು ಎಂದು ಏಕೆ ಕೇಳಬಾರದು ? ರೈತರು ಮಾತ್ರ ಸರ್ಕಾರ ನಿಗದಿ ಮಾಡಿದ ಬೆಲೆಗೆ ಅವರು ಬೆಳೆದಂತಹ ಆಹಾರ ಪದಾರ್ಥಗಳನ್ನು ಕೊಡಬೇಕು ಎಂಬುದಾಗಿ ಇವರು ಯಾವ ರೀತಿ ವ್ಯವಸ್ಥೆ ಮಾಡಿದ್ದಾರೋ ಅದೇ ರೀತಿಯಲ್ಲಿ ಪ್ರತಿಯೊಂದು ವರ್ಗದವರೂ ಸರ್ಕಾರ ನಿಗದಿ ಮಾಡಿದಂತಹ ಬೆಲೆಗೇ ಆಹಾರ ಪದಾರ್ಥಗಳೇ ಆಗಲೀ ಅಥವಾ ಬೇರೆ ಯಾವ ವಸ್ತುವೇ ಆಗಲಿ ದೇಶದ ಜನತೆಗೆ ಒದಗಿಸಬೇಕೆಂದು ಕಡ್ಡಾಯ ಮಾಡಬೇಕು. ಆಗ ಇದರಿಂದ ದೇಶದ ಜನತೆಗೂ ಹಾಗೂ ಸರ್ಕಾರಕ್ಕೂ ಒಳ್ಳೆಯದಾಗುತ್ತದೆ. ಅಂದರೆ ರೈತರು ಕೊಡಬಾರದು, ಅವರ ಸಹಕಾರ ಸರ್ಕಾರಕ್ಕೆ ಸಿಗಬಾರದೆಂದು ನಾನು ಹೇಳುತ್ತಾ ಇಲ್ಲ. ಸರ್ಕಾರದ ಒಂದು ನೀತಿ, ಎಲ್ಲರಿಗೂ ಅನ್ವಯವಾಗುವ ರೀತಿಯಲ್ಲಿರಬೇಕು. ಕಾರ್ಮಿಕರ ಯೋಗ ಕ್ಷೇಮದ ಬಗ್ಗೆ ಮತ್ತು ನಿರುದ್ಯೋಗ ಸಮಸ್ಯೆಯ ಬಗ್ಗೆ ಇದರ ಲಕ್ಷ್ಯ ಎಷ್ಟು ಕಡಿಮೆ ಎಂದು ಹೇಳಿದರೂ ಸಾಲದು ಎಂದು ನಾನು ತಿಳಿದುಕೊಂಡಿದ್ದೇನೆ. ರಾಜ್ಯಪಾಲರ ಭಾಷಣದಲ್ಲಿ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅದು ಒಂದು ಪಟ್ಟಿಯಂತಿದೆ. ಇದರಲ್ಲಿ ಮೂಲಭೂತವಾಗಿ ನಾಲ್ಕನೇ ಪಂಚವಾರ್ಷಿಕ ಯೋಜನೆಯಲ್ಲಿ ಸರ್ಕಾರದವರು ಕೈಗೊಳ್ಳತಕ್ಕ ಕಾರ್ಯಗಳನ್ನು ನಮೂದು ಮಾಡಿದ್ದಾರೆ. ಅದನ್ನು ನೋಡಿದರೆ ಜನತೆಗೆ ಒಂದು ಆಶಾದಾಯಕ ಪರಿಸ್ಥಿತಿ ಉಂಟಾಗುತ್ತದೆ. ಇನ್ನು ಕೆಲವು ವಿಚಾರಗಳನ್ನು ಅವಲೋಕಿಸಿದರೆ ನಿರಾಶಾದಾಯಕವಾದ ಪರಿಸ್ಥಿತಿಯನ್ನುಂಟು ಮಾಡುವಂತಿದೆ. ಇದು ನಿಜವಾಗಿ ನಮ್ಮ ದೇಶದ ಹಿತದೃಷ್ಟಿಯಿಂದ ಸರಿಯಲ್ಲವೆಂದು ನಾನು ಹೇಳಬೇಕಾಗಿದೆ.

ಇನ್ನು ಹಿಂದುಳಿದ ವರ್ಗಗಳ ಕಲ್ಯಾಣ ಸಾಧನೆ ವಿಷಯವಾಗಿ ಹೇಳುವುದಾದರೆ, ಈ ಬಗ್ಗೆ ಯಾರೂ ಇನ್ನೂ ಸರಿಯಾಗಿ ನಿರ್ಧರಿಸಲಿಲ್ಲ. ಇವರು ಏನು ಕಲ್ಯಾಣ ಸಾಧನೆ ಮಾಡಿದ್ದೇವೆ ಎಂದು ಹೇಳುತ್ತಾರೋ ಅದಷ್ಟೂ ಮಂಕುತನದ ಪರಮಾವಧಿ ಎಂದು ಹೇಳಬೇಕಾಗುತ್ತದೆ. ಇವರು

ಮಾಡಿರುವುದು ಯಾರು ಆರ್ಥಿಕವಾಗಿ ಹಿಂದುಳಿದಿದ್ದಾರೋ ಅವರನ್ನು ಸಾಮಾಜಿಕವಾಗಿ ಶೈಕ್ಷಣಿಕವಾಗಿ ಹಿಂದುಳಿದವರು ಎಂಬುದಾಗಿ ತೀರ್ಮಾನ ಮಾಡಿದ್ದಾರೆ. ಹಿಂದುಳಿದವರ್ಗದವರನ್ನು ಉದ್ಧಾರ ಮಾಡತಕ್ಕಂಥಾದ್ದು ರಾಜ್ಯ ಸರ್ಕಾರದವರ ಮೇಲೆ ಇರತಕ್ಕ ಹೊಣೆ. 1,200 ರೂಪಾಯಿಗಳ ಆದಾಯಕ್ಕಿಂತ ಕಡಿಮೆ ಇರುವವರೆಲ್ಲರೂ ಬ್ಯಾಕ್‌ವರ್ಡ್ ಎಂಬುದಾಗಿ ಹೇಳಿದರೆ ಅಂತಹವರನ್ನು ನಿಜವಾಗಿ ಇವರು ಉದ್ಧಾರ ಮಾಡುವುದಕ್ಕೆ ಹೇಗೆ ಸಾಧ್ಯ! ಇಂತಹ ಒಂದು ಸಂದಿಗ್ಧ ಸಮದಲ್ಲಿ ಬ್ಯಾಕ್‌ವರ್ಡ್ ಕ್ಲಾಸ್ ಯಾರು ಎಂಬುದನ್ನು ನಿರ್ಧರಿಸುವುದಕ್ಕೆ ಖಂಡಿತವಾಗಿ ಸಾಧ್ಯವಿಲ್ಲ. ಇಂಥಾದ್ದನ್ನೇ ಇನ್ನೂ ಇದುವರೆಗೆ ನಿರ್ಧಾರ ಮಾಡುವುದಕ್ಕೆ ಶಕ್ತಿ ಇಲ್ಲದ ಈ ಸರ್ಕಾರ ಈಗ ಹಿಂದುಳಿಂದ ವರ್ಗಗಳವರ ಕಲ್ಯಾಣ ಸಾಧನೆ ಮಾಡಲು ನಿರತರಾಗಿದ್ದೇವೆಂದು ಹೇಳಿದರೆ ಅದರಿಂದ ಇನ್ನು ಎಷ್ಟರ ಮಟ್ಟಿಗೆ ಒಳ್ಳೆಯದಾಗುತ್ತದೆ ಎಂದು ನಾನು ತಮ್ಮ ಮೂಲಕ ಸರ್ಕಾರದವರನ್ನು ಕೇಳುತ್ತೇನೆ. ಆದ್ದರಿಂದ ಈಗ ಪರಿಸ್ಥಿತಿ ಬಹಳ ಕೆಟ್ಟುಹೋಗಿದೆ. ಅಭಾವ ಪರಿಸ್ಥಿತಿಯುಂಟಾದ ಮೇಲೆ ಅಕ್ಟೋಬರ್ ಮತ್ತು ನವಂಬರ್ ತಿಂಗಳುಗಳಲ್ಲಿ ಸರ್ಕಾರಕ್ಕೆ ಅನೇಕ ಸಮಿತಿಗಳು ಎಷ್ಟೋ ವರದಿಗಳನ್ನು ಆ ಅಭಾವ ಪರಿಹಾರಕ್ಕಾಗಿ ಸಲ್ಲಿಸಿದ್ದರೂ ಸರ್ಕಾರದವರು ಕೈಗೊಳ್ಳತಕ್ಕ ಕಾರ್ಯಗಳು ಫಲಕಾರಿಯಾಗುತ್ತಾ ಇಲ್ಲ. ಸುಮಾರು ಎರಡು ಕೋಟಿ ರೂಪಾಯಿಗಳನ್ನು ಮೈನರ್ ಇರ್ರಿಗೇಷನ್ ವರ್ಕ್‌ಗೆ ಎಂದು ಒದಗಿಸಿದ್ದರೂ ಜೂನ್ ಮುಗಿಯುವುದರೊಳಗೆ ಎಲ್ಲ ಕಾಮಗಾರಿಗಳನ್ನು ಕೈಗೊಳ್ಳುತ್ತೇವೆಂಬ ಆಶ್ವಾಸನೆಯನ್ನು ಜನತೆಗೆ ಸರ್ಕಾರ ಕೊಟ್ಟಿದ್ದರೂ ಆ ಬಾಬಿನಲ್ಲಿ ಯಾವ ತರಹ ಕೆಲಸವೂ ಪ್ರಾರಂಭವಾಗಿಲ್ಲ. ತ್ವರಿತವಾಗಿ ನಡೆದಿಲ್ಲ. ಅದೇನು ಕಾರಣವೋ ನನಗಂತೂ ಅರ್ಥವಾಗಿಲ್ಲ. ಸಂಬಂಧಪಟ್ಟ ಚೀಫ್ ಇಂಜಿನಿಯರುಗಳು ರಿಕಾರ್ಡುಗಳನ್ನು ಕೊಟ್ಟಿದ್ದಾರೋ ಇಲ್ಲವೋ ಗೊತ್ತಿಲ್ಲ. ದೇಶದ ಯಾವ ಭಾಗದಲ್ಲಿಯೂ ಕೂಡ ಈ ಒಂದು ತುರ್ತುಪರಿಸ್ಥಿತಿಯಲ್ಲಿ ಸರಿಯಾಗಿ ಕೆಲಸಕಾರ್ಯಗಳು ಆಗಿಲ್ಲ. ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸಾಯಿಲ್ ಕನ್ಸರ್‌ವೇಷನ್ ಡಿ-ಸಿಲ್ಟಿಂಗ್ ಮುಂತಾದ ಏನೇನೋ ಕಾರ್ಯಗಳನ್ನು ಮಾಡಬೇಕೆಂದು ತೀರ್ಮಾನ ಮಾಡಿದ್ದಾರೆ. ಆದರೆ ಅನೇಕ ಕೆಲಸ ಕಾರ್ಯಗಳಿಗೆ ಇನ್ನು ಹಣದ ಮಂಜೂರಾತಿ ದೊರೆಯದೇ ಇರತಕ್ಕದ್ದು, ಅನೇಕ ಕೆಲಸ ಕಾರ್ಯಗಳಿಗೆ ಹಣದ ಮಂಜೂರಾತಿ ದೊರಕಿದ್ದರೂ ಅವನ್ನು ಇನ್ನೂ ತೆಗೆದುಕೊಳ್ಳದೇ ಇರತಕ್ಕದ್ದು—ಇವೆಲ್ಲವನ್ನೂ ನೋಡಿದರೆ ನಿಜವಾಗಿ ಬಹಳ ವಿಷಾದವಾಗುತ್ತದೆ. ಇಂತಹ ಒಂದು ಅಭಾವ ಪರಿಸ್ಥಿತಿಯಲ್ಲಿ ಸಾಮಾನ್ಯ ಜನತೆಗೆ ಬೇಕಾದಂಥ ನ್ಯಾಯವನ್ನು ಕಲ್ಪಿಸುವುದರಲ್ಲಿ ಈ ಸರ್ಕಾರ ಅಸಮರ್ಥತೆಯಿಂದ ಕೂಡಿದೆ. ಆದ್ದರಿಂದ ಈ ರಾಜ್ಯಪಾಲರ ಭಾಷಣವನ್ನು ನಾನು ಅನುಮೋದನೆ ಮಾಡುವುದಕ್ಕೆ ಸಾಧ್ಯವಿಲ್ಲ.

ಇಷ್ಟು ಹೇಳಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಟಿ. ಎನ್. ಮಾದಪ್ಪಗೌಡ (ನಾಗಮಂಗಲ).—ಅಧ್ಯಕ್ಷರೇ, ಮಾಮೂಲಿನಂತೆ ಈ ವರ್ಷವೂ ರಾಜ್ಯಪಾಲರು ಅವರ ಭಾಷಣದ ಒಂದು ಪ್ರತಿಯನ್ನು ಪಟ್ಟಿಯ ರೂಪದಲ್ಲಿ ನಮ್ಮ ಮುಂದಿಟ್ಟಿದ್ದಾರೆ. ದೇಶದಲ್ಲಿ ಈ ವರ್ಷ ಬಂದಿರತಕ್ಕ ಒಂದು ಮಹಾವಿಪತ್ತು ಏನಿದೆ ಆ ವಿಚಾರದಲ್ಲಿ ಅವರು ಎಳ್ಳಷ್ಟು ಇದರಲ್ಲಿ ಏನೂ ಹೇಳಲಿಲ್ಲ. ಜೊತೆಗೆ ನಮ್ಮ ಮಂಡ್ಯ ಜಿಲ್ಲೆಯನ್ನು ಇದು ಒಂದು ಸರ್‌ಪ್ಲಸ್ ಜಿಲ್ಲೆ, ವಿಶ್ವೇಶ್ವರಯ್ಯ ನಾಲಾ ಹರಿಯುತ್ತದೆ, ಆದ್ದರಿಂದ ಇದು ಒಂದು ಸಂಪದ್ಭರಿತವಾದ ಜಿಲ್ಲೆ ಮೈಸೂರಿನಿಂದ ಬೆಂಗಳೂರಿಗೆ ಬರತಕ್ಕವರಿಗೆ ಮಂಡ್ಯದಲ್ಲಿ ಉದ್ದಕ್ಕೂ ಪಚ್ಚೆ ಹಸರು ಕಾಣುತ್ತದೆ. ಬರ ಏನೂ ಇಲ್ಲವೆಂಬ ಅಭಿಪ್ರಾಯ ಅನೇಕರಿಗೆ ಬಂದಿದೆ. ಅದು ಮಂತ್ರಿಗಳಿಗೂ ಇದೆ, ಮಾನ್ಯ ಸದಸ್ಯರನೇಕರಿಗೂ ಆ ಒಂದು ಭಾವನೆ ಇದೆ. ಆದರೆ ಈ ಜಿಲ್ಲೆಯಲ್ಲಿರತಕ್ಕ 1600 ಹಳ್ಳಿಗಳ ಪೈಕಿ ಕೇವಲ 550 ಹಳ್ಳಿಗಳಿಗೆ ಮಾತ್ರ ಈ ವಿಶ್ವೇಶ್ವರಯ್ಯ ನಾಲೆಯ ಪ್ರಯೋಜನ ದೊರಕಿದೆ. ಕೇವಲ ಮೂರನೆಯ ಒಂದು ಭಾಗ ಪ್ರದೇಶ ಮಾತ್ರ ಅಂತಹ ಒಂದು ಸವಲತ್ತನ್ನು ಪಡೆದುಕೊಂಡಿದೆ. ಇನ್ನು ಬಾಕಿ ಪ್ರದೇಶವೆಲ್ಲಾ ಬೆಂಗಾಡು ಪ್ರದೇಶ. ಆ ಬೆಂಗಾಡು ಪ್ರದೇಶದಲ್ಲಿ ನಾಗಮಂಗಲ, ಕೃಷ್ಣರಾಜಪೇಟೆಯ ಕೆಲವು ಭಾಗಗಳು, ಪಾಂಡವಪುರ ಮತ್ತು ಮಂಡ್ಯದ ಬಸರಾಳು ದುದ್ದ ಮುಂತಾದ ಹೋಬಳಿಗಳು ಈ ಜಿಲ್ಲೆಯಲ್ಲಿ ಸೇರಿವೆ. ಅಂದಮೇಲೆ ಇವಕ್ಕಿಂತಲೂ ಕೀಳುಪ್ರದೇಶ, ದೇಶದ ಮತ್ತೆಲ್ಲೂ ಇಲ್ಲವೆಂದು ನನ್ನ ಭಾವನೆ. ಇದನ್ನು ನೋಡುವವರಿಗೆ ಆ ಭಾವನೆ ಖಂಡಿತವಾಗಿ ಬರತಕ್ಕದ್ದು ಸರಿಯೆಂದು ನಾನು ತಿಳಿದುಕೊಂಡಿದ್ದೇನೆ. ಇನ್ನು ಈ ಸಾರಿ ಬತ್ತ ಲೆವಿ ವಸೂಲು ಮಾಡುತ್ತೇವೆಂದೂ, ಮತ್ತು ಸುಮಾರು ಎರಡೂವರೆ ಲಕ್ಷ ಕ್ವಿಂಟಾಲನ್ನು ವಸೂಲು ಮಾಡುತ್ತೇವೆಂದು ಇವರು ಹೇಳುತ್ತಿದ್ದಾರೆ. ಇವತ್ತು ನಮ್ಮಲ್ಲಿ ಒಂದು ಕಾಳೂಕೂಡ ಬೆಳೆಯಾಗಿಲ್ಲ. ದನಕರುಗಳಿಗೆ ಮೇವು ಇಲ್ಲ. ಕುಡಿಯುವುದಕ್ಕೆ ನೀರು ಇಲ್ಲ. ಆದುದರಿಂದ ಈ ಲೆವಿಯಲ್ಲಿ ವಸೂಲಿಯಾದದ್ದು ಅಲ್ಲಿಗೇ ಬೇಕು. ಈಗಾಗಲೇ ಶ್ರೀ ದೇವೇಗೌಡರು ಮಾತನಾಡುತ್ತಾ, ನಾಗಮಂಗಲ ಪ್ರಾಂತದ ಜನಗಳು ತಮಗೆ ಬೇಕಾದ ಸ್ಥಳಗಳಿಗೆ ಆಹಾರ ಹುಡುಕಿಕೊಂಡು

(ಶ್ರೀ ಟಿ. ಎನ್. ಮಾದಪ್ಪ ಗೌಡ)

ಹೋಗಿ ಮರದ ಕೆಳಗಡೆ ಗುಡಿಸಲು ಹಾಕಿಕೊಂಡು ಹೊಟ್ಟೆಗೆ ಹಿಟ್ಟಿಲ್ಲದೇ ಇರುವ ಪರಿಸ್ಥಿತಿ ಈಗ ಬಂದಿದೆಯೆಂದು ಹೇಳಿದ್ದಾರೆ.

ದನಕರುಗಳನ್ನು ಸಂತೆಗೆ ಹೊಡೆದು ಅಲ್ಲಿ ಅವುಗಳನ್ನು 5 ರೂಪಾಯಿ, 10 ರೂಪಾಯಿಗಳಿಗೆ ಒಂದರಂತೆ ಮಾರಾಟಮಾಡುತ್ತಿದ್ದಾರೆ. ಈಗ ಅಕಸ್ಮಾತಾಗಿ ಏನಾದರೂ ಮಳೆ ಬಂದರೆ ಭೂಮಿಯನ್ನು ಉಳುಮೆಮಾಡುವುದಕ್ಕೆ ಎರು ಕಟ್ಟಲು ರಾಸುಗಳಿಲ್ಲ. ಇಂಥಾ ಕಷ್ಟಕಾಲದಲ್ಲಿ ನಾವು ಇರುವಾಗ ಮಂಡ್ಯ ಡಿಸ್ಟ್ರಿಕ್ಟಿನಲ್ಲಿ ಬೆಳೆದಂತಹ ಅಕ್ಕಿ ಎಲ್ಲವೂ ಬೆಂಗಳೂರು ನಗರಕ್ಕೆ ಬರಬೇಕು ಹಳ್ಳಿಯ ಜನಗಳಿಗೆ ರೇಷನ್ ಕೊಡುವ ಜವಾಬ್ದಾರಿ ಸರ್ಕಾರಕ್ಕೆ ಇಲ್ಲ ಎಂದು ಹೇಳುತ್ತಾರೆ. ಇದು ಸರ್ಕಾರಿ ಅಧಿಕಾರಿಗಳು ಹೇಳತಕ್ಕಂಥ ಮಾತು. ದೇಶದ ಎಲ್ಲಾ ಜನರಿಗೂ ಬೇಕಾದ ಅನ್ನವನ್ನು ಯಾವಾಗಲೂ ಬೆಳೆದು ಕೊಡಬಲ್ಲ ರೈತ ಇವೊತ್ತು ಏನೋ ಒಂದು ಕಷ್ಟಕ್ಕೆ ಸಿಕ್ಕಿ ಅವನು ಸರ್ಕಾರದವರನ್ನು ಸಹಾಯ ಮಾಡಿ ಎಂದು ಕೇಳಿದಾಗ ಸಹಾಯ ಮಾಡದಿದ್ದರೆ ಅವನಿಗೆ ಸರ್ಕಾರದಲ್ಲಿ ವಿಶ್ವಾಸ ಹೇಗೆ ಬರುತ್ತದೆ? ಅವನಿಗೆ ಸಿಟ್ಟು ಬಂದರೆ ಏನಾಗುತ್ತದೆ ಎಂದು ಹೇಳು ವುದಕ್ಕಾಗುವುದಿಲ್ಲ. ತಿರುವಾಂಕೂರಿನಲ್ಲಿ ಜನಗಳು ಹರತಾಳವನ್ನು ಮಾಡುತ್ತಿದ್ದಾರೆ ಎಂದರೆ ಅಲ್ಲಿಗೆ ದೇಶದ ನಾನಾ ಮೂಲೆಗಳಿಂದ ಅಕ್ಕಿ ಮುಂತಾದ ಆಹಾರ ಪದಾರ್ಥಗಳು ಹೋಗುತ್ತದೆ. ಇದನ್ನು ನಾವು ಪತ್ರಿಕೆಗಳಲ್ಲಿ ಕೂಡ ಓದಿದ್ದೇವೆ. ಇಲ್ಲಿಯವರು ಒಳ್ಳೆಯವರು ಒಳ್ಳೆಯ ರೀತಿ ನೀತಿಯುಳ್ಳಂಥ ಜನರು ಎಂದು ಇವರನ್ನು ಅಷ್ಟೊಂದು ಅಸಡ್ಡೆಯಿಂದ ನೋಡುವುದಾದರೆ, ಗಂಡಾ ಗುಂಡಿಗೆ ಬಂದರೆ ಇವರೂ ದಂಗೆ ಏಳಬಹುದು. ಅದಕ್ಕೆ ಅವಕಾಶವನ್ನು ಕೊಡಬೇಡಿ. ಈಗ ನಮ್ಮ ಜಿಲ್ಲೆಯಲ್ಲಿ ಸುಮಾರು 8 ಲಕ್ಷ ಜನಗಳಿದ್ದಾರೆ. ಆ ಪೈಕಿ 5 ಲಕ್ಷ ಜನಗಳಿಗೆ ಆಹಾರವಿಲ್ಲದೆ ತೊಂದರೆಯಾಗಿದೆ. ಒಬ್ಬರಿಗೆ 16 ಔನ್ಸ್ ರೇಷನ್ನಿನಂತೆ ಲೆಕ್ಕಹಾಕಿಕೊಂಡರೆ ನಮ್ಮ ನಾಗಮಂಗಲ ತಾಲ್ಲೂಕಿಗೆ ಒಂದು ತಿಂಗಳಿಗೆ 7,500 ಕ್ವಿಂಟಾಲ್ ಆಹಾರ ಬೇಕಾಗುತ್ತದೆ. ಕಳೆದ ತಿಂಗಳು 220 ಕ್ವಿಂಟಾಲ್ ಅಕ್ಕಿಯನ್ನು ನಮ್ಮ ತಾಲ್ಲೂಕಿಗೆ ಕೊಟ್ಟಿದ್ದಾರೆ. ಈ ಅಕ್ಕಿಯನ್ನು ಕೊಡುವ ವಿಷಯದಲ್ಲಿ ಸರ್ಕಾರದವರು ಒಂದು ಆರ್ಡರನ್ನು ಮಾಡಿದ್ದಾರೆ. ಅದನ್ನು ನೋಡಿ ಅಳಬೇಕೋ ಅಥವಾ ನಗಬೇಕೋ ನನಗೆ ಗೊತ್ತಿಲ್ಲ. ಸರ್ಕಾರಿ ನೌಕರರಿಗೆ ಮಾತ್ರ ಅಕ್ಕಿಯನ್ನು ಕೊಡಬೇಕೆಂದು ಮಾಡಿದ್ದಾರೆ. ಬಾಕಿಯವರಿಗೆ ಅಕ್ಕಿಯನ್ನು ಕೊಡುವುದಿಲ್ಲ, ಈಗ ನಮ್ಮ ಕಡೆಗೆ ಗೋಧಿ ಬರುತ್ತಿಲ್ಲ. ರಾಗಿ ಇಲ್ಲ. ಜೋಳವನ್ನು ಕೊಟ್ಟರೆ ಅದನ್ನು ನಮಗೆ ತಿಂದು ರೂಢಿ ಇಲ್ಲ. ಇಂಥಾ ಕಷ್ಟಕಾಲ ದಲ್ಲಿ ಸರ್ಕಾರದವರು ಜನಗಳಿಗೆ ಆಹಾರವನ್ನು ಒದಗಿಸಲು ಸಹಾಯ ಮಾಡದಿದ್ದರೆಹೇಗೆ? ರೈತ ಆಹಾರವನ್ನು ಬೆಳೆಯದೇ ಇರುವುದಕ್ಕೆ ಕಾರಣ ಅವನು ಬೆಳೆದಂತಹ ಬೆಳೆಗೆ ಸರಿಯಾದ ಬೆಲೆ ಸಿಕ್ಕದೆ ಇರುವುದು ಒಂದು ಕಾರಣವಾಗಿದೆ. ಇವೊತ್ತು ಸರ್ಕಾರ ಆಹಾರ ಧಾನ್ಯಕ್ಕೆ ಎರಡು ಬೆಲೆಗಳನ್ನು ಏತಕ್ಕೆ ಮಾಡುತ್ತಿದ್ದಾರೆ? ಹೀಗೆ ಮಾಡಿದರೆ ಮಾರ್ಕೆಟ್ಟಿನಲ್ಲಿ ಸ್ಟೆಬಿಲಿಟಿ ಹೇಗೆ ಇರುತ್ತದೆ? ಇದರಲ್ಲಿ ಒಂದು ರೀತಿ ನೀತಿ ಹೇಗೆ ಇರುತ್ತದೆ? ವ್ಯವಸಾಯ ಮಾಡತಕ್ಕವರು ವ್ಯವಸಾಯಕ್ಕೆ ಎಷ್ಟು ಹಣವನ್ನು ಖರ್ಚುಮಾಡುತ್ತಾರೆ, ಎಷ್ಟು ಶ್ರಮ ಪಡುತ್ತಾರೆ ಎಂಬುದನ್ನು ಲೆಕ್ಕಹಾಕಿ ಅವನ ದುಡಿಮೆಗೆ ತಕ್ಕ ಪ್ರತಿಫಲವನ್ನು ಕೊಡುವುದಕ್ಕೆ ಅವನು ಬೆಳೆದಂತಹ ಮಾಲಿಗೆ ಸರಿಯಾದಂತಹ ಒಂದು ಬೆಲೆ ಸಿಕ್ಕುವಂತೆ ಮಾಡಬೇಕು. ಸರ್ಕಾರದವರು ಎತ್ತುವಳಿ ಧಾನ್ಯಕ್ಕೆ ಬೆಲೆಯನ್ನು ಕೊಡು ವಾಗ ಇಬ್ಬಂದಿತನವನ್ನು ಮಾಡಕೂಡದು. ಈಗ ಫುಡ್ ಕಾರ್ಪೋರೇಷನ್ನಿನವರು ಸಪ್ಲೈಮಾಡಿರತಕ್ಕ ಅಕ್ಕಿಯು ಒಂದು ಕೆ.ಜಿ.ಗೆ ಒಂದು ರೂಪಾಯಿಯಂತೆ ಹಳ್ಳಿಗಳಲ್ಲಿ ಮಾರಾಟವಾಗುತ್ತಿದೆ. ಕೆಲವು ಕಡೆಗಳಲ್ಲಿ ಒಂದು ಕೆ.ಜಿ.ಗೆ 80 ನಯಾ ಪೈಸೆದಂತೆ ಮಾರಾಟವಾಗುತ್ತದೆ. ನಿರ್ದಿಷ್ಟವಾಗಿ ಒಂದೇ ರೇಟನ್ನು ಏತಕ್ಕೆ ಗೊತ್ತುಮಾಡಬಾರದು ಎಂದು ನಾನು ಕೇಳುತ್ತೇನೆ. ಬೆಂಗಳೂರು ಪಟ್ಟಣದಲ್ಲಿರ ತಕ್ಕ ಜನಗಳು ಒಂದು ಕೂಗು ಹಾಕಿದರೆ ಅವರಿಗೆ ಆಹಾರವನ್ನು ಒದಗಿಸುತ್ತೀರಿ, ಅನುಕೂಲಮಾಡಿ ಕೊಡುತ್ತೀರಿ, ಆದರೆ ಹಳ್ಳಿಗಾಡಿನಲ್ಲಿರತಕ್ಕ ರೈತರಿಗೆ ಸಹಾಯ ಮಾಡುವುದಿಲ್ಲ. ಇದು ಸುತ್ರಾಂ ನ್ಯಾಯವಲ್ಲ. ದೇಶದ ಬೆನ್ನುಮೂಳೆಯಾಗಿರತಕ್ಕ ರೈತನಿಗೆ ತೊಂದರೆ ಕೊಡುವುದರಿಂದ ಭಗವಂತ ಕೂಡ ಕೋಪಮಾಡಿಕೊಂಡು ಇಂಥಾ ಮಳೆ ಬೆಳೆ ಇಲ್ಲದ ಪರಿಸ್ಥಿತಿ ಉದ್ಭವವಾಗಿದೆ ಎಂದು ಹೇಳಿದರೆ ಯಾರೂ ಅನ್ಯಥಾ ಭಾವಿಸಬಾರದು.

ಇನ್ನು ಬಾವಿಗಳ ವಿಚಾರದಲ್ಲಿ ಹೇಳುವುದಾದರೆ, ಈಗಾಗಲೇ ನಮ್ಮ ಸ್ನೇಹಿತರು ಹೇಳಿದ ಹಾಗೆ ಇಂಥಾದ್ದೆಲ್ಲಾ ಬರುವುದು ಒಳ್ಳೆಯದಕ್ಕೇ ಎಂದು ನನಗೆ ಅನಿಸುತ್ತದೆ. ಇಲ್ಲಿಯವರೆಗೂ ಬಾವಿಗಳ ವಿಚಾರದಲ್ಲಿ ಗಮನವನ್ನೇ ಕೊಡದ ಜನ ಇವೊತ್ತು ಬಾವಿಗಳನ್ನು ತೆಗೆಯುತ್ತಿದ್ದಾರೆ. ಈ ವರ್ಷ ನಮ್ಮ ಜಿಲ್ಲೆಯಲ್ಲಿ 1,200 ಬಾವಿಗಳ ಕೆಲಸ ಪ್ರಾರಂಭವಾಗಿದೆ. ಈಗಾಗಲೇ 300

ಬಾವಿಗಳ ಕೆಲಸ ಮುಗಿದಿದೆ. ಬಾಕಿಯವರೂ ಕೂಡ ಬಾವಿಗಳನ್ನು ತೆಗೆಯುತ್ತಿದ್ದಾರೆ. ಆದರೆ ಈಗ ರೈತನಿಗೆ ಬಾವಿ ತೆಗೆಯಲು ಹಣ ಕೊಡುವುದಕ್ಕೆ ಸರಿಯಾದ ವ್ಯವಸ್ಥೆ ಇಲ್ಲ. ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕಿನಲ್ಲಿ ಬಾವಿಗಳಿಗೆ ಹಣವನ್ನು ಕೊಡತಕ್ಕಾಂಥ ಏರ್ಪಾಡನ್ನು ಮಾಡಿರತಕ್ಕದ್ದು ಸುತ್ರಾಂ ಸರಿಯಿಲ್ಲ ಎಂದು ನನ್ನ ಅಭಿಪ್ರಾಯ. ಅಲ್ಲಿ ರೈತರ ರೆಕಾರ್ಡುಗಳನ್ನು ನೋಡುವುದಕ್ಕೆ ತಕ್ಕ ಸಿಬ್ಬಂದಿ ಇಲ್ಲ. ಅಲ್ಲಿಯೂ ಸಹ ರಾಜಕೀಯ ನಡೆಯುತ್ತಿದೆ. ಅಲ್ಲಿರತಕ್ಕ ಡೈರೆಕ್ಟರುಗಳು ಅಧಿಕಾರಿಗಳ ಹತ್ತಿರ ಬಂದು ಪ್ರಯತ್ನ ಮಾಡಿ ತಮ್ಮ ಪಕ್ಷದವರಿಗೆ ಹಣವನ್ನು ಕೊಡಿಸತಕ್ಕ ಒಂದು ಏರ್ಪಾಡು ನಡೆಯುತ್ತಿದೆ. ಆದ್ದರಿಂದ ಜಿಲ್ಲಾಧಿಕಾರಿಗಳ ಮೇಲ್ವಿಚಾರಣೆಯಲ್ಲಿ ತಾಲ್ಲೂಕು ಬೋರ್ಡಿನವರೇ ನೇರ ಹಣ ಕೊಡುವಂತೆ ಏರ್ಪಾಡು ಮಾಡಿದರೆ ಅದಷ್ಟು ಬೇಗ ರೈತರಿಗೆ ಹಣ ಸಿಕ್ಕುವುದಕ್ಕೆ ಅನುಕೂಲವಾಗುತ್ತದೆ. ಈಗ ನಮಗೆ ಶರಾವತಿಯಿಂದ ಬೇಕಾದಷ್ಟು ವಿದ್ಯುಚ್ಛಕ್ತಿಯೇನೋ ಬರುತ್ತಿದೆ. ಆದರೆ ಬಾವಿಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಲು ಬೇಕಾದಂತಹ ಸಾಮಾನು ಸರಂಜಾಮುಗಳಿಲ್ಲದೆ ಆ ಕೆಲಸ ಸರಿಯಾಗಿ ನಡೆಯುತ್ತಿಲ್ಲ. ಈಗ ನಮ್ಮ ಜಿಲ್ಲೆಯಲ್ಲಿ ಪ್ಯಾಕೇಜ್ ಯೋಜನೆ ನಡೆಯುತ್ತಿದೆ. ಅದನ್ನು ಯೋಜನಾಬದ್ಧವಾಗಿ, ಕ್ರಮಬದ್ಧವಾಗಿ ಕಾರ್ಯಗತಮಾಡುವುದಾದರೆ ಅದರಿಂದ ಬೆಳೆ ಒಳ್ಳೆಯ ರೀತಿಯಲ್ಲಿ ಬರುತ್ತದೆ. ನಾನು ಕಣ್ಣಾರೆ ಅದನ್ನ ನೋಡುತ್ತಿದ್ದೇನೆ. ಅದರಿಂದ ಪ್ರಯೋಜನ ಪಡೆದಿರತಕ್ಕ ಜನರನ್ನು ನಾನು ನೋಡಿದ್ದೇನೆ. ಆ ಯೋಜನೆಯಲ್ಲಿ ಒಳ್ಳೆಯ ಬೆಳೆ ಬರುತ್ತದೆ. ಅದನ್ನು ಮಾಡುವುದಕ್ಕೆ ತಕ್ಕ ಪ್ರೋತ್ಸಾಹವನ್ನು ಕೊಡತಕ್ಕದ್ದು ಸರ್ಕಾರದ ಆದ್ಯ ಕರ್ತವ್ಯ ಎಂದು ನಾನು ತಿಳಿದುಕೊಂಡಿದ್ದೇನೆ.

ಇನ್ನು ರಿಲೀಫ್ ಕಾಮಗಾರಿಗಳ ಬಗ್ಗೆ ಹೇಳುವುದಾದರೆ, ಅದಕ್ಕೆ ಸಿಕ್ಕಾಪಟ್ಟೆ ಹಣವನ್ನು ಖರ್ಚುಮಾಡುವುದಕ್ಕೆ ಬದಲಾಗಿ ಕೆರೆ, ಗೋಕಟ್ಟೆಗಳನ್ನು ಕಟ್ಟುವುದಕ್ಕೆ ಒಳ್ಳೆಯ ರೀತಿಯಲ್ಲಿ ಹಣವನ್ನು ಖರ್ಚುಮಾಡಿದರೆ ದನಕರುಗಳಿಗೆ ನೀರೂ ಸಿಕ್ಕುತ್ತದೆ ಮತ್ತು ಜನಗಳಿಗೂ ಅನುಕೂಲವಾಗುತ್ತದೆ, ಎಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ.

ಇನ್ನು ವಿದ್ಯಾಭ್ಯಾಸದ ವಿಚಾರದಲ್ಲಿ ಹೇಳುವುದಾದರೆ, ಮೊನ್ನೆ ತಾನೆ ನಮ್ಮ ವಿದ್ಯಾಮಂತ್ರಿಗಳು ಹೇಳಿದ್ದಾರೆ ಒಬ್ಬ ಉಪಾಧ್ಯಾಯರು 40-50 ಮಕ್ಕಳನ್ನು ನೋಡಿಕೊಳ್ಳಬಹುದು ಎಂದು ಇದು ಸುತ್ರಾಂ ಸರಿಯಿಲ್ಲದ ಕ್ರಮ. ಅದರಲ್ಲಿಯೂ ಪ್ರೈಮರಿ ಮತ್ತು ಸೆಕೆಂಡರಿ ವಿದ್ಯಾಭ್ಯಾಸದಲ್ಲಿ 25-30 ಮಕ್ಕಳ ಮೇಲೆ ಒಬ್ಬ ಉಪಾಧ್ಯಾಯರು ಪಾಠವನ್ನು ಹೇಳುವುದಕ್ಕೆ ಸಾಧ್ಯವಿಲ್ಲ. ಮತ್ತು ಮಕ್ಕಳಿಗೆ ಒಂದು ಉತ್ತಮವಾದ ವಿದ್ಯಾಭ್ಯಾಸ ದೊರೆಯದೆ ಅವರು ಪರೀಕ್ಷೆಯಲ್ಲಿ ಫೇಲಾಗುತ್ತಾರೆ. ಈಗ ಸ್ಕೂಲುಗಳಲ್ಲಿ ಓದುತ್ತಿರುವ ಮಕ್ಕಳಿಗೆ ಸರಿಯಾಗಿ ಕಾಗುಣಿತ ಹೇಳುವುದಕ್ಕೆ ಬರುವುದಿಲ್ಲ. ಈಗಿನ ಉಪಾಧ್ಯಾಯರುಗಳು ಎಸ್.ಎಸ್.ಎಲ್.ಸಿ. ಪರೀಕ್ಷೆಯನ್ನು ಪಾಸುಮಾಡಿಕೊಂಡಿರುತ್ತಾರೆ ಆದರೆ ಅವರಿಗೆ ಸರಿಯಾಗಿ 8ನೇ ಮಗ್ಗಿ 9ನೇ ಮಗ್ಗಿ ಬರುವುದಿಲ್ಲ. ಅವರಿಗೆ ಬೋರ್ಡಿನ ಮೇಲೆ ಸರಿಯಾಗಿ ಬರೆಯುವುದಕ್ಕೆ ಬರುವುದಿಲ್ಲ. ಇಂಥವರನ್ನು ಉಪಾಧ್ಯಾಯರನ್ನಾಗಿ ನೇಮಿಸಿಕೊಂಡು ಸ್ಕೂಲುಗಳಲ್ಲಿ ವಿದ್ಯಾಭ್ಯಾಸದ ಮಟ್ಟ ಕೆಳಗೆ ಇಳಿದಿದೆ. ಆದ್ದರಿಂದ ಉಪಾಧ್ಯಾಯರನ್ನು ನೇಮಕ ಮಾಡಿಕೊಳ್ಳುವಾಗ ಯಾವ ದಯೆ ದಾಕ್ಷಿಣ್ಯಗಳಿಗೂ ಒಳಗಾಗದೆ ತರಪೇತಿಯನ್ನು ಪಡೆದಿರತಕ್ಕಂಥ ದಕ್ಷರಾದ ಉಪಾಧ್ಯಾಯರನ್ನು ನೇಮಕ ಮಾಡಿಕೊಳ್ಳಬೇಕು. ಆ ವಿಚಾರದಲ್ಲಿ ಜಾತಿಯ ವಿವಾದವನ್ನು ತಂದು ಸರಿಯಾದ ಉಪಾಧ್ಯಾಯರನ್ನು ನೇಮಕ ಮಾಡಿಕೊಳ್ಳದಿದ್ದರೆ ನಮ್ಮ ಮಕ್ಕಳು ವಿದ್ಯಾವಂತರಾಗುವುದಿಲ್ಲ. ನಮ್ಮ ಸಂಸ್ಕೃತಿ ಹಾಳಾಗುತ್ತದೆ ಎಂದು ನಾನು ಹೇಳುತ್ತೇನೆ.

6-00 P. M.

ಇದರ ಜೊತೆಗೆ ನಾನು ಹೇಳುವುದು ಇಲ್ಲಿ ನಮ್ಮ ಮುಂದೆ ಕೆಲವು ಮನಿ ಬಿಲ್‌ಗಳನ್ನು ತಂದು ಇಟ್ಟಿದ್ದಾರೆ. ಅದರಲ್ಲಿ ಮುಖ್ಯವಾಗಿ 'ಲ್ಯಾಂಡ್ ಸರ್ ಚಾರ್ಜ್ ಬಿಲ್' ಎಂದು ತಂದು ಅದರಲ್ಲಿ ಒಂದಕ್ಕೆರಡು ಪಟ್ಟನಂತೆ ಎಂದರೆ ನೂರು ರೂಪಾಯಿ ಕಂದಾಯ ಇದ್ದರೆ 150 ರೂಪಾಯಿಗಳಷ್ಟು ಕೊಡಬೇಕೆಂದೂ, ಇದರ ಜೊತೆಗೆ ಎಜುಕೇಷನ್ನು ಮೇಲೆ ಶೇಕಡಾ ಇಪ್ಪತ್ತರಷ್ಟು ಎಂದು ಹಾಕಬೇಕೆಂದು ತಂದಿದ್ದಾರೆ. ಆದರೆ ನನಗನಿಸುವುದು ಇಷ್ಟೊಂದು ತೊಂದರೆ ಇರುವ ಕಾಲದಲ್ಲಿ ಹಳ್ಳಿಯಲ್ಲಿರುವ ರೈತರಿಗೆ ಶ್ರಮಬೀಳತಕ್ಕ ರೈತರಿಗೆ ಇಂತಹ ತೆರಿಗೆಗಳನ್ನು ಹಾಕಬೇಕೆಂದು ತರುವುದು ಸರಿಯಾಗಿಲ್ಲ. ಇದೇ ಸಂದರ್ಭದಲ್ಲಿ ಒಂದು ಗಾದೆ ಇಂಗ್ಲಿಷಿನಲ್ಲಿರುವುದು ಇಲ್ಲಿ ನೆನಪಿಗೆ ಬರುತ್ತದೆ; ಅದು

"When Rome was burning Neero was fiddling."

ಅದರಂತೆ ಈಗ ಹಳ್ಳಿಗಾಡಿನಲ್ಲಿರುವ ಬಡ ರೈತರ ಪರಿಸ್ಥಿತಿ ಬಹಳ ಕೆಟ್ಟುಹೋಗಿದೆ. ಇಂತಹವರಿಂದ ಸುಮಾರು ಏಳರಿಂದ ಹದಿಮೂರು ಕೋಟಿಯಷ್ಟು ಹಣ ಸಂಪಾದನೆ ಮಾಡಬೇಕೆಂದು ಹೊರ

(ಶ್ರೀ ಟಿ. ಎನ್. ಮಾದಪ್ಪ ಗೌಡ)

ಟಿರುವುದು ಸರಿಯಲ್ಲ. ಇದನ್ನು ಬೇರೆ ರೀತಿಯಲ್ಲಿ ಪಡೆಯಬಹುದು ಎಂದು ಮಾನ್ಯ ಸದಸ್ಯರಾದ ಶ್ರೀಮಾನ್ ಪುಟ್ಟಯ್ಯನವರು ಹೇಳಿದರು. ಅದು ಇನ್‌ಕಂ ಟ್ಯಾಕ್ಸ್ ಹಾಗೂ ಸೂಪರ್ ಟ್ಯಾಕ್ಸ್ ಎಂದು ಕೊಡುವಂತಹ ಜನರ ಮೇಲೆ ಹಾಕಬಹುದು. ಅಂತಹವರು ಕೊಡಲು ಶಕ್ತಿಯುಳ್ಳವರಾಗಿದ್ದಾರೆ. ಅದರಲ್ಲೂ ಎಷ್ಟೋ ಜನ ವರ್ತಕರು ತಮ್ಮ ವ್ಯಾಪಾರವನ್ನು ಫೋನಿನಲ್ಲಿ ಮಾಡಿಕೊಂಡು ಲಕ್ಷಾಂತರ ರೂಪಾಯಿಗಳಷ್ಟು ಸಂಪಾದನೆ ಮಾಡುತ್ತಿದ್ದಾರೆ. ಇಂತಹವರ ಮೇಲೆ ಹಾಕದೆ ಬಡ ಜನರ ಮೇಲೆ ಇಂತಹ ತೆರಿಗೆಯನ್ನು ಹಾಕಲು ಹೋಗಬೇಡಿ. ಇದೊಂದು ವಿಚಾರದಲ್ಲಿ ಸರಕಾರದವರು ದಯೆ ತೋರಿಸಿ ಇದರಿಂದ ಅವರಿಗೆ ಸೌಕರ್ಯಗಳನ್ನು ಮಾಡಿಕೊಟ್ಟಹಾಗಾಗುತ್ತದೆ ಎಂದು ಇಷ್ಟು ಹೇಳಿ ಇನ್ನೂ ಯಾವ ವಿಚಾರದಲ್ಲೇ ಆಗಲಿ ಈ ರಾಜ್ಯಪಾಲರ ಭಾಷಣ ಬಹುಮಟ್ಟಿಗೆ ಉತ್ತಮವಾದ ರೀತಿಯಲ್ಲಿ ಇಲ್ಲ ಎಂದು ಇದನ್ನು ನಾನು ವಿರೋಧಿಸಬೇಕಾಗಿದೆ. ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರನ್ನು ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಸಭೆ ಈಗ ಎದ್ದು ಮತ್ತೆ ನಾಳೆ ಒಂದು ಗಂಟೆಗೆ ಸೇರಲಿದೆ.

The House adjourned at Five Minutes past Six of the Clock to meet again at One of the Clock on Wednesday, the 2nd February 1966.

WD 6051—GPB—500—19-2-66